

ದೇವರ ನಾಮಕ್ಕೆ ಸ್ತೋತ್ರ

"ನಿನ್ನ ತೇಜಸ್ಸು ನಮಗೆ ಬೆಳಕು ಕೊಡುತ್ತದೆ" (ಕೀರ್ತನೆ : 36:9)

# ಯಾವುದು ಬೇಕು?

ಲೇಖಕರು:
ಪಾಸ್ಟರ್. ಪಿ.ತೇಜಸ್ಸ್

ದೇವರ ನಾಮಕ್ಕೆ ಸ್ತೋತ್ರ

“ಯಾವುದು ಬೇಕು”

ಲೇಖಕರು

ಭಾಸ್ಕರ್. ಸಹೋದರಿ: ಪಿ.ತೇಜಸ್ಸ್

ದೇವರ ನಾಮಕ್ಕೆ ಸ್ತೋತ್ರ

"ಯಾವುದು ಬೇಕು"

ಪುಸ್ತಕ-6,

ಮೊದಲನೆಯ ಮುದ್ರಿಕೆ : 2015

ಪ್ರತಿಗಳು : 5000

ಪುಟಗಳು: 64

ಓದಿರುವಿರಾ

1) ನಂಬಿಕೆಯ ರಹಸ್ಯ

2) ಅದ್ಭುತ ಸಾಕ್ಷಿ

3) ಪ್ರೀತಿಯ ಯಶಸ್ಸು

4) ಕಣ್ಣೀರಿನ ಕೂಗು

5) ನಾನು ನನ್ನ ಸರ್ವಸ್ವ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

ಫೋನ್ ನಂಬರ್ : 9900241593/988034611

“ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಈಗ ನಿಮಗೆ ಬೋಧಿಸುವ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತಸ್ಥಿತಿಗೆ ತರುವನು.”

(ಧರ್ಮೋ 28:1)

<u>ಅರ್ಪಣೆ</u>

“ಯಾವುದು ಬೇಕು” ಎನ್ನುವ ಈ ಪುಸ್ತಕವು
ನಿಮ್ಮ ಕೈ ತಲುಪುವಂತೆ ಮಾಡಿರುವಂತಹ
ನನ್ನ ಸೃಷ್ಟಿಕರ್ತನಾದ ನನ್ನ ಪ್ರಿಯ ಯೇಸುರಾಜನಿಗೆ
ನನ್ನ ಹೃದಯ ಪೂರ್ವಕವಾದ ಕೃತಜ್ಞತೆಗಳು

**ಪರಿಚಯ**

ಪ್ರೀತಿಯ ದೇವರ ಮಕ್ಕಳೇ,

ಯಾವುದು ಬೇಕು ಎನ್ನುವ ಈ ಪುಸ್ತಕದಿಂದ ನಿಮ್ಮನ್ನು ಪರಿಚಯಿಸಿ ಕೊಳ್ಳಲು ನನಗೆ ತುಂಬ ಸಂತೋಷವಾಗಿದೆ. ಸೃಷ್ಟಿ ಕರ್ತನನ್ನು ಪ್ರೀತಿಸಿ ಆತನ ಆಜ್ಞೆಗಳನ್ನು ಅನುಸರಿಸಿ ನಡೆಯಬೇಕೆಂದು ನಿಮಗೆ ತಿಳಿಸಿ ಕೊಡಲು ಪುಸ್ತಕದ ಮುಖಾಂತರ ಕರ್ತನು ನನಗೆ ಉತ್ತಮವಾದ ಮಾರ್ಗವನ್ನು ಮಾಡಿ ಕೊಟ್ಟಿದ್ದಾರೆ.

ಈ ಲೋಕದಲ್ಲಿ ಪ್ರತಿ ಮನುಷ್ಯನು ಜೀವಿಸುವಾಗ ಎರಡು ದಾರಿಗಳು ಆ ವ್ಯಕ್ತಿಯ ಮುಂದೆ ಯಾವಾಗಲೂ ಎದುರಾಗುತ್ತದೆ. ಆದರೆ ಯಾವುದೇ ವ್ಯಕ್ತಿಯಾದರೂ ಒಂದು ದಾರಿಯನ್ನು ಮಾತ್ರ ಆಯ್ಕೆಮಾಡಿಕೊಂಡು ಮುಂದೆ ಹೆಜ್ಜೆ ಇಡಲು ಸಾಧ್ಯ. ಆ ಆಯ್ಕೆಯು ಸರಿಯಾದ ಆಯ್ಕೆಯಾಗಿರುವುದಾದರೆ ಮಾತ್ರ ಖಂಡಿತವಾಗಿಯೂ ಆ ದಾರಿಯಲ್ಲಿ ಸಾಗುತ್ತಾ ಗುರಿಯನ್ನು ತಲುಪಿ ಸಂತೋಷ ಪಡಲು ಸಾಧ್ಯ ಮತ್ತು ಜೀವನದಲ್ಲಿ ಆಶೀರ್ವಾದವನ್ನು ಹೊಂದಿಕೊಳ್ಳಲು ಸಾಧ್ಯ.

ಒಂದು ವೇಳೆ ತಪ್ಪಾದ ಆಯ್ಕೆಯಾಗಿದ್ದರೆ ಅಂತವರ ಜೀವನದಲ್ಲಿ ಯಾವಾಗಲೂ ಜಿಗುಪ್ಸೆಯೇ ತುಂಬಿರುತ್ತದೆ. ಬೇಸರಿಕೆಯ ಮಾತುಗಳೇ ತುಂಬಿರುತ್ತದೆ. ಅಷ್ಟೇ ಅಲ್ಲದೇ ಅವರ ಬಳಿಯಲ್ಲಿ ಯಾರೇ ಮಾತನಾಡುವುದಾದರೂ ಅವರ ಹಾಗೇಯೇ ನಿರಾಸೆಯಾಗುತ್ತಾರೆಯೇ ಹೊರತು ಸಂತೋಷಿಸಲು ಸಾಧ್ಯವೇ ಇಲ್ಲ. ತಪ್ಪಾದ ಆಯ್ಕೆಯಿಂದ ಎಷ್ಟೋ ಹಾನಿಯುಂಟಾಗುತ್ತದೆ.

ಗಮನಿಸು

ನನ್ನ ಕರ್ತನು ಬಹಳ ಜ್ಞಾನವಂತನಾದ ಕಾರಣ ಪ್ರತಿ ಮನುಷ್ಯನ ಮುಂದೆ ಎರಡು ದಾರಿಗಳನ್ನು ಇಟ್ಟು 'ಯಾವುದು ಬೇಕು?" ಆರಿಸಿಕೋ! ಎಂದಿದ್ದಾನೆ. ಒಂದು 'ಜೀವದ ಮಾರ್ಗ' ಮತ್ತೊಂದು 'ಮರಣದ ಮಾರ್ಗ.' ಈ ಪುಸ್ತಕವು ನಿನಗೆ ಈ ಎರಡು ದಾರಿಗಳ ವಿಷಯವನ್ನು ಅರ್ಥವಾಗುವ ರೀತಿಯಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ. ನೀನು ಸರಿಯಾಗಿ

ಅರ್ಥಮಾಡಿಕೊಳ್ಳುವುದಾದರೆ ಮಾತ್ರ ನಿನ್ನ ಜೀವನಕ್ಕೆ ಅವಶ್ಯಕತೆ ಇರುವ ದಾರಿಯನ್ನು ನೀನು ಆಯ್ಕೆಮಾಡಿಕೊಳ್ಳುತ್ತೀಯ. ನಿನ್ನ ಆಯ್ಕೆಯು ಸರಿಯಾದ ಪಕ್ಷಕ್ಕೆ ಕತ್ರನು ನಿನಗೆ ಸಹಾಯ ಮಾಡುತ್ತಾನೆ. "ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ" (ಕೀರ್ತನೆ 34:17)

ಈ ಲೋಕದಲ್ಲಿ ಯಾವ ಮಾರ್ಗವನ್ನು ಅನುಸರಿಸುವುದಾದರೆ ಕನಸು ಇಟ್ಟಿರುವ ಆಶೀರ್ವಾದ ಹೊಂದಿಕೊಳ್ಳಲು ಸಾಧ್ಯ ಮತ್ತು ಸಮಾಧಾನವಾಗಿ ಜೀವಿಸಿ ದೀರ್ಘಾಯುಸ್ಸಿನಿಂದ ಈ ಲೋಕದಲ್ಲಿ ಬಾಳಿ ಕತರ್ಶನ ರಾಜ್ಯ ಸೇರಬಹುದು ಎಂದು ಈ ಪುಸ್ತಕವು ನಿನಗೆ ತಿಳಿಸಿಕೊಡುತ್ತದೆ. ಇದನ್ನು ಓದಿ ಸರಿಯಾಗಿ ಅರ್ಥಮಾಡಿಕೊಂಡು, ನಿನ್ನ ಜೀವನದಲ್ಲಿ ಅಳವಡಿಸಿಕೊಂಡು, ಜೀವನವನ್ನು ಹೊಸದಾಗಿ ರೂಪಿಸಿಕೊಂಡು, ಎಲ್ಲೆಲ್ಲಿ ನಿನ್ನನ್ನು ನೀನು ಮಾರ್ಪಡಿಸಿಕೊಳ್ಳ ಬೇಕೋ ಅಲ್ಲಲ್ಲಿ ಮಾರ್ಪಡಿಸಿಕೊಂಡು ಕರ್ತನು ನಿನಗಾಗಿ ಇಟ್ಟಿರುವ ಸಕಲ ಆಶೀರ್ವಾದಕ್ಕೆ ನೆಲೆಯಾಗಿ ನಿಲ್ಲುವಂತೆ ಕರ್ತನು ನಿನ್ನನ್ನು ಅನುಗ್ರಹಿಸಲಿ.

ನಿನ್ನ ಸಮಯವು ಭೂಮಿಯಲ್ಲಿ ಸ್ವಲ್ಪ ಕಾಲ ಮಾತ್ರ ಉಳಿದಿದೆ ಎಂದು ನೀನು ಮರೆಯಬೇಡ, ಕಾಲವು ದಿನಗಳೂ ವರುಷಗಳು ಬೇಗಬೇಗನೇ ಉರುಳಿ ಹೋಗುತ್ತಿದೆ. ನಿನ್ನ ಸಮಯ ಭೂಮಿಯಲ್ಲಿ ಯಾವುದಕ್ಕೋಸ್ಕರ ಕಳೆಯುತ್ತಿರುವೆ ಎಂದು ಆಲೋಚಿಸು. ಸರಿಯಾದ ಆಯ್ಕೆಯೇ ನಿನಗೆ ಪ್ರತಿಯೊಂದು ಮಂಡಲದಲ್ಲಿ ಇರಬೇಕು. ನಿನಗೆ ಈ ಲೋಕದಲ್ಲಿ 'ಯಾವುದು ಬೇಕು.' ಎಂದು ನೀನು ತಿಳಿದುಕೊಳ್ಳಲೇ ಬೇಕು. ಈ ಪುಸ್ತಕವು. ನಿನಗೆ 'ಯಾವುದು ಬೇಕು' ನಿನಗೆ ಏನು ಅವಶ್ಯವಿದೆ ಎನ್ನುವುದನ್ನು ತಿಳಿಸಲು ಬಹಳಷ್ಟು ಸಹಾಯಮಾಡುತ್ತದೆ. ಆದರೆ ಸಂಪೂರ್ಣವಾಗಿ ನಿನಗೆ 'ಯಾವುದು ಬೇಕು' ನೀನು ಕರ್ತನ ಬಳಿಯಲ್ಲಿ ನ್ಯಾಯಾಸನದ ಮುಂದೆ ನಿಲ್ಲಲು ನಿನಗೆ ಏನು ಅವಶ್ಯಕತೆ ಎಂದು ನೀನು ತಿಳಿಯಬೇಕಾದರೆ ಸತ್ಯವೇದವನ್ನು ಪ್ರತಿದಿನವು ಎಡಬಿಡದೆ ಓದಬೇಕೆಂದು ಸಲಹೆ ಕೊಡಲು ಇಷ್ಟಪಡುತ್ತೇನೆ.

ದೇವರು ನಿನಗೆ ಪರಲೋಕದಿಂದ ಸಹಾಯಮಾಡಲಿ ಎಂದು ಮನಃಪೂರ್ವಕವಾಗಿ ಹಾರೈಸುವ.

ಕರ್ತನಲ್ಲಿ ಪ್ರೀತಿಯ ಸೇವಕಿ

ಪಿ.ತೇಜಸ್ಸ್

**ಪೀಠಿಕೆ**


1. ನಿನ್ನ ಸ್ಥಿತಿ ಬದಲಾವಣೆ ...7

2. ನಿನ್ನ ಶತ್ರುವಿಗೆ ಸೋಲು ...14

3. ನಿನ್ನ ದೇಶದಲ್ಲಿ ಅಭಿವೃದ್ಧಿ ... 23

4. ನಿನ್ನ ಹೃದಯದಲ್ಲಿ ಯೇಸು ... 31

5. ನಿನ್ನ ಜೀವನ ಅಭಿವೃದ್ಧಿ ... 39

6. ನಿನ್ನಲ್ಲಿ ಸಾಲ ಇರುವುದಿಲ್ಲ .. 47

7. ದೇವರ ಸ್ವಾರುಪ್ಯ ..56

8. ನೀನು ಇದನ್ನು ತಿಳಿದಿಕೋ ... 62

# 1. ನಿನ್ನ ಸ್ಥಿತಿ ಬದಲಾವಣೆ

"ನಿಮಗೆ ಊರಿನಲ್ಲಿಯೂ ಅಡವಿಯಲ್ಲಿಯೂ ಶುಭವುಂಟಾಗುವುದು. ನಿಮ್ಮ ಸಂತಾನ ವ್ಯವಸಾಯಗಳಿಗೂ ಧನಕುರಿ ಮುಂತಾದ ಪಶುಗಳಿಗೂ ಶುಭವುಂಟಾಗುವುದು. ನಿಮ್ಮ ಪುಟ್ಟಿಗಳಿಗೂ ಕೊಣವಿಕಗೆಗಳಿಗೂ ಶುಭವುಂಟಾಗುವುದು. ನೀವು ಕೆಲಸಕ್ಕೆ ಹೋಗುವಾಗಲೂ ಬರುವಾಗಲೂ ಶುಭವುಂಟಾಗುವುದು. ( ಧರ್ಮೋ 28:3-6)

ಈ ವಾಕ್ಯವು ದೇವರು ನಿನಗೆ ಕೊಟ್ಟಿರುವ ಉತ್ತಮವಾದ ಆಶೀರ್ವಾದವನ್ನು ಸೂಚಿಸುತ್ತದೆ.

**ನೀನು ಆಶೀರ್ವಾದ ನಿಧಿಯಾಗಬೇಕು:**

ಪ್ರೀತಿಯ ದೇವರ ಮಗುವೇ, ದೇವರ ಮಗುವಾದ ನೀನು ಆಶೀರ್ವಾದ ನಿಧಿಯಾಗಬೇಕೆಂದು ಕರ್ತನು ಆಶೆ ಪಡುತ್ತಾರೆ. ನಿನ್ನ ಆದಾಯದಲ್ಲೂ, ಕುಟುಂಬದಲ್ಲೂ ಕರ್ತನಿಂದ ಶುಭವನ್ನು ಹೊಂದಿಕೊಳ್ಳ ಬೇಕೆಂದು ಕರ್ತನು ಆಶೆ ಪಡುತ್ತಾನೆ. ತಾನು ಸೃಷ್ಟಿಮಾಡಿರುವುದನ್ನೆಲ್ಲಾ ನೀನು ಹೊಂದಿಕೊಂಡು ನಿನಗೆ ಶುಭವಾಗಬೇಕೆಂದು ಆತನು ಆಶಿಸುತ್ತಾನೆ. ಆದರೆ ಕರ್ತನು ನಿನಗೆ ಕೊಟ್ಟಿರುವ ಆಶೀರ್ವಾದವನ್ನು ನೀನು ಹೊಂದಿಕೊಳ್ಳಬೇಕಾದರೆ ಅದಕ್ಕೆ ತಕ್ಕ ಯೋಗ್ಯತೆಯನ್ನು ಸಹಾ ನೀನು ಹೊಂದಿಕೊಳ್ಳಬೇಕು. ಆಗಲೇ ಆತನಿಂದ ಬರುವ ಎಲ್ಲಾ 'ಶುಭ'ಗಳಲ್ಲಿ ನೀನು ಪಾಲುಹೊಂದಿಕೊಳ್ಳಲು ಸಾಧ್ಯವಾಗುತ್ತದೆ.

**ದುಷ್ಟ ಹವ್ಯಾಸಗಳನ್ನು ಬಿಡಬೇಕು:**

ಈ ಲೋಕದಲ್ಲಿ ಪ್ರತಿಮನುಷ್ಯನೂ ಯಾವುದೋ ಒಂದು ದುಷ್ಟ ಹವ್ಯಾಸದಲ್ಲಿ ಸಿಲುಕಿಕೊಂಡಿರುತ್ತಾನೆ. ಜೂಜಾಟ-ಕಚ್ಚಾಟ-ರೇಸ್-ಇಸ್ಪೇಟ್–ಪಾನ್ ಪರಾಗ್-ಹೆಂಡ-ಬೀಡಿ-ಸಿಗರೇಟ್-ಭೂಜ್-ಗಾಂಜಾ-ಡ್ರಗ್ಸ್-ಎಲೆ,ಅಡಿಕೆ ಹೂಂ! ಇನ್ನೂ ಏನು ಬೇಕು ಒಂದು ಮನುಷ್ಯನ ಶರೀರ ಹಾಳು ಮಾಡಲು ಇಂತಹ ಮಾರ್ಗಗಳು ಈ ಲೋಕದಲ್ಲಿ ಇನ್ನೂ ಅನೇಕವಿದೆ.

ಇದೆಲ್ಲಾ ದುರಾತ್ಮನ ಸ್ವಭಾವಗಳು ಒಂದು ವೇಳೆ ನೀನು ಇಂತಹ ಹೀನಸ್ಥಿತಿಯಲ್ಲಿ ಇರುವುದಾದರೆ ಇದು ಬಹಳ ಕೆಳಮಟ್ಟವಾದ ಸ್ಥಿತಿಯಾಗಿದೆ, ಇದರಿಂದ ಹೊರ ಬರುವುದಕ್ಕೆ ನೀನು ಪ್ರಯಾಸಪಡು,

ಇಲ್ಲದಿದ್ದರೆ ನೀನು ಶಿಕ್ಷೆಯನ್ನು ಈ ಭೂಮಿಯಲ್ಲಿ ಖಂಡಿತವಾಗಿ ಅನುಭವಿಸಲೇಬೇಕು ಮತ್ತು ನರಕದಲ್ಲಿಯೂ ನಿತ್ಯ-ನಿತ್ಯಕ್ಕೂ ಅನುಭವಿಸಲೇಬೇಕು, "ಶರಿರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ". (ರೋಮಾ 8:5)

ನಿನ್ನ ಮನಸ್ಸು ನಿನ್ನ ಶರೀರವು ಹೇಳುವ ಮಾತನ್ನು ಮಾತ್ರ ಕೇಳುತ್ತಿದೆಯಾ? ಹಾಗಾದರೆ ನೀನು ಬಹು ಶಿಕ್ಷೆಯನ್ನು ಇನ್ನೂ ನಿನ್ನ ಶರೀರದಲ್ಲಿ ಅನುಭವಿಸುತ್ತೀಯಾ, "ಯಾಕೆಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು; ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ ಒಳಪಡುವದಕ್ಕಾಗುವದೂ ಇಲ್ಲ ಶರೀರಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು"

(ರೋಮಾ 8:7)

ನಿನ್ನ ಸ್ಥಿತಿಯನ್ನು ದಯವಿಟ್ಟು ನೀನು ಬದಲಾಯಿಸಿಕೊ ಇಲ್ಲದಿದ್ದರೆ, ನೀನು ಕರ್ತನ ಆಶೀರ್ವಾದವನ್ನು ಹೊಂದಿಕೊಳ್ಳಲು ಸಾಧ್ಯವೇ ಇಲ್ಲ. ನಿನಗೆ 'ಯಾವುದು ಬೇಕು' ಪರಿಶುದ್ಧತೆಯೋ ಅಥವಾ ಅಲ್ಪ ಕಾಲ, ನಿನ್ನನ್ನು ಸಂತೋಷಪಡಿಸುವ ಈ ದುಷ್ಟ ಹವ್ಯಾಸಗಳೋ? ತೀರ್ಮಾನ ನಿನ್ನದಾಗಿದೆ. ನಿನ್ನ ಪರವಾಗಿ ಯಾರು ತೀರ್ಮಾನ ತೆಗೆದುಕೊಂಡರೂ ಅದು ಪ್ರಯೋಜನವಿಲ್ಲ. ನಿನ್ನ ಪರವಾಗಿ ನಿನ್ನ ಮನಸ್ಸೇ ತೀರ್ಮಾನ ತೆಗೆದುಕೊಳ್ಳಬೇಕು. ಆಗಲೇ ಈಗ ನೀನಿರುವ ಸ್ಥಿತಿಯನ್ನು ಅರ್ಥಮಾಡಿಕೊಂಡು ಉತ್ತಮವಾದ ಹಂತಕ್ಕೆ ನಿನಗೆ ಹೋಗಲು ಸಾಧ್ಯವಾಗುತ್ತದೆ. ಕರ್ತನು ನಿನಗಿಟ್ಟಿರುವ ಎಲ್ಲಾ 'ಶುಭ'ವೂ ನಿನ್ನನ್ನು ಹಿಂಬಾಲಿಸಲು ಸಾಧ್ಯ. ನಿನ್ನ ದುಷ್ಟ ಚಟಗಳಿಂದ ನೀನು ಬಿಡುಗಡೆಯನ್ನು ಹೊಂದಿಕೊಳ್ಳದಿದ್ದರೆ ನೀನು 'ಅಶುಭ'ವನ್ನೇ ಹೊಂದಿಕೊಳ್ಳುತ್ತೀಯಾ. ನಿನಗೆ 'ಯಾವುದು ಬೇಕು?' ಶುಭವೋ? ಅಶುಭವೋ?

## ಹೀನವಾದ ಸ್ಥಿತಿಯಲ್ಲಿರುವೆಯಾ ಬದಲಾಗು

"ಒಂದು ವೇಳೆ ನೀನು ಮನೆಬಿಟ್ಟು ಬಂದಿರುವುದಾದರೆ ನಿನ್ನ ಸ್ಥಿತಿ ಬೀದಿಯಲ್ಲಿ ಮನೆಯಿಲ್ಲದೆ ಅಲೆದಾಡುತ್ತಿರುವುದಾದರೆ, ಭಿಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಳ್ಳುವುದು ಇಷ್ಟವಿಲ್ಲದೆ ಕಳ್ಳತನ ಮಾಡುವುದು. ಅದರಿಂದ ಚೆನ್ನಾಗಿ ತಿಂದು, ಕುಡಿದು ಬೀದಿಯಲ್ಲಿ ಮಲಗುವುದು, ದಾರಿಯಲ್ಲಿ ಸಿಕ್ಕುವ ಕೆಟ್ಟ-ಕಟ್ಟ ಸ್ನೇಹಿತರ ಸಹವಾಸ ಮಾಡಿಕೊಳ್ಳುವುದು, ಅವರ ಜೊತೆಯಲ್ಲಿ ಸೇರಿಕೊಂಡು ಜೂಜಾಟ ಆಡುವುದು, ಬೇರೆಯವರನ್ನ ಬೆದರಿಸಿ ಹಣ ವಸೂಲಿ ಮಾಡಿ ಅದರಿಂದ ಬಾಡಿಗೆ ಮನೆ ಮಾಡಿ ನಿನ್ನ ಇಷ್ಟದ ಪ್ರಕಾರ ನಡೆಯುವುದು ನಿನ್ನ ಜೀವನವಾಗಿದೆಯಾ!" ಇದೆಲ್ಲಾ ಎಂತಹ ಹೀನಾಯವಾದ ಪರಿಸ್ಥಿತಿ ಎಂದು ನಿನಗೆ ಅನಿಸುವುದಿಲ್ಲವೇ ಈ ಸ್ಥಿತಿಯಿಂದ ನೀನು ಬದಲಾವಣೆಯಾಗದಿದ್ದರೆ ಈ ಪ್ರಪಂಚದಲ್ಲಿ ಹುಟ್ಟಿ ವ್ಯರ್ಥವೇ ಎಂದು ತಿಳಿದಿಕೋ.

ಐಶ್ವರ್ಯವಂತರಾದ ಕೆಲವರು "ಸುಳ್ಳು ಹೇಳಿ ಪ್ರೀತಿ ಮಾಡುವುದು, ಒಳ್ಳೆ ವಸ್ತ್ರಗಳನ್ನು ಹಾಕಿಕೊಂಡು ಪ್ರೀತಿ-ಮಾತಿನಿಂದ ಮೋಸ ಮಾಡುವುದು. ತಂದೆ-ತಾಯಿ ಸಂಪಾದನೆ ಮಾಡಿರುವ ಎಲ್ಲಾ ಆಸ್ತಿಯನ್ನ ಹಾಳುಮಾಡಿಕೊಂಡು ಇಷ್ಟಬಂದ ರೀತಿಯಲ್ಲಿ ನಡೆಯುವುದು. ಟಿ.ವಿ ನೋಡುವುದು ಮಾಲ್‌ಗಳಿಗೆ ಹೋಗಿ ದುಂದುವೆಚ್ಚಮಾಡುವುದು. ದುರಹಾಂಕಾರವಾಗಿ ನಡೆಯುವುದು. ಇದೂ ಸಹ ನಿಜವಾದ ಹೀನಸ್ಥಿತಿಯಲ್ಲವೇ!" ಇದೆಲ್ಲವನ್ನೂ ನೀನು ಬೆಳೆಸಿಕೊಂಡು ಬರುತ್ತಿರುವ ಕಾರಣ ನೀನು ದೇವರು ಕೊಡುವ ಆಶೀರ್ವಾದಕ್ಕೆ ಅನ್ಯ ವ್ಯಕ್ತಿಯಾಗಿದ್ದೀಯೆಂದು ತಿಳುದುಕೋ, ದುಷ್ಟರಿಗೆ ಶಿಕ್ಷೆ ಇದ್ದೇ ಇರುತ್ತದೆ. "ದುಷ್ಟರೋ ಹಾಗಲ್ಲ; ಗಾಳಿ ಬಡುಕೊಂಡು ಹೋಗುವ ಹೊಟ್ಟೆನಂತಿದ್ದಾರೆ." (ಕೀರ್ತನೆ 1:4)

ಎಷ್ಟೋ ಪುಸ್ತಕಗಳನ್ನು ಓದಿದರೂ ನಿನಗೆ ಮಾರ್ಪಡುವ ಮನಸ್ಸು ಬರದಿದ್ದರೆ ಅಥವಾ ನಿನಗೆ ಬುದ್ದಿ ಹೇಳುವ ಆತ್ಮೀಕ ವ್ಯಕ್ತಿಗಳ ಮಾತುಗಳನ್ನು ಕೇಳದಿದ್ದರೆ ಕರ್ತನು ಹೇಳುತ್ತಾನೆ. "ನನ್ನ ಗದರಿಕೆಯನ್ನು ಕೇಳಿ ತಿರುಗಿಕೊಳ್ಳಿರಿ; ಇಗೋ ನಿಮ್ಮ ಮೇಲೆ ನನ್ನ ಆತ್ಮವನ್ನು ಸುರಿಸಿ ನನ್ನ ಮಾತುಗಳನ್ನು ನಿಮಗೆ ತಿಳಿಯಪಡಿಸುವೆನು. ನಾನು ಕರೆದಾಗ ನೀವು ತಿರಸ್ಕರಿಸಿದಿರಿ. ಕೈ ಚಾಚಿದರೂ ಯಾರೂ ಗಮನಿಸಲಿಲ್ಲ; ನನ್ನ ಬುದ್ದಿವಾದವನ್ನು ಲಕ್ಷ್ಯಕ್ಕೆ ತಾರದೆ ನನ್ನ ತಿದ್ದುಪಾಟನ್ನು ಬೇಡವೆಂದು ತಳ್ಳಿಬಿಟ್ಟಿದ್ದೀರಿ. ಆದಕಾರಣ ಬಿರುಗಾಳಿಯಂತೆ ಅಪಾಯವೂ ತುಫಾನಿನಂತೆ ಆಪತ್ತೂ ಬಂದು ನಿಮಗೆ ಶ್ರಮಸಂಕಟಗಳು ಸಂಭವಿಸುವಾಗ ನಿಮ್ಮಅಪಾಯದಲ್ಲಿ ನಾನೂ ನಗುವೆನು; ನಿಮ್ಮ ಆಪತ್ತಿನಲ್ಲಿ ಪರಿಹಾಸ್ಯ ಮಾಡುವೆನು. ಆಗ ಅವರು ನನಗೆ ಮೊರೆಯಿಟ್ಟರೂ ನಾನು ಉತ್ತರಕೊಡೆನು. ನನ್ನನ್ನು ಆತುರದಿಂದ ಹುಡುಕಿದರೂ ನಾನು ಕಾಣಿಸೆನು. ಯಾಕೆಂದರೆ ಯೆಹೋವನ ಭಯ-ಭಕ್ತಿಗೆ ಮನಸ್ಸಿಲ್ಲದೆ ತಿಳುವಳಿಕೆಯನ್ನು ಹಗೆ ಮಾಡಿದರು. ನನ್ನ ಆಲೋಚನೆಯನ್ನು ಕೇಳಲೊಲ್ಲದೆ ನನ್ನ ಗದರಿಕೆಯನ್ನೆಲ್ಲಾ ತಾತ್ಸಾರಮಾಡಿದರು. ಆದದರಿಂದ ಅವರು ತಮ್ಮ ನಡತೆಯ ಫಲವನ್ನು

ಅನುಭವಿಸಿ ಸ್ವಂತ ಕುಯುಕ್ತಿಗಳನ್ನೇ ಹೊಟ್ಟೆತುಂಬಾ ಉಣ್ಣಬೇಕಾಗುವದು. ಮೂಢನು ತಮ್ಮ ಉದಾಸೀನತೆಯಿಂದಲೇ ಹತರಾಗುವರು. ಜ್ಞಾನಹೀನರು ತಮ್ಮ ನಿಶ್ಚಿಂತೆಯಿಂದಲೇ ನಾಶವಾಗುವರು." (ಜ್ಞಾನೋ 1:23-32), ಕರ್ತನ ಮಾತಿಗೆ ಕಿವಿಗೊಡದಿದ್ದರೆ ಇದು ಸಹ ಹೀನಾಯವಾದ ಸ್ಥಿತಿಯಾಗಿದೆ. ಖಂಡಿತವಾಗಿ ಕರ್ತನು ಅಂತವರ ಪ್ರಾರ್ಥನೆಗೆ ಕಿವಿಗೊಡುವುದೂ ಇಲ್ಲ, ಅವರ ಕಷ್ಟಗಳಿಂದ ಅವರನ್ನು ಪಾರು ಮಾಡುವುದೂ ಇಲ್ಲ.

ಕರ್ತನನ್ನು ತಾತ್ಸಾರ ಮಾಡುತ್ತಾ, ಆತನ ಮಾತನ್ನು ಅಸಡ್ಡೆ ಮಾಡುವಂತಹ ವ್ಯಕ್ತಿಗೆ ವಾಸಮಾಡುವದಕ್ಕೆ ಮನೆಯಿರುವುದಿಲ್ಲ, ಒಂದು ವೇಳೆ ಮನೆಯಿದ್ದರೆ, ವ್ಯವಸಾಯದಲ್ಲಿ ಅಭಿವೃದ್ಧಿಯಿರುವುದಿಲ್ಲ ಅಥವಾ ಕುಟುಂಬದಲ್ಲಿ ಸಂತಾನವಿಲ್ಲ. ಎಲ್ಲವೂ ಇದ್ದರೆ ನೆಮ್ಮದಿ ಇಲ್ಲದೇ ಎಲ್ಲಾ ವ್ಯರ್ಥವಾಗಿ ಜೀವನ ಕಳೆದು ಹೋಗುತ್ತದೆ. ಕಾರಣ ಯೇಸುವಿನ ಜ್ಞಾನವನ್ನು ಅಸಡ್ಡೆ ಮಾಡುತ್ತಿರುವುದೇ.

ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಂಡು ಆತನು ಹೇಳುವ ಆಜ್ಞೆಗಳನ್ನು ಕೈಕೊಂಡು ನಡೆದರೆ ಮತ್ತು ಕರ್ತನ ಜ್ಞಾನವೂ ಬೆಳವಣಿಗೆಯಾದರೆ ಒಳ್ಳೇ ಮನೆಯಲ್ಲಿ ವಾಸಮಾಡಲು, ಉತ್ತಮವಾದ ಸಂಬಳ ಪಡೆದುಕೊಂಡು ಕುಟುಂಬದೊಟ್ಟಿಗೆ ಸಂತೋಷವಾಗಿ ನೆಮ್ಮದಿಯಿಂದ ತೃಪ್ತಿಪಡಲೂ ಸಾಧ್ಯವಾಗುತ್ತದೆ ಮತ್ತು ಅಂತಹ ವ್ಯಕ್ತಿ ವಾಸಿಸುವ ಸ್ಥಳದಲ್ಲಿ ಎಲ್ಲ ಶುಭವೂ ಉಂಟಾಗುತ್ತದೆ.

ನೀನು ಈಗ ಇರುವ ಸ್ಥಿತಿ ಬದಲಾಗಬೇಕು ಎಂದರೇ ಯೇಸುವಲ್ಲಿ ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಯಾವಾಗಲೂ ಸಭೆಗೆ ಹೋಗಬೇಕು. ಆತನು ಕಲಿಸಿಕೊಡುವ ವಾಕ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಿನಗೆ ಅವಶ್ಯವಿರುವುದೆಲ್ಲಾ ಆತನ ಬಳಿ ಕೇಳಿಕೊಳ್ಳಬೇಕು, ನಿನ್ನ ಈ ಪರಿಸ್ಥಿತಿಯನ್ನು ಬದಲಾಯಿಸಲು ಯೇಸು ಕ್ರಿಸ್ತನಿಗೆ ಮಾತ್ರವೇ ಸಾಧ್ಯ. ಆತನಿಂದಲೇ ಎಲ್ಲವೂ ಆಗುತ್ತದೆ. ಯಾಕೆಂದರೆ ನಿನ್ನನ್ನು ರಕ್ಷಿಸಿ ಕಾಪಾಡುವ ದೇವರು ಆತನೇ ಆಗಿದ್ದಾನೆ, ನೀನು ಎಡೆಬಿಡದೇ ಆತನಲ್ಲಿ ಕೇಳು ನಿನ್ನ ಸ್ಥಿತಿಯನ್ನು ಬದಲಾಯಿಸುತ್ತಾನೆ. ಕೇಳದಿದ್ದರೆ ಈಗ ಇರುವ ಸ್ಥಿತಿಯಲ್ಲೇ ಇರುತ್ತೀಯಾ ನಿನಗೆ 'ಯಾವುದು ಬೇಕು' ಇದ್ದ ಸ್ಥಿತಿಯಲ್ಲಿ ಇರಬೇಕಾ ಅಥವಾ ಬದಲಾಗಬೇಕಾ? ನೀನೇ ತೀರ್ಮಾನ ಮಾಡಿಕೊ.

**ಕರ್ತನು ನಿನಗಾಗಿ ಕಾದಿದ್ದಾನೆ**

"ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನೂ ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿ ಭೂಮಂಡಲದಲ್ಲೆಲ್ಲಾ ವಾಸ ಮಾಡಿ ಒಂದು ವೇಳೆ ಅವರು ತಡವಾಡಿ ಕಂಡು ಕೊಂಡಾರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು." (ಅ.ಕೃ 17:26,27) ನೀನು ಒಂದು ಊರಿನಲ್ಲಿ ವಾಸ ಮಾಡಬೇಕೆಂದರೆ ಮನೆ ಅವಶ್ಯವಾಗಿದೆ. ಆ ಮನೆ ಸಿಗಬೇಕೆಂದರೆ ಸ್ಥಳ ಅವಶ್ಯಕತೆ ಇದೆ, ಸ್ಥಳ ಬೇಕೆಂದರೆ ಹಣ ಮುಖ್ಯವಾಗಿ ಬೇಕು ಈ ಹಣ ಬೇಕೆಂದರೆ ಸಂಪಾದನೆ ಮಾಡಬೇಕು. ಸಂಪಾದನೆ ಮಾಡುವುದಕ್ಕೆ ಕೆಲಸಬೇಕು. ನಿನ್ನನ್ನು ಬಹಳವಾಗಿ ಪ್ರೀತಿ ಮಾಡುವ ಕರ್ತನು ಇವೆಲ್ಲಕ್ಕೂ ನಿನಗೆ ಸಹಾಯ ಮಾಡುವುದಕ್ಕೆ ಎಲ್ಲವನ್ನು ನಿನಗೆ ಮೊದಲೇ ಸೃಷ್ಟಿಮಾಡಿ ಇಟ್ಟಿದ್ದಾನೆಂದು ಗ್ರಹಿಸಿಕೊಳ್ಳಿರಿ. ಕರ್ತನು ಕೊಟ್ಟಿರುವ ಎಲ್ಲಾ ಆಜ್ಞೆಗಳನ್ನು ನೀನು ಅನುಸರಿಸುವುದಾದರೆ ಈ ಎಲ್ಲಾ ಆಶೀರ್ವಾದದಲ್ಲಿ ನೀನು ನೆಲೆಗೊಳ್ಳುತ್ತೀಯಾ ಮತ್ತು ಇವೆಲ್ಲಾ ಆಶೀರ್ವಾದಗಳು ನಿನ್ನನ್ನು ಬಿಟ್ಟು ಹೋಗುವುದಿಲ್ಲ. ಆತನ

ಆಜ್ಞೆಗಳನ್ನು ಅನುಸರಿಸುವುದರಲ್ಲಿ ನೀನು ಏರು-ಪೇರು ಮಾಡುತ್ತಿರುವುದಾದರೆ, ನಿನಗೆ ಆಶೀರ್ವಾದವೂ ಏರಿಳಿತವಾಗುತ್ತದೆ ಎಂದು ತಿಳಿದಿಕೋ.

ನಿನಗೆ ಇವೆಲ್ಲಾ ಅನುಕೂಲವನ್ನು ದೇವರು ಮೊದಲೇ ಮಾಡಿ ಕೊಟ್ಟಿದ್ದಾರೆ ಎನ್ನುವದಾದರೆ ಕರ್ತನನ್ನು ನೀನು ಮರೆತು ಜೀವಿಸ ಬೇಡ. ಈ ಹೊತ್ತು ನೀನು ಇರುವ ಸ್ಥಿತಿಯಲ್ಲಿಯೇ ತೃಪ್ತಿಪಡಬೇಡ ನಿನ್ನ ಸ್ಥಿತಿಯೂ ಇನ್ನೂ ಉತ್ತಮವಾದ ಸ್ಥಾನಕ್ಕೆ ಬದಲಾವಣೆಯಾಗಲೇ ಬೇಕು. ಏಳು ಎದ್ದೇಳು ನಿನ್ನ ಚಿಂತೆ, ನಿನ್ನ ಆಲೋಚನೆ, ನಿನ್ನ ಸ್ವಂತ ಬುದ್ಧಿ ಇವೆಲ್ಲವನ್ನು ಬಿಟ್ಟು ಕರ್ತನ ಚಿತ್ತದ ಪ್ರಕಾರ ಜೀವಿಸಲು ಮುಂದೆ ಹೆಜ್ಜೆ ಇಡು, ಆತನು ನಿನಗಾಗಿಯೇ ಕಾದಿದ್ದಾನೆ.

ಇಂದು ನೀನು ಜೀವಿಸುತ್ತಿರುವ ರೀತಿ ನಿನ್ನ ಸ್ಥಿತಿ ಬದಲಾಗಬೇಕೆಂದು ನಿನ್ನ ಮನಸ್ಸಾಕ್ಷಿ ಹೇಳುತ್ತಿದೆ ಅಲ್ಲವೇ? ಹಾಗಾದರೆ ನಿನಗೆ ಜ್ಞಾನ ಬೇಕು ಆ ಜ್ಞಾನವನ್ನು ಮನುಷ್ಯರಿಂದ ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ಯೇಸುಕ್ರಿಸ್ತನಿಂದ ಮಾತ್ರ ಪಡೆದುಕೊಳ್ಳಲು ಸಾಧ್ಯವಷ್ಟೇ. “ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವುದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ.” (ಯಾಕೋಬ 1:5.) ಕರ್ತನಿಂದ ಸಿಗುವ ಜ್ಞಾನವನ್ನು ನೀನು ಪಡೆದುಕೊಂಡು ನಡೆಯುವುದಾದರೆ ನಿನ್ನ ಮುಂದೆ ಶುಭವೂ ಕೃಪೆಯೂ ಯಾವಾಗಲೂ ನಿನ್ನನ್ನು ಹಿಂಬಾಲಿಸುತ್ತದೆ. ಕರ್ತನು ನೀನು ಕೇಳಿಕೊಳ್ಳುವಾಗ ನಿನಗೆ ಜ್ಞಾನವನ್ನು, ಶುಭವನ್ನೂ, ಬಿಡುಗಡೆಯನ್ನೂ ಸಹ ಅನುಗ್ರಹಿಸಲು ಕಾದಿದ್ದಾನೆ.

“ನೀನು ಈಗ ಇರುವ ಪರಿಸ್ಥಿತಿಯನ್ನು ನೋಡುವಾಗ ಇನ್ನು ಏನೂ ಸಾಧನೆ ಮಾಡಿಲ್ಲ, ಬರಿಗೈಯಲ್ಲಿ ಇದ್ದೀಯ. ಏಕೆಂದರೆ ನೀನು ದಿನವೆಲ್ಲಾ ದುಡಿದು ಸಂಪಾದನೆ ಮಾಡುತ್ತಿರುವ ಹಣಕಾಸು ಅನೇಕಭಾರಿ ಜಿಗುಪ್ಸೆಯಲ್ಲಿ ನಿನ್ನನ್ನು ನಡೆಸುತ್ತಿದೆ. ದಿನವಿಡೀ ಪ್ರಯಾಸಪಟ್ಟು ಸಂಬಳ ತಂದರೂ ಯಾವುದಕ್ಕೂ ಸಾಕಾಗುತ್ತಿಲ್ಲ. ಜೀವನದಲ್ಲಿ ನೆಮ್ಮದಿ ಅನ್ನುವುದೇ ಕಳೆದುಹೋಗಿದೆ. ದಿನದಲ್ಲಿ ಏನಾದರೂ ಒಂದು ತೊಂದರೆ ಇದ್ದೇ ಇರುತ್ತದೆ. ಯಾವ ರೀತಿ ನಡೆದುಕೊಂಡರೂ ಸಹಾ ಹಿಂಸೆ, ನೋವು ತೊಂದರೆ ಇದ್ದೇ ಇರುತ್ತದೆ. ಸಮಾಧಾನದ ಜೀವನ ನಡೆಸುವುದಕ್ಕೆ ಆಗುತ್ತಿಲ್ಲ.” ಇದು ಬಹು ಕಠಿಣವಾದ ಶಿಕ್ಷೆಯಲ್ಲವೇ. ಇಂತಹ ಸ್ಥಿತಿ ನಿನ್ನಲ್ಲಿ ಖಂಡಿತವಾಗಿ ಬದಲಾಗಬೇಕಲ್ಲವೇ? ಹಣಕಾಸಿನ ವಿಷಯದಲ್ಲಿ ನಿನ್ನನ್ನು ಅಭಿವೃದ್ಧಿ ಪಡಿಸಲು ಕರ್ತನು ಕಾದಿದ್ದಾನೆ. ಈಗಲೇ ನೀನಿರುವ ಸ್ಥಳದಲ್ಲಿ ನಿನ್ನನ್ನು ಕರ್ತನಿಗೆ ಒಪ್ಪಿಸಿಕೊಟ್ಟು ನಿನ್ನ ಸ್ಥಿತಿ ಮಾರ್ಪಡಲು ಪ್ರಾರ್ಥಿಸು. ಖಂಡಿತವಾಗಿಯೂ ನೀನು ವ್ಯತ್ಯಾಸವನ್ನು ಕಾಣುತ್ತೀಯ.

ನೀನು ಆಶೀರ್ವಾದ ನಿಧಿಯಾಗಬೇಕು, ನೀನು ಸತ್ಯವೇದವನ್ನು ಓದಬೇಕು, ದುಷ್ಟ ಹವ್ಯಾಸಗಳನ್ನು ಬಿಡಬೇಕು, ಹೀನಸ್ಥಿತಿ ನಿನ್ನನ್ನು ಬಿಟ್ಟುಹೋಗಬೇಕು ಎಂದು ಕರ್ತನು ಆಶಿಸುತ್ತಿದ್ದಾನೆ. ಕರ್ತನೊಟ್ಟಿಗೆ ಮನಬಿಚ್ಚಿ ಮಾತನಾಡು ಬದಲಾಗು, ನಿನ್ನ ಸ್ಥಿತಿಯನ್ನು ಮಾರ್ಪಡಿಸಿಕೊಳ್ಳಲು ಪ್ರಯಾಸಪಡು. ನಿನ್ನನ್ನು ಆಶೀರ್ವದಿಸಲು ನನ್ನ ಪ್ರಿಯ ಯೇಸುರಾಜನು ಕಾದಿದ್ದಾನೆ. ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ” ಅಂದನು. (ಮತ್ತಾಯ 21:22) ಇಂದು ನಿನ್ನ ಆಯ್ಕೆಯ ದಾರಿ ಯಾವುದು? ಶುಭವೋ? ಅಶುಭವೋ? ಹೀನಸ್ಥಿತಿಯೋ? ಉತ್ತಮ ಸ್ಥಿತಿಯೋ? ದುಷ್ಟ ಚಟವೋ? ಒಳ್ಳೆ ಜೀವನವೋ? 'ಯಾವುದು ಬೇಕು?” ನಿನ್ನದೇ ಆಯ್ಕೆ.

# 2. ನಿನ್ನ ಶತೃವಿಗೆ ಸೋಲು

"ನಿಮ್ಮ ಮೇಲೆ ಬರುವ ಶತ್ರುಗಳು ನಿಮ್ಮಿಂದ ಸೋತು ಹೋಗುವಂತೆ ಕರ್ತನು ಮಾಡುವನು. ಅವರು ಒಂದೇ ದಾರಿಯಿಂದ ನಿಮ್ಮ ಮೇಲೆ ಬಂದರೂ ಏಳು ದಾರಿಗಳಿಂದ ಓಡಿ ಹೋಗುವರು." (ಧರ್ಮೋ 28:7).

ಯೆಹೋಷಾಫಾಟನಿಗೆ ವಿರೋಧವಾಗಿ ಬಂದ ಶತ್ರುಗಳು ನಾಶವಾದ ರೀತಿಯನ್ನು ನೋಡುವಾಗ ಕರ್ತನ ಕೃಪಾಹಸ್ತ ಆತನ ಮಕ್ಕಳ ಮೇಲೆ ಯಾವ ರೀತಿಯಲ್ಲಿ ಇರುತ್ತದೆಂದು ನಾವು ತಿಳಿದುಕೊಳ್ಳಬಹುದು.

ಮೋವಾಬ್ಯರೂ ಅಮೋನಿಯರೂ ಮೆಗೂನ್ಯರಲ್ಲಿ ಕೆಲವರು ಯೆಹೋಷಾಫಾಟನಿಗೆ ವಿರೋಧವಾಗಿ ಯುದ್ಧಕ್ಕೆ ಬಂದರು. ಈ ವಿಚಾರ ಯೆಹೋಷಾಫಾಟನಿಗೆ ಗೊತ್ತಾದಾಗ ಅವನು ಯೆಹೋವನನ್ನೇ ಆಶ್ರಯಿಸಿಕೊಳ್ಳಬೇಕೆಂದು ಹೆದರಿಕೊಂಡು ನಿರ್ಣಯಿಸಿಕೊಂಡು ಯೆಹೂದ್ಯರೆಲ್ಲರೂ ಉಪವಾಸಮಾಡಬೇಕೆಂದು ಪ್ರಕಟಿಸಿದನು.

ಯೆಹೋಷಾಫಾಟನು ಯೆಹೋವನ ಆಲಯದ ಹೊಸ ಪ್ರಾಕಾರದಲ್ಲಿ ಸಭೆಯಾಗಿ ನೆರೆದು ಬಂದು ಹೀಗೆ ಪ್ರಾರ್ಥಿಸಿದನು. "ಯೆಹೋವನೇ ನಮ್ಮ ಪಿತೃಗಳ ದೇವರೇ, ಪರಲೋಕದಲ್ಲಿ ದೇವರಾಗಿರುವಾತನು ನೀನಲ್ಲವೋ? ನೀನು ಜನಾಂಗಗಳ ಎಲ್ಲಾ ರಾಜ್ಯಗಳನ್ನು ಆಳುವವನಾಗಿರುತ್ತೀ. ನಿನ್ನ ಹಸ್ತದಲ್ಲಿ ಬಲಪರಾಕ್ರಮಗಳಿರುತ್ತವೆ; ನಿನ್ನೆದುರಿನಲ್ಲಿ ಯಾರೂ ನಿಲ್ಲಲಾರರು. ನಮ್ಮ ದೇವರಾದ ನೀನು ನಿನ್ನ ಪ್ರಜೆಗಳಾದ ಇಸ್ರಾಯೇಲ್ಯರ ಎದುರಿನಿಂದ ಈ ದೇಶದ ನಿವಾಸಿಗಳನ್ನು ಹೊರಡಿಸಿ ದೇಶವನ್ನು ನಿನ್ನ ಸ್ನೇಹಿತನಾದ ಅಬ್ರಹಾಮನ ಸಂತಾನದವರಿಗೆ ಶಾಶ್ವತ ಸ್ವಾಸ್ತ್ಯವನ್ನಾಗಿ ಕೊಟ್ಟೆಯಲ್ಲಾ. ಅವರು ಈ ದೇಶದಲ್ಲಿ ಇಳುಕೊಂಡು ಇದರಲ್ಲಿ ನಿನ್ನ ಹೆಸರಿಗೋಸ್ಕರ ಪವಿತ್ರಾಲಯವನ್ನು ಕಟ್ಟಿ - ತಮ್ಮ ಮೇಲೆ ಖಡ್ಗವಿಧಿ ಘೋರವ್ಯಾಧಿ ಕಾಮ ಮೊದಲಾದ ಆಪತ್ತುಗಳು ಬರುವಾಗ ತಾವು ನಿನ್ನ ನಾಮಮಹತ್ತು ಇರುವ ಈ ಆಲಯದ ಮುಂದೆಯೂ ನಿನ್ನ ಮುಂದೆಯೂ ನಿಂತು ತಮ್ಮ ಇಕ್ಕಟ್ಟಿನಲ್ಲಿ

ನಿನಗೆ ಮೊರೆಯಿಡುವದಾದರೆ ನೀನು ಕೇಳಿ ರಕ್ಷಿಸುವಿ ಎಂದುಕೊಂಡರಷ್ಟೆ, ಈ ಅಮೋನಿಯರನ್ನೂ ಮೋವಾಬ್ಯರನ್ನೂ ಸೇಯೀರ್ ಪರ್ವತ ಪ್ರದೇಶದವರನ್ನು ನೋಡು; ಇಸ್ರಾಯೇಲ್ಯಯರು ಐಗುಪ್ತದೇಶದಿಂದ ಬರುತ್ತಿದ್ದಾಗ ಇವರ ದೇಶದಲ್ಲಿ ನುಗ್ಗಬಾರದೆಂದು ನಿನ್ನಿಂದ ಅಪ್ಪಣಹೊಂದಿ ಇವರನ್ನು ಸಂಹರಿಸದೆ ವಾರೆಯಾಗಿ ಹೋದರಲ್ಲಾ. ಈಗ ಇವರು ಉಪಕಾರಕ್ಕೆ ಅಪಕಾರಮಾಡಿ ನೀನು ನಮಗೆ ಅನುಗ್ರಹಿಸಿದ ಸ್ವಾಸ್ತ್ಯ ದೊಳಗಿಂದ ನಮ್ಮನ್ನು ಹೊರಪಡಿಸುವದಕ್ಕೋಸ್ಕರ ನಮ್ಮ ಮೇಲೆ ಯುದ್ಧಕ್ಕೆ ಬಂದಿರುತ್ತಾರೆ. ನಮ್ಮ ದೇವರೇ, ಅವರನ್ನು ದಂಡಿಸದೆ ಬಿಡುವಿಯೋ? ನಮ್ಮ ಮೇಲೆ ಬಂದ ಈ ಮಹಾಸಮೂಹದ ಮುಂದೆ ನಿಲ್ಲುವುದಕ್ಕೆ ನಮ್ಮಲ್ಲಿ ಬಲವಿಲ್ಲ, ಏನು ಮಾಡಬೇಕೆಂದೂ ತಿಳಿಯದು; ನಮ್ಮ ಕಣ್ಣುಗಳು ನಿನ್ನನ್ನೇ ನೋಡುತ್ತವೆ" ಎಂದು ಪ್ರಾರ್ಥಿಸಿದನು.

ಯಹಜಿಯೇಲನ ಮೇಲೆ ಯೆಹೋವನ ಆತ್ಮವು ಬಂದು ಈ ರೀತಿ ಪ್ರವಾದಿಸಿದನು. "ಅರಸನಾದ ಯೆಹೋಷಾಫಾಟನೇ, ಯೆಹೋವನು ಹೇಳುವುದನ್ನು ಕೇಳಿರಿ! ಈ ಮಹಾಸಮೂಹದ ನಿಮಿತ್ತವಾಗಿ

ಕಳವಳಗೊಳ್ಳಬೇಡಿರಿ. ಹೆದರಬೇಡಿರಿ, ಯುದ್ಧವು ನಿಮ್ಮದಲ್ಲ ದೇವರದೇ. ನಾಳೆ ಬೆಳಿಗ್ಗೆ ಅವರಿಗೆ ವಿರೋಧವಾಗಿ ಹೊರಡಿರಿ; ಇಗೋ ಅವರು ಹಚ್ಚೀಚ್ ಗಟ್ಟದ ಮಾರ್ಗವಾಗಿ ಬರುತ್ತಾರೆ. ಯೆರೂವೇಲ್ ಅರಣ್ಯದ ಮುಂದಿರುವ ಕಣಿವೆಯ ತುದಿಯಲ್ಲಿ ಅವರನ್ನು ಸಂಧಿಸುವಿರಿ, ಈ ಸಾರಿ ನೀವು ಯುದ್ಧ ಮಾಡುವದು ಅವಶ್ಯವಿಲ್ಲ. ಯೆಹೂದ್ಯರೇ, ಯೆರೂಸಲೇಮಿನವರೇ, ಸುಮ್ಮನೆ ನಿಂತುಕೊಂಡು ಯೆಹೋವನು ನಿಮಗೋಸ್ಕರ ನಡಿಸುವ ರಕ್ಷಣಾ ಕಾರ್ಯವನ್ನು ನೋಡಿರಿ; ಹೆದರಬೇಡಿರಿ, ಕಳವಳಗೊಳ್ಳಬೇಡಿರಿ. ನಾಳೆ ಅವರೆದುರಿಗೆ ಹೊರಡಿರಿ, ಯೆಹೋವನು ನಿಮ್ಮ ಸಂಗಡ ಇರುವನು ಎಂದು ಹೇಳಿದನು. ಆಗ ಯೆಹೋಷಾಫಾಟನು ನೆಲದ ಮಟ್ಟಿಗೂ ತಲೆಬಾಗಿಸಿದನು."

ಯೆಹೋಷಾಫಾಟನು ನಿಂತು ಅವರಿಗೆ "ಯೆಹೂದ್ಯರೇ, ಯೆರೂಸಲೇಮಿನವರೇ, ನನ್ನ ಮಾತನ್ನು ಕೇಳಿರಿ. ಯೆಹೋವನಲ್ಲಿ ಭರವಸವಿಡಿರಿ, ಆಗ ಸುರಕ್ಷಿತರಾಗಿರುವಿರಿ; ಆತನ ಪ್ರವಾದಿಗಳನ್ನು ನಂಬಿರಿ, ಆಗ ಸಾರ್ಥಕರಾಗುವಿರಿ, ಯೆಹೋವನಿಗೆ ಕೃತಜ್ಞತಾಸ್ತುತಿ ಮಾಡಿರಿ, ಆತನ ಕೃಪೆಯ ಶಾಶ್ವತವಾಗಿದೆ ಎಂದು ಭಜಿಸಿರಿ ಎಂಬದಾಗಿ ಆಜ್ಞಾಪಿಸಿದನು. ಅವರು ಉತ್ಸಾಹ ಧ್ವನಿಯಿಂದ ಕೀರ್ತಿಸುವದಕ್ಕೆ ಪ್ರಾರಂಭಿಸಲು ಯೆಹೋವನು ಯೆಹೂದ್ಯರಿಗೆ ವಿರೋಧವಾಗಿ ಬಂದ ಅಮ್ಮೋನಿಯರನ್ನೂ ಮೋವಾಬ್ಯರನ್ನೂ ಸೇಯೀರ್ ಪರ್ವತದವರನ್ನೂ ನಶಿಸುವದಕ್ಕೋಸ್ಕರ ಹೊಂಚುಹಾಕುವವರನ್ನು ಇರಿಸಿದ್ದರಿಂದ ಸೇಯೀರ್ ಪರ್ವತದವರ ಮೇಲೆ ಬಿದ್ದು ಅವರನ್ನು ಸಂಹರಿಸಿಬಿಟ್ಟರು; ಅವರನ್ನು ಮುಗಿಸಿಬಿಟ್ಟ ಮೇಲೆ ಒಬ್ಬರನ್ನೊಬ್ಬರು ಕೊಲ್ಲುವದಕ್ಕೆ ಯೆಹೂದ್ಯರು ಬುರುಜಿಗೆ ಬಂದು ಆ ಸಮೂಹವಿದ್ದ ಕಡೆಗೆ ನೋಡಿದಾಗ ನೆಲದ ಮೇಲೆ ಬಿದ್ದಿರುವ ಹೆಣಗಳು ಹೊರತಾಗಿ ಜೀವದಿಂದುಳಿದವರು ಯಾರೂ ಕಾಣಿಸಲಿಲ್ಲ. ಯೆಹೋಷಾಫಾಟನೂ ಅವನ ಜನರೂ ಸುಲಿಗೆಮಾಡುವುದಕ್ಕೋಸ್ಕರ ಅಲ್ಲಿಗೆ ಹೋಗಲು ಅವರಿಗೆ ದ್ರವ್ಯ ಶ್ರೇಷ್ಠಾಯುಧ ಇವುಗಳು ರಾಶಿರಾಶಿಯಾಗಿ ಹೊರಲಾರದಷ್ಟು ಸುಲುಕೊಂಡರು. ಕೊಳ್ಳೆಯು ಬಲು ಅವರು ಹೆಚ್ಚಾಗಿದ್ದದರಿಂದ ಅವರು ಮೂರು ದಿನಗಳವರೆಗೂ ಕೂಡಿಸುತ್ತಿದ್ದರು. ನಾಲ್ಕನೆಯ ದಿನದಲ್ಲಿ ಬೆರಾಕ ತಗ್ಗಿನಲ್ಲಿ ಕೂಡಿಬಂದರು. ಅವರು ಅಲ್ಲಿ ಯೆಹೋವನನ್ನು ಸ್ತುತಿಸಿದದರಿಂದ ಆ ಸ್ಥಳಕ್ಕೆ ಇಂದಿನ ವರೆಗೂ ಬೆರಾಕ ತಗ್ಗು ಎಂಬ ಹೆಸರಿದೆ (2ಪೂರ್ವಕಾಲವೃತ್ತಾಂತ 20 ನೇ ಅಧ್ಯಾಯ)

ಇಲ್ಲಿ ಯೆಹೋಷಾಫಾಟನ ಪ್ರಾರ್ಥನೆ ದೇವರ ಮುಂದೆ ಮೆಚ್ಚಿಕೆಯಾಗಿ ತೋರಿಬಂದುದರಿಂದ ಅವನ ವಿರುದ್ಧವಾಗಿ ಬಂದಂತಹ ಶತೃಗಳನ್ನು ಕರ್ತನು ಸೋಲಿಸಿ ಯೆಹೋಷಾಫಾಟನಿಗೆ ಜಯ ಕೊಟ್ಟನು. ಈ ಹೊತ್ತು ನಿನ್ನ ಪ್ರಾರ್ಥನೆಗಳು ದೇವರಿಗೆ ಮೆಚ್ಚಿಕೆಯಾಗಿದೆಯಾ? ದೇವರು ನಿನ್ನ ಶತೃಗಳನ್ನು ಸೋಲಿಸುವಂತೆ ನೀನು ಕರ್ತನಿಗೆ ಮೆಚ್ಚಿಕೆಯಾಗಿ ನಡೆಯುತ್ತಿದ್ದೀಯಾ! ಹಾಗಿರುವುದಾದರೆ "ನಿಮ್ಮ ಮೇಲೆ ಬರುವ ಶತ್ರುಗಳು ನಿಮ್ಮಿಂದ ಸೋತು ಹೋಗುವಂತೆ ಕರ್ತನು ಮಾಡುವನು. ಅವರು ಒಂದೇ ದಾರಿಯಿಂದ ನಿಮ್ಮ ಮೇಲೆ ಬಂದರೂ ಏಳು ದಾರಿಗಳಿಂದ ಓಡಿ ಹೋಗುವರು. (ಧರ್ಮೋ 8:7)

## ನಿನಗಾಗಿ ಕರ್ತನೇ ಯುದ್ಧ ಮಾಡುವನು

"ಯೆಹೋವನು ಒಬ್ಬನ ನಡತೆಗೆ ಮೆಚ್ಚಿದರೆ ಅವನ ಶತ್ರುಗಳನ್ನೂ ಮಿತ್ರರನ್ನಾಗಿ ಮಾಡುವನು" (ಜ್ಞಾನೋ 16:7)

ನೀನು ಒಂದು ವೇಳೆ ಎಲ್ಲ ಇದ್ದು ಏನೂ ಇಲ್ಲದ ರೀತಿಯಲ್ಲಿ ನಿನ್ನ ಜೀವನ ಮುಂದೆ ಸಾಗುತ್ತಿರಬಹುದು. ಒಳ್ಳೆ ಮನೆ, ಆಸ್ತಿ, ಕುಟುಂಬ, ಮಕ್ಕಳು, ಹಣ ಎಲ್ಲಾ ಇದ್ದು ನಿನ್ನ ಮನಸ್ಸಿದೆ ಸಮಧಾನವಿಲ್ಲದೆ ನಿನ್ನ ವಿರೋಧಿಯನ್ನು ಎದುರಿಸಲು ಆಗದೇ ಬೇಸತ್ತು ಹೋಗಿ ಇದರಿಂದ

ಕುಡಿಯುವುದನ್ನು ಪ್ರಾರಂಭಿಸಿ ಕೊಲೆ ಮಾಡುವ ತನಕ ನಿನ್ನ ಮನಸ್ಸಿಗೆ ನೆಮ್ಮದಿ ಇಲ್ಲದೇ ಜೀವಿಸಿಕೊಂಡು ಹಣವೆಲ್ಲಾ ವ್ಯರ್ಥ ಮಾಡಿಕೊಂಡು ಜೀವಿಸುತ್ತಾ, ಸುಮ್ಮನೇ ಸ್ನೇಹಿತರೊಟ್ಟಿಗೆ ಯಾವಯಾವುದೋ ಯೋಜನೆಗಳನ್ನು ನಿನ್ನ ವಿರೋಧಿಗಳನ್ನು ಎದುರಿಸುವುದಕ್ಕೆ ನೀನು ಮಾಡುತ್ತಿರುವುದಾದರೆ ಅದು ವ್ಯರ್ಥವೆಂದು ತಿಳುದುಕೋ.

ಕರ್ತನ ಮೇಲೆ ಭರವಸವಿಡುವುದಾದರೆ ಯಾವ ಕಾರಣಕ್ಕೂ ಆತನು ನಿನ್ನನ್ನು ಬಿಡುವುದಿಲ್ಲ. ನೀನು ವಿರೋಧಿಗಳನ್ನು ಜಯಿಸಲು ನಿನ್ನ ನಡತೆಯನ್ನು ಹಾಳು ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ನಿನ್ನ ವಿರೋದಿ ಗಳನ್ನು ಜಯಿಸಲು ಕರ್ತನ ದೃಷ್ಟಿಯಲ್ಲಿ ನಿನ್ನ ನಡತೆ ಮೆಚ್ಚಿಕೆಯಾಗಬೇಕಷ್ಟೆ ಎನ್ನುವದನ್ನು ಅರ್ಥಮಾಡಿಕೋ, ಆಗ ಕರ್ತನು ತಾನೇ ನಿನ್ನ ಪರವಾಗಿ ಯುದ್ದ ಮಾಡುತ್ತಾನೆ.

"ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವದನ್ನು ದೇವರಿಗೆ ಬಿಡಿರಿ. ಯಾಕೆಂದರೆ ಮುಖ್ಯಿಗೆ ಮುಯ್ಯೆ ತೀರಿಸುವದು ನನ್ನ ಕೆಲಸ ನಾನೇ ಪ್ರತಿಫಲವನ್ನು ಕೊಡುವನು ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ." (ರೋಮಾ 12:19)

ಕೂಲಿ ಮಾಡುವ ವ್ಯಕ್ತಿಗೆ ಒಂದು ರೀತಿ, ಸ್ವಂತ ಮನೆಯಿಲ್ಲದವರಿಗೆ ಒಂದು ರೀತಿ, ಆಸ್ತಿಯಿಲ್ಲದವರಿಗೆ ಒಂದು ರೀತಿ ಸರಿಯಾದ ಊಟ ಸಿಗದೇ ಇರುವವರಿಗೆ ಒಂದು ರೀತಿ, ಕುಟುಂಬವನ್ನು ಸಾಗಿಸಲು ಗೊತ್ತಿಲ್ಲದ ಇರುವವರಿಗೆ ಒಂದು ರೀತಿಯಾದ ವಿರೋಧಗಳು ಇದ್ದೇ ಇರುತ್ತದೆ. ಇಂತಹ ವಿರೋಧಗಳೊಟ್ಟಿಗೆ ಕರ್ತನೇ ಯುದ್ದ ಮಾಡುತ್ತಾನೆ. ನೀನು ಮಾಡುವ ಅವಶ್ಯವಿರುವುದಿಲ್ಲ.

"ನನ್ನ ಶತ್ರುವು ಕೆಡುಕನ್ನು ಹೆರಬೇಕೆಂದು ಪ್ರಸವವೇದನೆಯಲ್ಲಿದ್ದಾನೆ; ಅವನು ಹಾನಿಯನ್ನು ಹಡೆಯವನೆಂದು ನೆನಸಿಕೊಂಡರೂ ಶೂನ್ಯವನ್ನೇ ಹೆತ್ತನು ನೋಡಿರಿ." (ಕೀರ್ತನೆ 7:14) ನಿನ್ನ ಕಡೆ ನ್ಯಾಯವಿದ್ದ ಪಕ್ಷಕ್ಕೆ , ನಿನ್ನನ್ನು ಹಾಳುಮಾಡಬೇಕೆಂದು ಬರುವ ನಿನ್ನ ಶತೃಗಳು ಗೆಲ್ಲದಂತೆ ಕರ್ತನು ನಿನ್ನ ಪಕ್ಷವಾಗಿ ನಿಂತು ನಿನಗೆ ಜಯವನ್ನು ಕೊಡುತ್ತಾನೆ.

ಅಲ್ಲಿ ಇಲ್ಲಿ ಅಲೆಯುತ್ತಾ, ಕಾಲಕಳೆಯುತ್ತಾ ನಿನ್ನ ವಿರೋಧಿಯನ್ನು ಜಯಿಸುತ್ತೇನೆ ಎಂದು ಹೇಳಿದರೆ ಅದು ಎಂದಿಗೂ ಸಾಧ್ಯವಿಲ್ಲ. ಅನೇಕರ ಜೀವನ ಅನೇಕ ರೀತಿಯಲ್ಲಿ ಹೀನವಾಗಿ ನಡೆದುಕೊಂಡು ಹೋಗುತ್ತಿರುತ್ತದೆ. ಹೇಳಿಕೊಡುವ ವ್ಯಕ್ತಿ ಯಾರೂ ಇರೋದಿಲ್ಲ, ಇಷ್ಟ ಬಂದ ರೀತಿಯಲ್ಲಿ ಯಾರು ಏನೇ ಹೇಳಿದರೂ ಮಾಡೋದಕ್ಕೆ ಸಿದ್ದ ಅನ್ನುವವನು ಜೀವನದ ಬೆಲೆ ಗೊತ್ತಿಲ್ಲದೆ ನಡೆಯುವಂತ ವ್ಯಕ್ತಿಗಳು ಈ ಲೋಕದಲ್ಲಿ ಇದ್ದಾರೆ. ಇಂತಹ ವ್ಯಕ್ತಿಗಳು ಇನ್ನೂ ಅನೇಕ ವಿರೋಧಿಗಳನ್ನು ದಿನೇ-ದಿನೇ ಸಂಪಾದನೆ ಮಾಡಿಕೊಳ್ಳುತ್ತಲೇ ಇರುತ್ತಾರೆ. ಎಲೈ ಮನುಷ್ಯನೇ ವಿರೋಧಿಗಳನ್ನು ಮಿತ್ರರನ್ನಾಗಿ ಮಾಡುವ ದೇವರ ಬಳಿಯಲ್ಲಿ ನೀನಿದ್ದೀಯಾ ಹಾಗಾದರೆ "ನಿನ್ನ ವೈರಿಗಳನ್ನು ಪ್ರೀತಿಸು" (ಮತ್ತಾಯ 5:44) ವೈರತ್ವವನ್ನು ಬುದ್ದಿಯಿಲ್ಲದೆ ಹೆಚ್ಚು ಮಾಡಿಕೊಳ್ಳಬೇಡ. ಎಲ್ಲರೊಟ್ಟಿಗೆ ಸ್ನೇಹವನ್ನು ಬೆಳಸಿಕೊಳ್ಳಲು ಪ್ರಯಾಸಪಡು. ನಿನ್ನ ಸ್ವಂತ ಜ್ಞಾನದಿಂದ ಅನೇಕ ವೈರಿಗಳನ್ನು ಸುಮ್ಮ ಸುಮ್ಮನೇ ಮಾಡಿಕೊಂಡು, ಬಿಡುಗಡೆ ಕೊಡು ಯೇಸುವೇ ಎಂದು ನೀನು ಪ್ರಾರ್ಥಿಸಿದರೆ ಅಂತಹ ಪ್ರಾರ್ಥನೆಯನ್ನು ದೇವರು ಕೇಳುವುದಿಲ್ಲ. "ಪ್ರಾರ್ಥನೆಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೇ ಸುಮ್ಮ-ಸಮ್ಮನೆ ಹೇಳಬೇಡ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ." (ಮತ್ತಾಯ 6:7) ನಿನ್ನ ಕಡೆ ನಿಜವಾಗಿ ನ್ಯಾಯವಿದ್ದರೆ ಮಾತ್ರ ಕರ್ತನು ನಿನಗಾಗಿ ಯುದ್ದವನ್ನು ಮಾಡಿ ಮುಯ್ಯಿಗೆ ಮುಯ್ಯಿ ತೀರಿಸುತ್ತಾನೆ.

ಇನ್ನೂ ಕೆಲವರು ವಿಧ್ಯೆಯಿದ್ದು ಬುದ್ದಿಯಿದ್ದು, ಹಣವಿದ್ದು ಎಲ್ಲಾ ಇದ್ದರೂ ಕೆಲವು ವಿರೋಧಿಗಳ ಸವಿ ಮಾತಿನಿಂದ ಮೋಸಹೋಗಿ ಕೆಳಗೆ ಬೀಳುತ್ತಾರೆ. ಹೀಗಿರುವುದಾದರೆ ಗೌರವ ಏನಾಗುತ್ತೆ ಯೋಚಿಸಿರಿ. ಯೇಸು ಕ್ರಿಸ್ತನು ಕೊಡುವಂತಹ ಜ್ಞಾನವನ್ನು ಯಾರು ಸರಿಯಾಗಿ ಹೊಂದಿಕೊಂಡಿರುವುದಿಲ್ಲವೋ ಅಂತವರ ಬಾಳಿನಲ್ಲಿ ಬಹಳ ಸಂಕಟಗಳು ಹೆಚ್ಚಾಗಿ ಶತೃಗಳು ಎಷ್ಟೋ ದಿನೇ-ದಿನೇ ಎದ್ದೇಳುತ್ತಲೇ ಇರುತ್ತಾರೆ.

ಯೆಹೋಷಾಫಾಟನ ಪರವಾಗಿ ಕರ್ತನು ಯುದ್ದ ಮಾಡಬೇಕಾದರೆ ಯೆಹೋಷಾಫಾಟನು ಕರ್ತನಿಗೆ ಮೆಚ್ಚಿಕೆಯಾಗಿದ್ದನು, ಅವನ ಪ್ರಾರ್ಥನೆಯೂ ಕರ್ತನಿಗೆ ಮೆಚ್ಚಿಕೆಯಾಗಿತ್ತು, ನೀನು ಈ ಹೊತ್ತು ಕರ್ತನಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ನಡೆಯುತ್ತಿದ್ದೀಯಾ? ಕರ್ತನು ನಿನ್ನ ವಿರೋಧಿಯಿಂದ ತಪ್ಪಿಸುವಂತೆ ನ್ಯಾಯ ನಿನ್ನಲ್ಲಿದೆಯಾ? ಪರಿಶಿಲಿಸಿಕೊ. ನೀನು ನ್ಯಾಯದಲ್ಲಿ ನಿಂತಿದ್ದೀಯಾ? ಅನ್ಯಾಯದಲ್ಲಿದ್ದೀಯಾ? ''ಯಾವುದು ಬೇಕು" ನಿನ್ನ ಆಯ್ಕೆ ಯಾವುದು ನಿನ್ನ ಬಳಿಯಲ್ಲಿ ನ್ಯಾಯ ಇದ್ದರೆ ಮಾತ್ರ ನಿನ್ನ ವಿರೋಧಿಯೊಟ್ಟಿಗೆ ದೇವರು ಯುದ್ದ ಮಾಡುತ್ತಾರೆ.

ನೀನೇ ಯುದ್ದ ಮಾಡುತ್ತೀಯಾ ಅಥವಾ ದೇವರಿಗೆ ಮುಯ್ಯಿ ತೀರಿಸಲು ಬಿಡುತ್ತೀಯೋ 'ಯಾವುದು ಬೇಕು?'

## ದುರಾತ್ಮನ ಮೇಲೆ ಜಯವನ್ನು ಹೊಂದಿಕೋ

"ಸ್ವಸ್ತಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ;" (Iಪೇತ್ರ 5:8) ನಿನ್ನನ್ನು ಹಾಳು ಮಾಡುವುದಕ್ಕೆ ನಿನ್ನಲ್ಲಿ ಇರುವುದನ್ನು ನಾಶಮಾಡುವುದಕ್ಕೆ ದುರಾತ್ಮನು ಯಾವಾಗಲೂ ಹೊಂಚುಹಾಕುತ್ತಿರುತ್ತಾನೆ.

ದುರಾತ್ಮನಿಂದ ಪೀಡಿಸಲ್ಪಡುತ್ತಿರುವುದಾರೆ ಅಂತಹ ಸಮಯದಲ್ಲಿ ನಿನ್ನನ್ನು ಬಿಡಿಸಿ ಕೊಳ್ಳುವುದಕ್ಕೆ ಯಾರೂ ನಿನ್ನ ಹತ್ತಿರ ಬರೋದಿಲ್ಲ. ಒಂದು ವೇಳೆ ನೀನು ಪ್ರಾಣಾಪಾಯದಲ್ಲಿದ್ದರೂ ನಿನ್ನ ಪ್ರಾಣ ಉಳಿಸುವುದಕ್ಕೆ ಯಾರೊಬ್ಬರೂ ಸಹಾಯಮಾಡೋದಿಲ್ಲ. ಯಾಕೆಂದರೆ ಅವರವರ ಪ್ರಾಣದ ಮೇಲೆ ಅವರಿಗೇ ಭಯವಿರುತ್ತದೆ! ಅದಕ್ಕಾಗಿ ನೀನು ಇಕ್ಕಟ್ಟಿನಲ್ಲಿ ಸಿಲುಕಿಕೊಂಡು ನಾಶವಾಗಿ ಹೋಗುವಾಗ ಯಾರೂ ನಿನ್ನ ಜೊತೆ ಬರೋದಿಲ್ಲ; ನಿನ್ನ ಮುಖ ಸಹಾ ನೋಡೋದಿಲ್ಲ. ಅಂತಹ ಸಮಯದಲ್ಲಿ ದುರಾತ್ಮನಿಂದ ಬಿಡುಗಡೆಯನ್ನು ಹೊಂದಿಕೊಳ್ಳಲು ನೀನು ಕರ್ತನನ್ನು ಆಶ್ರಯಿಸಿಕೊಳ್ಳಬೇಕು. ಆಗ ಸರ್ವಶಕ್ತನಾದ ದೇವರು ನಿನ್ನ ವಿರೋಧಿಯಾಗಿರುವ ಸೈತಾನನು ನಿನ್ನ ಮುಂದೆ ಸೋತುಹೋಗುವಂತೆ ಮಾಡುತ್ತಾನೆ.

ದುರಾತ್ಮನು ನೀನು ತಪ್ಪು ಮಾಡುವಂತಹ ಸಮಯದಲ್ಲಿ ನಿನ್ನನ್ನು ಹೆಚ್ಚು ಹಿಂಸಿಸಲು ಬರುತ್ತಾನೆ. ನಮ್ಮ ಕರ್ತನಾದ ಯೇಸು ಕ್ರಿಸ್ತನು ನಿನ್ನನ್ನು ಕ್ಷಮಿಸುವುದಕ್ಕೆ ಯಾವಾಗಲೂ ಸಿದ್ದವಾಗಿರುವದನ್ನು ಮರೆಯಬಾರದು. ನಿನ್ನ ಬಲಹೀನತೆಯನ್ನು ನೋಡಿ ನಿನ್ನ ಮೇಲೆ ಅವಕಾಶ ತೆಗೆದುಕೊಳ್ಳಬೇಕೆಂದು

ದುರಾತ್ಮನು ಹೊಂಚುಹಾಕುತ್ತಿರುತ್ತಾನೆ. “ಸೈತಾನನು ನಮ್ಮನ್ನು ವಂಚು ನಷ್ಟಪಡಿಸಬಾರದು; ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ” (2 ಕೊರಿಂಥ 2:11)

ನಿನ್ನಲ್ಲಿರುವ ಜ್ಞಾನ ನಿನಗೆ ಬೇಕಾಗಿರುವುದನ್ನ ಸಂಪಾದನೆ ಮಾಡಿಕೊಡುತ್ತದೆ. ಆದರೆ ಯೇಸು ಕ್ರಿಸ್ತನು ಕೊಡುವ ಜ್ಞಾನ ನಿನ್ನನ್ನು ಎಲ್ಲಾ ಸರ್ವಾಪತ್ತು ವಿಪತ್ತುಗಳಿಂದ ತಪ್ಪಿಸುತ್ತದೆ

ನೀನು ಕರ್ತನನ್ನು ಆಶ್ರಯಿಸಿಕೊಳ್ಳುವಾಗ ನಿನ್ನ ಶತೃ ಎಷ್ಟೇ ಬಲಿಷ್ಟ | ವಾಗಿದ್ದರೂ ಸೋತುಹೋಗುತ್ತಾನೆ. “ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವದನ್ನು ಕಂಡೆನು. ನೋಡಿರಿ, ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನೂ ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ. ಯಾವದೂ ನಿಮಗೆ ಕೇಡುಮಾಡುವದೇ ಇಲ್ಲ.” (ಲೂಕ 10:10) ದೇವರು ನಿನಗೆ ಕೊಟ್ಟಿರುವ ಅಧಿಕಾರವನ್ನು ತಿಳಿದುಕೋ ಯಾವ ದುಷ್ಟಶಕ್ತಿಯೂ ನಿನ್ನ ಮೇಲೆ ಜಯವನ್ನು ಹೊಂದಿಕೊಳ್ಳಲು ಕರ್ತನು ಬಿಡುವುದಿಲ್ಲ. ಯಾವುದೇ ಮಂತ್ರಶಕ್ತಿಯಾಗಲಿ ಮಾಟವಾಗಲಿ ನಿನ್ನ ವಿರುದ್ದವಾಗಿ ನಿಂತುಕೊಂಡು ಜಯಹೊಂದಿಕೊಳ್ಳಲು ಸಾಧ್ಯವಿಲ್ಲ. “ಸಿಂಹಸರ್ಪಗಳ ಮೇಲೆ ನಡೆಯುವಿ; ಪ್ರಾಯದ ಸಿಂಹವನ್ನೂ ಘಟಸರ್ಪವನ್ನೂ ತುಳಿದುಬಿಡುವಿ.” (ಕೀರ್ತನೆ 91:13)

ದೇವರು ನಿನ್ನ ತಂದೆ, ನೀನು ಆತನ ಮಗು, ದೇವರು ಪ್ರಕಟಿಸಿರುವ ಈ ಸಂಬಂಧವನ್ನು ನೀನು ಆಳವಾಗಿ ಚಿಂತಿಸಿ ನೋಡು. ಯೇಸುವಿನ ಪ್ರೀತಿಯಲ್ಲಿ ನೀನು ಹೆಚ್ಚು ನಂಬಿಕೆಯಿಡಬೇಕು. ಆಗ ಯೇಸುವಿನ ಜ್ಞಾನ ನಿನ್ನಲ್ಲಿ ಬರಲು ಸಾಧ್ಯ. ಆತನೇ ನಿನ್ನ ರಕ್ಷಕನು ಎಲ್ಲದರಲ್ಲೂ ಜೊತೆಯಿದ್ದು ನಿನ್ನನ್ನು ಬಿಡಿಸಿ ರಕ್ಷಿಸುವಾತನು ನಿನ್ನ ಎಲ್ಲಾ ನೋವುಗಳನ್ನು ಆತನೊಟ್ಟಿಗೆ ಹೇಳಿಕೊಂಡು ನೀನು ಬೇಗನೇ ಬಿಡುಗಡೆಯನ್ನು ಹೊಂದಿಕೋ. ನೀನು ಕರ್ತನೊಟ್ಟಿಗೆ ಮಾತಾಡಲು ಆರಂಭಿಸು ನಿನ್ನ ಮನಸ್ಸಿನಲ್ಲಿ ಇರುವ ಎಲ್ಲಾ ಕಾರ್ಯಗಳನ್ನು ನಿನ್ನ ಪರಿಶುದ್ದತೆಯನ್ನು ಕಾದುಕೊಳ್ಳುವುದಕ್ಕೆ ಇರುವ ಪ್ರತಿಯೊಂದು ವಿರೋಧವಾಗಿರುವ ಕಾರ್ಯಗಳನ್ನು ಮರೆಮಾಚದೆ ಕರ್ತನ ಬಳಿಯಲ್ಲಿ ಹೇಳಿಕೊಳ್ಳುವಾಗ ಆತನು ಖಂಡಿತವಾಗಿ ನಿನಗೆ ಸಹಾಯಮಾಡಿ ಬಿಡಿಸುತ್ತಾನೆ ಆಗ ನಿನಗೆ ಎಲ್ಲಿಲ್ಲದ ಸಂತೋಷ ಬರುತ್ತದೆ.

ನೀನು ಕರ್ತನೊಂದಿಗೆ ನಡೆಯುವಾಗ, ಆತನ ಮಾರ್ಗಗಳನ್ನು ಪೂರ್ಣ ಮನಸ್ಸಿನಿಂದ ಅಂಗೀಕರಿಸಿಕೊಳ್ಳಬೇಕು. ಆಗ ನಿನಗೆ ಯಾವಕೇಡು ಸಂಭವಿಸುವುದಿಲ್ಲ. ನಿನ್ನನ್ನು ಹಾಳುಮಾಡಲು ಪ್ರಯತ್ನಿಸುವಂತಹ ನಿನ್ನ ಶತೃವಿನಿಂದ ನಿನ್ನನ್ನು ಕರ್ತನು ತಪ್ಪಿಸುತ್ತಾನೆ.

ನಿನ್ನ ಇಷ್ಟದ ಪ್ರಕಾರ ನಡೆದುಕೊಂಡು ನಿನ್ನ ಜೊತೆಯಲ್ಲಿರುವ ವ್ಯಕ್ತಿಯು ಹೇಳುವ ರೀತಿ ನಡೆದುಕೊಂಡು ಹೋಗುವುದಾದರೆ ನಿನ್ನ ಜೀವನದಲ್ಲಿ ಸೋಲನ್ನೇ ಅನುಭವಿಸುತ್ತೀಯಾ ಆದರೆ ನೀನು ಯೇಸುವಿನ ಜ್ಞಾನವನ್ನು ಹೊಂದಿಕೊಂಡು ಆತನ ಮಾರ್ಗದಲ್ಲಿ ನಡೆಯುವುದಾದರೆ ನಿನ್ನ ಜೀವನದಲ್ಲಿ ಪ್ರತಿಯೊಂದು ಮಂಡಲದಲ್ಲಿಯೂ ನಿನಗೆ ಒಳ್ಳೆಯ ಜಯವನ್ನು ಹೊಂದಿಕೊಳ್ಳಲು ಸಹಾಯವಾಗುತ್ತದೆ. ನೀನಿರುವ ಯಲ್ಲಿಯೇ ನೀನು ಯೇಸುವನ್ನ ಪ್ರೀತಿಸಿ ಆತನ ರಕ್ಷಣೆಯಲ್ಲಿ ಬಲ ಹೊಂದಿಕೊಂಡು ನಿನ್ನ ಎಲ್ಲಾ ಶತೃಗಳಿಂದ ಬಿಡಿಸಿಕೊಂಡು ಸ್ವತಂತ್ರವಾಗಿ ಜೀವಿಸುವುದಾದರೆ ನೀನು ನಿಜವಾಗಿಯೂ ಉತ್ತಮವಾದ ಸ್ಥಿತಿಯಲ್ಲಿ ಮೇಲೆತ್ತಲ್ಪಡುತ್ತೀಯ. ಆತನೇ ನಿನ್ನನ್ನು ನಡೆಸುವ ದೇವರು,

ನಿನ್ನ ಶತೃವಾದ ಸೈತಾನನನ್ನು ನೀನು ಜಯಿಸಬೇಕಾದರೆ ನಿನಗೆ ಕರ್ತನಾದ ಯೇಸುಕ್ರಿಸ್ತನ ಮೇಲೆ ಅಪಾರವಾದ ವಿಶ್ವಾಸವಿರಬೇಕು. ಇಲ್ಲದಿದ್ದರೆ ದುರಾತ್ಮನು ಬಹುಬೇಗ ನಿನ್ನನ್ನು ವಂಚಿಸಿ ತನ್ನ ಅಧೀನದಲ್ಲಿ ಇಟ್ಟುಕೊಳ್ಳುತ್ತಾನೆ. ನೀನು ಬಿಡುಗಡೆಯಾಗಬೇಕಾದ ವಿಚಾರಗಳಲ್ಲಿ ನಿನ್ನನ್ನು ಸಿಲುಕಿಸಿ ನಿನ್ನ ಆಲೋಚನೆಗಳನ್ನು ಕೆಡಿಸಿ ನಿನ್ನಲ್ಲಿರುವ ಸಮಾಧಾನವನ್ನೂ, ತಾಳ್ಮೆಯನ್ನೂ, ಪ್ರೀತಿಯನ್ನೂ ನಾಶಮಾಡಲು ಪ್ರಯತ್ನಿಸುತ್ತಾನೆ. “ನಾವು ಹೋರಾಡುವುದು ಮನುಷ್ಯಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ.” “ಆದದರಿಂದ ಕಠಿಣ ಯುದ್ಧವು ನಡೆಯುವ ದಿವಸದಲ್ಲಿ ಆ ವೈರಿಗಳನ್ನು ಎದುರಿಸುವದಕ್ಕೂ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವದಕ್ಕೂ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ.” (ಎಫೆಸ 6:12,13) ಆಗ ನಿನ್ನ ವಿರೋಧಿ ಸಂಪೂರ್ಣವಾಗಿ ಸೋತುಹೋಗುತ್ತಾನೆ.

ನಿನಗೆ “ಯಾವುದು ಬೇಕು' ಜಯವೋ? ಸೋಲೋ? ನೀನೇ ಯೋಚಿಸು.. ನೀನು ಸೋತುಹೋದರೆ ದುರಾತ್ಮನು ನಿನ್ನ ಮೇಲೆ ಜಯಹೊಂದಿದ್ದಾನೆ ಎಂದರ್ಥ, ನೀನು ಗೆಲ್ಲುವುದಾದರೆ ಕರ್ತನು ನಿನ್ನ ಪಕ್ಷವಾಗಿದ್ದು ನಿನಗೆ ಜಯವನ್ನು ಕೊಟ್ಟಿದ್ದಾರೆ ಎಂದರ್ಥ. ನೀನು ಗೆಲ್ಲಬೇಕೆಂದೇ ಕರ್ತನು ಇಷ್ಟಪಡುತ್ತಿದ್ದಾನೆ. ನಿನ್ನ ಇಷ್ಟವೇನು?

# 3. ನಿನ್ನ ದೇಶದಲ್ಲಿ ಅಭಿವೃದ್ಧಿ

"ನಿಮ್ಮ ಕಣಜಗಳು ಯಾವಾಗಲೂ ತುಂಬಿರುವಂತೆಯೂ ನಿಮ್ಮ ಪ್ರಯತ್ನ ಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೋವನು ನಿಮಗೆ ಶುಭವನ್ನು ಅನುಗ್ರಹಿಸುವನು. ಆತನು ನಿಮಗೆ ಕೊಡುವ ದೇಶದಲ್ಲಿ ನಿಮಗೆ ಶುಭವನ್ನೇ ಉಂಟುಮಾಡುವನು." (ಧರ್ಮೋ 28:8)

## ನಿನಗಾಗಿ ಒಬ್ಬ ಆತ್ಮೀಕ ವ್ಯಕ್ತಿ ಇದ್ದಾನಾ?

ಯೇಸು ಕ್ರಿಸ್ತನು ನಿನ್ನನ್ನು ಆಶೀರ್ವದಿಸಬೇಕೆಂದು ನೀನು ಕೈ ಹಾಕುವ ಸಕಲ ಒಳ್ಳೆ ಕೆಲಸಕಾರ್ಯಗಳನ್ನು ಸಫಲಮಾಡಬೇಕೆಂದು ಇಷ್ಟಪಡು ತಿದ್ದಾನೆ. ನೀನು ಇರುವ ದೇಶದಲ್ಲಿ ಒಳ್ಳೆ ರೀತಿಯಲ್ಲಿ ಬೆಳೆದು ಹೆಸರುವಾಸಿ ಆಗಬೇಕು ಎಂದರೆ ನಿನ್ನನ್ನು ನಡೆಸುವ ಒಬ್ಬ ಒಳ್ಳೇ ವ್ಯಕ್ತಿ ನಿನ್ನ ಜೊತೆ ಇರಬೇಕು. ಆ ವ್ಯಕ್ತಿಯು ಆತ್ಮೀಕವಾದ ವ್ಯಕ್ತಿಯಾಗಿದ್ದು ಸತ್ಯವನ್ನು ತಿಳಿದು ನಿನ್ನನ್ನು ಕರ್ತನ ಮಾರ್ಗದಲ್ಲಿ ನಡೆಸುವ ಜ್ಞಾನವನ್ನು ಹೊಂದಿರಬೇಕು. ಅಥವಾ ನಿನಗಾಗಿ ಪ್ರಾರ್ಥನೆಮಾಡುವಂತವರಾಗಿರಬೇಕು. ಅಂತಹ ವ್ಯಕ್ತಿ ನಿನಗೆ ಇನ್ನೂ ಸಿಕ್ಕಲಿಲ್ಲವಾದರೆ ಅದಕ್ಕಾಗಿ ಪ್ರಾರ್ಥಿಸು ಆಗ ನಿನ್ನಲ್ಲಿ ಒಂದೊಂದು ಹೆಜ್ಜೆಯಲ್ಲಿಯೂ ಬದಲಾವಣೆಗಳನ್ನು ಕಾಣಲು ನಿನಗೆ ಸಾಧ್ಯವಾಗುತ್ತದೆ. "ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ, ಬುದ್ಧಿ ಹೇಳಿಕೊಳ್ಳಿರಿ;" (ಕೊಲೊ 3:16)

ದೇವರು ಕೊಡುವ ಆಶೀರ್ವಾದದಲ್ಲಿ ನೆಲೆನಿಲ್ಲಬೇಕಾದರೆ "ಒಬ್ಬನಿಗಿಂತ ಇಬ್ಬರು ಲೇಸು; ಅವರ ಪ್ರಯಾಸಕ್ಕೆ ಒಳ್ಳೆಯ ಲಾಭ, ಒಬ್ಬನು ಬಿದ್ದರೆ ಇನ್ನೊಬ್ಬನು ಎತ್ತುವನು; ಬಿದ್ದಾಗ ಎತ್ತುವವನು ಇನ್ನೊಬ್ಬನಿಲ್ಲದಿದ್ದರೆ ಅವನ ಗತಿ ದುರ್ಗತಿಯೇ" (ಪ್ರಸಂಗೀ 4:9,10) ಹಾಗಾಗಿ ನಿನಗೊಬ್ಬ ಆತ್ಮೀಕ ವ್ಯಕ್ತಿ ಇರಬೇಕು. ಮತ್ತು "ಇದಲ್ಲದೆ ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವದಾದರೂ ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವದೆಂದು ನಿಮಗೆ ಹೇಳುತ್ತೇನೆ. ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿಬಂದಿರುತ್ತಾರೋ ಅಲ್ಲಿ ತಣಜಗಳು ಯಾವಾಗಲೂ ನಿನ್ನ ಪ್ರಯತ್ನಗಳೆಲ್ಲ ಸಫಲವಾಗಬೇಕೆಂದರೆ ದೇವರು ದಯಪಾಲಿಸುವ ಶುಭವನ್ನು ನೀನು ಹೊಂದಬೇಕೆಂದರೆ ನಿನ್ನ ಜೊತೆ ಯಾರಾದರೂ ಒಬ್ಬರು ಪ್ರಾರ್ಥಿಸಬೇಕು. ಆ ವ್ಯಕ್ತಿ ನಿನ್ನ ಸಭಾಪಾಲಕರಾಗಿರಬಹುದು ಅಥವಾ ನಿನ್ನ ಜೊತೆ ವಿಶ್ವಾಸಿಯಾಗಿರಬಹುದು.

ಇಂದು ನಿನ್ನ ತೀರ್ಮಾನವೇನು ನೀನು ಒಬ್ಬನೇ/ಳೇ ಇದ್ದು ಆತ್ಮೀಕ | ವ್ಯಕ್ತಿಯಾಗಿ ಜೀವಿಸಲು ಇಷ್ಟ ಪಡುತ್ತೀಯೋ ಅಥವಾ ಒಳ್ಳೆ ಆತ್ಮೀಕ ವ್ಯಕ್ತಿ ನನಗೆ ಬೇಕು ಎಂದು ಹೇಳುತ್ತೀಯೋ ನಿನಗೆ 'ಯಾವುದು ಬೇಕು?' ಏನು ನಿನ್ನ ಆಯ್ಕೆ?

ಒಂದು ವೇಳೆ ನಿನ್ನ ಸ್ವಂತ ಜ್ಞಾನದಿಂದ ನೀನು ನಡೆದು ನಿನ್ನ ಇಷ್ಟದ ಸ್ವಭಾವವನ್ನು ನೀನು ಹೆಚ್ಚಿಸಿಕೊಂಡು ನನಗೆ ಯಾರೂ ಬೇಡ ಏನೂ ಬೇಡ ನಾನಿರುವ ಹಾಗೆಯೇ ಇರುತ್ತೇನೆ ಎಂದು ನೀನು ಹೇಳುವುದಾದರೆ ನಿನ್ನ ಕೆಲಸ ಕಾರ್ಯಗಳು ಆಶೀರ್ವದಿಸಲ್ಪಡುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ

ನಿನಗೆ ಸಮೃದ್ಧಿಯಾದರೂ ಆ ಸಮೃದ್ಧಿಯನ್ನು ನಿನಗೆ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಕರ್ತನು ನಿನಗೆ ಅನುಗ್ರಹಿಸುವ ಒಳ್ಳೆ ಆತ್ಮೀಕವಾದ ವ್ಯಕ್ತಿ ನಿನಗೆ ಅವಶ್ಯವಾಗಿ ಬೇಕೇ ಬೇಕಾಗುತ್ತದೆ.

**ಆತ್ಮೀಕ ಜ್ಞಾನ**

ಒಂದು ವೇಳೆ ನಿನ್ನ ಎಲ್ಲಾ ಪ್ರಯತ್ನಗಳಲ್ಲೂ ವಿಪತ್ತು, ಕಳವಳ, ಭಯ ತುಂಬಿ ನಡುಗುತ್ತಾ ನೀನು ನಿನ್ನ ಜೀವನದಲ್ಲಿ ಅಭಿವೃದ್ಧಿಯನ್ನು ಕಾಣಲಿಲ್ಲವಾದರೆ 'ಅಪ್ಪ ಹಾಕಿದ ಆಲದ ಮರನೇ ದೇವರು' ಎನ್ನುವ ಗಾದೆ ಮಾತಿಗೆ ಅನುಸಾರವಾಗಿ ಜೀವಿಸದೆ ಆತ್ಮೀಕ ಜ್ಞಾನವನ್ನು ಹೊಂದಿಕೊಳ್ಳಲು ಪ್ರಯತ್ನಿಸು, ಒಳ್ಳೇ ಮನಸ್ಸಿನಿಂದ ಸತ್ಯವೇದವನ್ನು ಓದಲು ಮನಸ್ಸು ಕೊಡು.

ನಿನ್ನ ಸ್ವಂತ ಜ್ಞಾನದಲ್ಲಿ ಮುಂದೆ ಸಾಗಿದರೆ ಕೊನೆಗೆ ಏನಾಗುತ್ತದೋ ಅದು ನಿನಗೂ ಸಹಾ ತಿಳಿದುಕೊಳ್ಳಲು ಆಗುವುದಿಲ್ಲ, ಅದಕ್ಕಾಗಿಯೇ ನೀನು ಪೂರ್ಣ ಮನಸ್ಸಿನಿಂದ ಕರ್ತನಲ್ಲಿ ಭರವಸವಿಟ್ಟು ಆತನು ಕೊಟ್ಟಿರುವ ವಾಗ್ದಾನದಲ್ಲಿ ನೆಲೆನಿಂತುಕೋ, ಕರ್ತನು ಇಟ್ಟಿರುವ ಆಶೀರ್ವಾದಕ್ಕೆ ಮನಸ್ಸು ಕೊಡು ಆಗ ನೀನು ಇರುವಂತಹ ಜಾಗದಲ್ಲಿ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುತ್ತದೆ.

ನಿನಗೆ ನಿನ್ನ ಸ್ವಂತ ಆಲೋಚನೆಯೇ ಸಾಕಾ' ಅಥವಾ ದೇವರು ಕೊಡುವ 'ಆತ್ಮೀಕ ಜ್ಞಾನ ಬೇಕಾ?' ಯೋಚಿಸಿ ನೋಡು 'ಯಾವುದು ಬೇಕು?' ದೇವರು ಕೊಡುವ ಆತ್ಮೀಕ ಜ್ಞಾನದಿಂದಲೇ ಕರ್ತನ ಆಶೀರ್ವಾದಕ್ಕೆ ನೀನು ಪಾತ್ರವಾಗಲು ಸಾಧ್ಯ

ಪ್ರಿಯ ದೇವರ ಮಗುವೇ ಯೇಸು ಕ್ರಿಸ್ತನು “ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ” ಮತ್ತು “ನಾನೇ ಆ ಬಾಗಿಲು; ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು ಒಳಗೆ ಹೋಗುವನು, ಹೊರಗೆ ಬರುವನು, ಮೇವನ್ನು ಕಂಡುಕೊಳ್ಳುವನು" ಎಂದಿದ್ದಾನೆ. ಯೋಹಾ 10:9

ನೀನು, ನಿನಗಿಟ್ಟಿರುವ ಆಶೀರ್ವಾದವನ್ನು ಹುಡುಕು, ಆಗಲೇ ಕರ್ತನು ನಿನಗೆ ಒಳ್ಳೆ ಸ್ನೇಹಿತನಾಗಿ ನಿನ್ನ ಜೊತೆ ಇರಲು ಇಷ್ಟ ಪಡುತ್ತಾನೆ. ಆತ್ಮಿಕ ಜ್ಞಾನವನ್ನು ನೀನು ಪಡೆದುಕೊಳ್ಳುವುದಾದರೆ ಯಾವಾಗಲೂ ತುಂಬಿರುವಂತೆಯೂ “ನಿಮ್ಮ ಕಣಜಗಳು ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೋವನು ನಿಮಗೆ ಶುಭವನ್ನು ಅನುಗ್ರಹಿಸುವನು. ಆತನು ನಿಮಗೆ ಕೊಡುವ ದೇಶದಲ್ಲಿ ನಿಮಗೆ ಶುಭವನ್ನೇ ಉಂಟುಮಾಡುವನು.” (ಧರ್ಮೋ 28:8)

ಈ ಆತ್ಮೀಕ ಜ್ಞಾನ ಪಡೆದು ಕೊಳ್ಳಲು ಮನುಷ್ಯರು ಅನೇಕ ಮಾರ್ಗಗಳನ್ನು ಹುಡುಕುತ್ತಾರೆ, ಆದರೆ ಆ ದಾರಿ ಯಾವದು, ಬಾಗಿಲು ಯಾವದು ಎಂದು ಅರಿಯದವನಾಗಿ, ಅನೇಕ ದೇವರುಗಳನ್ನು ಹುಡುಕಿ; ಅನೇಕ ಪುಣ್ಯಸ್ಥಳಗಳನ್ನೂ, ಅನೇಕ ತತ್ವಗಳನ್ನೂ, ಋಷಿಗಳನ್ನೂ ಹುಡುಕಿ ಅಲೆಯುತ್ತಿರುತ್ತಾರೆ. ಇವೆಲ್ಲವುಗಳಿಂದಲೂ ದೇವರು ಯಾರೆಂದು ಅರಿಯಲು ಸಾಧ್ಯವಾಗದೇ ದೇವರ ಮೇಲೆ ಇರುವಂತಹ ಅಲ್ಪ-ಸ್ವಲ್ಪ

ವಿಶ್ವಾಸವನ್ನೂ ಕಳೆದುಕೊಂಡು, ಇಷ್ಟ ಬಂದ ಹಾಗೆ ನಡೆದು, ಜೀವನವನ್ನು ವ್ಯಭಿಚಾರಕ್ಕೂ, ಕೊಲೆ ಮಾಡಿ ರೌಡಿಯಾಗಿ ಎಲ್ಲರನ್ನು ಬೆದರಿಸಿ ಹಣ ಸಂಪಾಧಿಸಿಕೊಂಡು ಆಸ್ತಿಯನ್ನು ಮಾಡಿಕೊಳ್ಳುವುದಕ್ಕೂ, ದೀನದರಿದ್ರರಿಗೆ ಮೋಸ ಮಾಡಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತನಗೇ ಎಲ್ಲರೂ ಸಹ ಗೌರವವನ್ನು ಕೊಡ ಬೇಕೆಂದು ಎಲ್ಲರ ಮನಸ್ಸನ್ನೂ ಕೆಡಿಸುವುದಕ್ಕೂ, ಸ್ಥಾನಮಾನವನ್ನು ಸಂಪಾದಿಸಿಕೊಳ್ಳುವುದಕ್ಕೂ ಮುಂದಾಗುತ್ತಾರೆ. ಇಂತವರು ತಾವು ದೇವರನ್ನು ಹುಡುಕುತ್ತಿದ್ದೇವೆಂತಲೇ ಮರೆತು ಬಿಡುತ್ತಾರೆ. ಕಡೆಗೆ ಅಂತವರ ಬಗ್ಗೆ ಕೆಟ್ಟ-ಕಟ್ಟ ವಾರ್ತೆಗಳನ್ನು ಟಿ.ವಿ.ಗಳಲ್ಲಿ |ಕೇಳಬೇಕಾಗುತ್ತದೆ.

ಯೇಸು ಕ್ರಿಸ್ತನೇ ನಿಜವಾದ ದೇವರು ಆತನನ್ನು ಹೊರತುಪಡಿಸಿ ಸ್ವಂತ ಆಲೋಚನೆಯಿಂದ ಲೋಕದ ಜ್ಞಾನಿಗಳನ್ನು ಹುಡುಕಿಕೊಂಡು ಹೋಗುವ ಇಂತಹ ವ್ಯಕ್ತಿಗಳಿಗೆ ಆತ್ಮೀಕ ಜ್ಞಾನ ಪಡೆದುಕೊಳ್ಳುವುದು ಎಂದರೇನು ಎಂದು ಕಂಡುಕೊಳ್ಳಲು ಸಾಧ್ಯವೇ ಇಲ್ಲ. ಮತ್ತು ಅವರ ಅಭಿವೃದ್ಧಿಯು ಬರೀ ಹಣಕಾಸಿನ ಮೇಲೆಯೇ ಇರುತ್ತದೆ. ಆದರೆ ನೀನು ಕ್ರಿಸ್ತನಿಂದ ಆಯ್ಕೆಯಾಗಿರುವುದು ಬರೀ ಹಣಕಾಸಿನ ಅಭಿವೃದ್ಧಿಯನ್ನು ಕಾಣುವುದಕ್ಕಲ್ಲ. ಪ್ರತಿಯೊಂದು ಮಂಡಲದಲ್ಲಿಯೂ ಅಭಿವೃದ್ಧಿಯನ್ನು ಕಾಣುವುದಕ್ಕೆ ಎಂದು ನೀನು ತಿಳಿದಿರಬೇಕು.

ನಿನ್ನ ಜೀವನದಲ್ಲಿ ಒಳ್ಳೇ ಸಾಧನೆ ಮಾಡಿ ಗೆಲುವನ್ನು ಕಾಣಬೇಕೆಂದರೆ ನಿನ್ನಲ್ಲಿ ಕೆಲವು ಬದಲಾವಣೆಗಳಾಗಬೇಕಾಗಿದೆ. ಆಗ ಮಾತ್ರ ನೀನು ಗೆಲುವನ್ನು ಕಾಣಲು ಸಾಧ್ಯ. ನಿನ್ನ ಗೆಲುವು ನಿನಗೆ ಮಾತ್ರ ಸಂತೋಷವನ್ನು ತರದೆ ನೀನು ಇರುವ ನಿನ್ನ ದೇಶ, ರಾಜ್ಯ, ಊರು ಅಭಿವೃದ್ಧಿಯಾಗುವಂತೆ ಕರ್ತನು ಮಾಡುವನು. ನಿನಗೋಸ್ಕರ ಇಟ್ಟಿರುವ ಶುಭವನ್ನೆಲ್ಲಾ ಹೊಂದಿಕೊಳ್ಳಲು ಪ್ರಯಾಸಪಡು.

ಕರ್ತನ ಆಶೀರ್ವಾದಕ್ಕೆ ಪಾತ್ರರಾದಂತವರು, ಒಂದು ಗ್ರಾಮದಲ್ಲಿ, ಒಂದು ಪಟ್ಟಣದಲ್ಲಿ, ಒಂದು ರಾಜ್ಯದಲ್ಲಿ, ಒಂದು ದೇಶದಲ್ಲಿ ಇರುವುದಾದರೆ ಕರ್ತನು ಅಂತಹ ಸ್ಥಳವನ್ನು ಆಶೀರ್ವದಿಸಿ ಅಭಿವೃದ್ಧಿ ಪಡಿಸುತ್ತಾನೆ. ಆತನು ನಿಮಗೆ ಕೊಡುವ ದೇಶದಲ್ಲಿ ನಿಮಗೆ ಶುಭವನ್ನೇ ಉಂಟುಮಾಡುವನು." (ಧರ್ಮೋ 28:8)

**ದುಸ್ಸಹವಾಸವನ್ನು ತ್ಯಜಿಸು**

"ನೀವು ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? (2 ಕೊರಿಂಥ 6: 14-16)

ಜಾರತ್ವದಿಂದ ತನ್ನ ಜೀವನವನ್ನೇ ಹಾಳುಮಾಡಿಕೊಂಡು ಇದೇ ಒಳ್ಳೇ ಜೀವನ ಇದರಿಂದ ಏನು ಬೇಕಾದರೂ ಸಂಪಾದಿಸಬಹುದು ಎಂದು ತಿಳಿದು ಒಂದೊಂದು ಮಾರ್ಗದಲ್ಲಿ ನಡೆಯುವಂತಹ ವ್ಯಕ್ತಿಗಳ ಸಹವಾಸ ಮಾಡಬೇಡ, ನೀನು ಅವರ ಜೊತೆಯಲ್ಲಿ ಇರುವಾಗ ನಿನಗೆ ಎಷ್ಟೇ ಒಳ್ಳೇ ಬುದ್ಧಿ, ಜ್ಞಾನ ಇರುವುದಾದರೂ ಅಂತಹ ವ್ಯಕ್ತಿಗಳು ನಿನ್ನನ್ನು ತಮ್ಮ ಬಲೆಯಲ್ಲೆ ನಿಧಾನವಾಗಿ ಸಿಲುಕಿಸಿ ಬಿಡುತ್ತಾರೆ, ಕೆಟ್ಟತನಕ್ಕೆ ನೀನು ಸೋತುಹೋದರೆ ನಿನ್ನ ಜೀವನವನ್ನು ನೀನೇ ಹಾಳು

ಮಾಡಿಕೊಳ್ಳುತ್ತೀಯಾ ಎಂದು ಮರೆಯಬೇಡ. "ಕೆಟ್ಟ ತನಕ್ಕೆ ಸೋತುಹೋಗದೆ ಒಳ್ಳೆತನದಿಂದ ಕೆಟ್ಟತನವನ್ನು ಸೋಲಿಸು." (ರೋಮಾ 12:21)

ಹಳೇ ಒಡಂಬಡಿಕೆಯಲ್ಲಿ ದೇವರು ಸೊಲೊಮೋನನಿಗೆ ಸಕಲ ವೈಭವ ವನ್ನು ಕೊಟ್ಟಿದ್ದರು. ಅವನಿಗಿದ್ದಂತಹ ಜ್ಞಾನ ಈ ಲೋಕದಲ್ಲಿ ಯಾರಿಗೂ ಸಹ ಇರಲಿಲ್ಲ. ಮತ್ತು ಇಡೀ ಪ್ರಪಂಚದಲ್ಲಿ ಯಾರೂ ಕಟ್ಟುವುದಕ್ಕೆ ಆಗದಂತ 'ಆಲಯ'ವನ್ನು ಸೊಲೊಮೋನನು ಕಟ್ಟಿದನು ಎಂದು ಚರಿತ್ರೆ ಹೇಳುತ್ತದೆ. ಸಕಲ ಮಂಡಲದಲ್ಲಿಯೂ ಅಭಿವೃದ್ಧಿಯಾದಂತಹ ಸೊಲೊಮೋನನಿಗೆ ಅನ್ಯದೇಶದ ಸ್ತ್ರೀಯನ್ನು ಮದುವೆಮಾಡಿಕೊಳ್ಳಬಾರದೆಂದು ಕರ್ತನ ಆಜ್ಞೆಯಾಗಿತ್ತೆಂದು ತಿಳಿದಿದ್ದರೂ ಅನ್ಯದೇಶದ ಸ್ತ್ರೀಯನ್ನು ಆತನು ಮದುವೆಮಾಡಿಕೊಂಡನು. "ಈ ಸ್ತ್ರೀಯರು ಅವನ ಮನಸ್ಸನ್ನು ಕೆಡಿಸಿಬಿಟ್ಟರು. ಅವನು ವೃದ್ಧನಾದಾಗ ಇವರು ಅವನ ಹೃದಯವನ್ನು ಅನ್ಯದೇವತೆಗಳ ಕಡೆಗೆ ತಿರುಗಿಸಿದರು. ಈ ಕಾರಣದಿಂದ ಅವನು ತನ್ನ ದೇವರಾದ ಯೆಹೋವನಲ್ಲಿಟ್ಟಿದ್ದ ಯಥಾರ್ಥಭಕ್ತಿಯನ್ನು ಕಳೆದುಕೊಂಡನು. ತನ್ನ ತಂದೆಯಾದ ದಾವೀದನಂತೆ ನಡಿಯಲಿಲ್ಲ. ಅವನು ಚೀದೋನ್ಯರ

ಅಷ್ಟೋರೆತ್ ದೇವತೆಯನ್ನೂ ಅಮೋನಿಯರ ಮಿಲ್ಕೋಮ್ ಎಂಬ ಅಸಹ್ಯ ವಿಗ್ರಹವನ್ನೂ ಆರಾಧಿಸತೊಡಗಿ ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದನು" (1 ಅರಸು 11: 4-6)

"ಇಸ್ರಾಯೇಲ್‌ದೇವರಾದ ಯೆಹೋವನು ಸೊಲೊಮೋನನಿಗೆ ಎರಡು ಸಾರಿ ಕಾಣಿಸಿಕೊಂಡು ಅನ್ಯದೇವತೆಗಳನ್ನು ಸೇವಿಸಲೇ ಬಾರದೆಂದು ಆಜ್ಞಾಪಿಸಿದ್ದರೂ ಅವನು ಆತನ ಆಜ್ಞೆಗಳನ್ನು ಮೀರಿದ್ದರಿಂದ ಆತನು ಅವನ ಮೇಲೆ ಕೋಪಗೊಂಡು ಅವನಿಗೆ-ನೀನು ಈ ಪ್ರಕಾರ ಮಾಡಿ ನನ್ನ ವಿಧಿನಿಬಂಧನೆಗಳನ್ನು ಮೀರಿದ್ದರಿಂದ ನಿನ್ನ ರಾಜ್ಯವನ್ನು ನಿನ್ನಿಂದ ಕಿತ್ತುಕೊಂಡು ನಿನ್ನ ಸೇವಕನಿಗೆ ಕೊಡುವೆನು." (1 ಅರಸು 11 : 9-11). ಎಂದು ಕರ್ತನು ಹೇಳಿದನು. ಇದು ಎಂತಹ ಶೋಚನೀಯವಾದ ಪರಿಸ್ಥಿತಿಯಲ್ಲವೇ.

ದೇವರು ಕೊಡುವ ಆಶೀರ್ವಾದವನ್ನು ಹೊಂದಿಕೊಳ್ಳುವುದು ಬಹಳ ಕಷ್ಟ, ಪ್ರಯಾಸ ಪಟ್ಟು ಹೊಂದಿಕೊಂಡ ಮೇಲೆ ಅಂತಹ ಆಶೀರ್ವಾದವನ್ನು ಉಳಿಸಿಕೊಳ್ಳುವುದೂ ಇನ್ನೂ ಕಷ್ಟ, ಕಾಣುವ ಮನುಷ್ಯನ ಮಾತನ್ನು ಕೇಳಲು | ಎಲ್ಲರೂ ಮುಂದಾಗುತ್ತಾರೆ, ಕಾಣದೇ ಇರುವ ದೇವರ ಮಾತನ್ನು ಕೇಳಲು ಹಿಂದಾಗುತ್ತಾರೆ. ದುರ್ಜನರ ಸಹವಾಸದಿಂದ ಕರ್ತನು ಕೊಟ್ಟಿರುವ ಆಶೀರ್ವಾದವನ್ನು ಅಭಿವೃದ್ಧಿಯನ್ನು ಸೊಲೊಮೋನನು ಕಳೆದುಕೊಂಡ ರೀತಿಯಲ್ಲಿ ನೀನು ಕಳೆದುಕೊಳ್ಳಬೇಡ. ಯಾರ ಸಹವಾಸ ಮಾಡಬೇಕು ಎಂದು ವಿವೇಚಿಸಿ ಮುಂದೆಹೋಗು.

"ದೇವರು ನಮ್ಮನ್ನು ಮೂರ್ಖರಾದ ದುಷ್ಟಜನರ ಕೈಯಿಂದ ತಪ್ಪಿಸುವ ಹಾಗೆಯೂ ಪ್ರಾರ್ಥಿಸಿರಿ" (2 3:2) ದುರ್ಜನರ ಸಹವಾಸ ಮಾಡದಿದ್ದರೆ, ಅಥವಾ ದುರ್ಜನರ ಸಹವಾಸ ಇರುವುದಾದರೂ ಅಂತಹ ವ್ಯಕ್ತಿಗಳನ್ನು ಬಿಟ್ಟು ಬಿಟ್ಟರೆ ನಿನಗೇ ಒಳ್ಳೆಯದು. ಇಲ್ಲದಿದ್ದರೆ ಕರ್ತನು ಉಂಟುಮಾಡುವ 'ಶುಭ'ಕ್ಕೆ ನೀನು ಅನ್ಯನಾ/ಳಾಗುತ್ತೀಯ. ನಿನಗೆ 'ಯಾವುದು ಬೇಕು' 'ಶುಭ'ವು ಬೇಕಾ? ಅಥವಾ ದುರ್ಜನರ ಸಹವಾಸ ಬೇಕಾ? ಆಯ್ಕೆಯು ನಿನ್ನದೇ.

ಕರ್ತನ ಆಜ್ಞೆಗಳಿಗೆ ಒಳಪಡುವುದಾದರೆ ನೀನು ಎಲ್ಲೇ ಹೋದರೂ ನಿನಗೆ ಶುಭವಾಗುತ್ತದೆ. ನೀನು ಕರ್ತನ ಆಜ್ಞೆಗಳಿಗೆ ಒಳಪಡುವುದಕ್ಕೆ

ಮನಸ್ಸಿಲ್ಲದಿದ್ದರೆ ನಿನಗೆ ಎಂದಿಗೂ ಶುಭವಾಗುವುದೇ ಇಲ್ಲ. ಆಗ ನಿನ್ನಿಂದ ಅನೇಕರು ಕಷ್ಟ ಪಡುತ್ತಾರೆ. ನಿನ್ನಿಂದ ನೀನಿರುವ ಸ್ಥಳದಲ್ಲಿ ಯಾವ ಉನ್ನತಿಯೂ ಕಾಣುವುದಿಲ್ಲ. ಆಗ ಆತನಿಂದ ನೀನು ಹೊಂದಿರುವ ದೇಶದಲ್ಲಿಯೂ ನಿನಗೆ ಶುಭವಾಗದೇ ನೀನು ಪರಿತಾಪ ಪಡಬೇಕಾಗುತ್ತದೆ.

ನಿನಗೆ ಇಂದು 'ಯಾವುದು ಬೇಕು' ನಿನ್ನಿಂದ ನೀನಿರುವ ಸ್ಥಳ ನಿನ್ನ ಜನ ನಿನ್ನ ಕೆಲಸ ಆಶೀರ್ವದಿಸಲ್ಪಡಬೇಕಾ? ಅಥವಾ ಯಾರ ಬಗ್ಗೆಯೂ ಕಾಳಜಿ ನನಗಿಲ್ಲ ಎಂದು ನಿನ್ನಿಷ್ಟದ ಪ್ರಕಾರ ಜೀವಿಸುವೆಯೋ? ನಿನ್ನ ಆಯ್ಕೆ ಏನಾಗಿದೆ? ನಿನಗೆ 'ಯಾವುದು ಬೇಕು?'

**ಪ್ರಾರ್ಥಿಸು**

ಯೇಸುಕ್ರಿಸ್ತನು ಕೊಡುವ ಅಭಿವೃದ್ಧಿಯಲ್ಲಿ ನಿಲ್ಲಲು ನೀನಿರುವಂತ ಸ್ಥಳದಲ್ಲೇ ಕುಳಿತುಕೊಂಡು ಈ ಕೆಳಗಿರುವ ಪ್ರಾರ್ಥನೆಯನ್ನು ಮಾಡು ;

"ಯೇಸುವೇ ನನಗೆ ಜ್ಞಾನವನ್ನು ದಯಪಾಲಿಸು; ಆಗ ನಿನ್ನ ಮಾತು ಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ನೀನು ನನಗೋಸ್ಕರ ತೆರೆದಿರುವ ಬಾಗಿಲಿನೊಳಗೆ ನಾನು ಬರಲು ಅನುಕೂಲವಾಗುತ್ತದೆ. ಸರಿಯಾದ ಮಾರ್ಗ ತಿಳಿಯದೇ ನಾನು ಎಷ್ಟೇ ಏನೇ ಸಂಪಾದನೆ ಮಾಡಿದರೂ ಯಾವುದೂ ಲಾಭವಿಲ್ಲ. ಎಲ್ಲವೂ ನಷ್ಟವಾಗಿ ಕೆಟ್ಟತನದ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ನನ್ನನ್ನು ಒಳ್ಳೆ ದಾರಿಯಲ್ಲಿ ನಡೆಸುವ ಒಬ್ಬ ವ್ಯಕ್ತಿಯಾದರೂ ನನಗೆ ಸಿಕ್ಕಲಿಲ್ಲ; ನನಗೋಸ್ಕರವಾಗಿ ಪ್ರಾರ್ಥಿಸುವಂತ ಆತ್ಮೀಕ ವ್ಯಕ್ತಿಯ ಸಹವಾಸವನ್ನು ನನಗೆ ದಯಪಾಲಿಸು. ಸೊಲೊಮೋನನು ಮಾಡಿದ ತಪ್ಪನ್ನು ನಾನು ಮಾಡದಂತೆ ನಿನಗೆ ಇಷ್ಟವಿಲ್ಲದಿರುವಂತ ದುರ್ಜನರ ಸಹವಾಸವನ್ನು ನಾನು ಮಾಡದಂತೆ ನನಗೆ ಜ್ಞಾನವನ್ನು ದಯಪಾಲಿಸು. ಈ ಲೋಕದಲ್ಲಿ ನನಗೆ ಎಲ್ಲರಿಂದಲೂ ಮೋಸ, ವಂಚನೆಯೇ ಆಯಿತು, ಯಾವ ಪ್ರಯೋಜನವಾಗಲಿಲ್ಲ. ನಾನು ನನ್ನ ಜ್ಞಾನದಿಂದ ಹುಡುಕಿಕೊಂಡಿರುವ ಮಾರ್ಗದ ಹಾದಿಗಳು ಸರಿಯಿಲ್ಲ. ನೀನಾದರೋ ನನ್ನ ಹೃದಯದಲ್ಲಿ ಬಂದು ವಾಸಮಾಡು. ನಿನ್ನ ಜ್ಞಾನದಿಂದ ನನ್ನನ್ನು ತುಂಬಿಸು. ನೀನು ನನಗೊಸ್ಕರ ಇಟ್ಟಿರುವ ದೇಶದಲ್ಲಿ ಅಭಿವೃದ್ಧಿಯಾಗಿ ಬೆಳೆಯಬೇಕು. ಒಳ್ಳೆ ಹೆಸರನ್ನು ನಾನು ನಿನ್ನ ಜ್ಞಾನದಿಂದ ಸಂಪಾದಿಸಿಕೊಳ್ಳಬೇಕು. "ನಿಮ್ಮ ಕಣಜಗಳು ಯಾವಾಗಲೂ ತುಂಬಿರುವಂತೆಯೂ ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೋವನು ನಿಮಗೆ ಶುಭವನ್ನು ಅನುಗ್ರಹಿಸುವನು. ಆತನು ನಿಮಗೆ ಕೊಡುವ ದೇಶದಲ್ಲಿ ನಿಮಗೆ ಶುಭವನ್ನೇ ಉಂಟುಮಾಡುವನು." (ಧರ್ಮೋ 28:8) ಎನ್ನುವ ವಾಗ್ದಾನವಚನ ನನ್ನಲ್ಲಿ ನೆರವೇರುವಂತೆ ನನ್ನನ್ನು ಆಶೀರ್ವದಿಸಬೇಕೆಂದು ಯೇಸುಕ್ರಿಸ್ತನ ನಾಮದಲ್ಲಿ ಬೇಡುತ್ತೇನೆ ತಂದೆಯೇ ಆಮೆನ್."

ಈ ಪ್ರಾರ್ಥನೆಯು ನಿನ್ನ ಜೀವನವನ್ನು ಬದಲಾಯಿಸುತ್ತದೆ. ನಿನ್ನ ಜೀವನವನ್ನು ಕರ್ತನು ಉತ್ತಮವಾಗಿ ರೂಪಿಸಲು ಇಷ್ಟ ಪಡುತ್ತಿದ್ದಾನೆ, ಆಗ ನಿನ್ನ ಕಣಜಗಳು ಯಾವಾಗಲೂ ತುಂಬಿರುತ್ತದೆ. ಒಳ್ಳೆ ಸ್ನೇಹಿತರು ನಿನಗೆ ಸಿಕ್ಕುವಾಗ, ಇನ್ನೂ ಹೆಚ್ಚಾಗಿ ಕರ್ತನಲ್ಲಿ ಬೆಳೆಯಲು ಸಾಧ್ಯವಾಗುತ್ತದೆ. ನಿನ್ನ ಒಳ್ಳೇ ನಡತೆಯನ್ನು ನೋಡಿ ಜನರು ನಿನ್ನನ್ನು ಪ್ರೀತಿಸಿ ನಿನ್ನ ಸ್ನೇಹವನ್ನು ಬೆಳೆಸುತ್ತಾರೆ.

# 4. ನಿನ್ನ ಹೃದಯದಲ್ಲಿ ಯೇಸು

"ನೀವು ನಿಮ್ಮ ದೇವರಾದ ಯೆಹೋವನ ಆಜ್ಞೆಗಳನ್ನು ಅನುಸರಿಸಿ ಆತನು ಹೇಳಿದ ಮಾರ್ಗದಲ್ಲೇ ನಡೆದರೆ ಆತನು ವಾಗ್ದಾನಮಾಡಿದಂತೆ ನಿಮ್ಮನ್ನು ತನಗೋಸ್ಕರ ಮೀಸಲಾದ ಜನರನ್ನಾಗಿ ಸ್ಥಾಪಿಸುವನು, ಭೂಮಿಯಲ್ಲಿರುವ ಎಲ್ಲಾ ಜನಗಳೂ ನಿಮ್ಮನ್ನು ಯೆಹೋವನ ಜನರೆಂದು ತಿಳಿದುಕೊಂಡು ನಿಮಗೆ ಭಯಪಡುವರು." (ಧರ್ಮೋ 28:9,10)

**ಕರ್ತನ ಆಜ್ಞೆಯನ್ನು ಅನುಸರಿಸು**

"ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ" (ಯೋಹಾನ 14:15) "ಯಾರಾದರೂ ನನ್ನನ್ನು ಪ್ರೀತಿಸುವವ ನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು;" (ಯೋಹಾನ 14:23) "ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ` ನನ್ನನ್ನು ಪ್ರೀತಿಸುವವನು" (ಯೋಹಾನ 14:21) "ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ. ಆತನ ಆಜ್ಞೆಗಳು - ಭಾರವಾದವುಗಳಲ್ಲ." (1 ಯೋಹಾನ 5:3)

"ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವದಂದರೆ ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು. ಎಂಬದೇ. ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಗ್ರಂಥಕ್ಕೂ ಆಧಾರವಾಗಿವೆ." (ಮತ್ತಾಯ 22:37-40)

ಕರ್ತನ ಆಜ್ಞೆಗಳಿಗೆ ಅನುಸಾರವಾಗಿ ನಡೆಯಬೇಕೆಂದು ಆತನ ಅಪ್ಪಣೆಯಾಗಿದೆ. ನಿನ್ನ ಹೃದಯದಲ್ಲಿ ಯೇಸುಕ್ರಿಸ್ತನಿಗೆ ಪ್ರಥಮ ಸ್ಥಾನವನ್ನು ನೀನು ಕೊಟ್ಟಿದ್ದೀಯೋ ಇಲ್ಲವೋ ಎಂದು ಆತನು ಹೆಜ್ಜೆ ಹೆಜ್ಜೆಯಲ್ಲೂ ನಿನ್ನನ್ನು ಪರೀಕ್ಷಿಸುತ್ತಾನೆ. ಪ್ರತಿಯೊಂದು ಸಂದರ್ಭದಲ್ಲೂ ಆತನು ನಿನ್ನ ಪ್ರೀತಿಯನ್ನು ಬಯಸುವವನಾಗಿದ್ದಾನೆ.

ನೀನು ಆತನಿಗೆ ಮೀಸಲಾದ ವ್ಯಕ್ತಿಯಾಗಿರಬೇಕಾದರೆ ಆತನ ಮಾರ್ಗದಲ್ಲಿ ನಡೆಯುವ ವ್ಯಕ್ತಿಯಾಗಿರಬೇಕೆಂದು ಕರ್ತನು ಆಶಿಸುತ್ತಾನೆ.

ನಿನ್ನಲ್ಲಿರುವ ಭೂ ಸಂಬಂಧವಾದ ಭಾವನೆಗಳನ್ನು ನಿನ್ನಿಂದ ಸಾಯಿಸು; ಅದು ನಿನ್ನಿಂದ ತೊಲಗಿಹೋಗಬೇಕು, ಲೋಕದ ಆಡಂಬರ, ಕೆಟ್ಟ-ಕಟ್ಟ ಕಾರ್ಯಗಳನ್ನು ಮಾಡಿ ಪಾಪಕ್ಕೆ ದಾಸತ್ವ ಆಗಿರುವ ಪ್ರತಿಯೊಂದು ಆ ಅಭಿಲಾಷೆಗಳನ್ನು ನಿನ್ನಿಂದ ತ್ಯಜಿಸುವುದಾದರೆ ಮಾತ್ರ ಯೇಸು ನಿನ್ನ ಹೃದಯದಲ್ಲಿ ವಾಸವಾಗಲು ಸಾಧ್ಯವಾಗುತ್ತದೆ. ಇವೆಲ್ಲಾ ನಿನ್ನ ಜೀವನವನ್ನು ನಾಶಮಾಡುತ್ತದೆ. ನಿನಗೆ ತಿಳಿಯದೇ ಈ ಎಲ್ಲಾ ಕಾರ್ಯ ನಿನ್ನೊಳಗೆ ಕಾರ್ಯ ನಡೆಸುತ್ತಿದೆ. ಇದರಿಂದ ನಿನಗೆ ಎಷ್ಟು

ನಷ್ಟವಾಗಿದೆಯೋ ಯೋಚಿಸು! ಅದಕ್ಕಾಗಿ ಯೇಸು ನಿನ್ನನ್ನು ಪ್ರೀತಿಸಿ ಎಚ್ಚರಿಸುತ್ತಿದ್ದಾನೆ ನಿನಗೆ ಇಂದು 'ಯಾವುದು ಬೇಕು?' ಈ ಲೋಕಾನಾ? ಯೇಸುವಿನ ಪ್ರೀತಿನಾ! ನೀನೇ ಆಯ್ಕೆ ಮಾಡಿಕೋ!

ಲೋಕದ ಜನರೆಲ್ಲಾ ನಿನ್ನನ್ನು ಕಾಣುವಾಗ ನೀನು ಅವರಿಗೆ ಯಾವ ವ್ಯಕ್ತಿಯಾಗಿ ಕಾಣಿಸುತ್ತಿದ್ದೀಯಾ? ಆತ್ಮೀಕ ವ್ಯಕ್ತಿಯಾಗಿಯೋ ಅಥವಾ ಲೌಕಿಕ ವ್ಯಕ್ತಿಯಾಗಿಯೋ? ನೀನು ಲೌಕಿಕ ವ್ಯಕ್ತಿಯಾಗಿ ಕಾಣಿಸುತ್ತಿರುವುದಾದರೆ ಲೋಕದಲ್ಲಿರುವ ಪ್ರತಿಯೊಂದು ಜನರಿಗೆ ನೀನು ಭಯ ಪಡುತ್ತಾ ಜೀವಿಸಬೇಕು! ನೀನು ಆತ್ಮೀಕ ವ್ಯಕ್ತಿಯಾದರೆ ಆ ಲೋಕದ ಜನರು ನಿನ್ನಲ್ಲಿರುವ ವಿಶೇಷತೆಯನ್ನು ಕಂಡು ಅವರಿಗೆ ಅರಿವಿಲ್ಲದಂತೆಯೇ ನಿನ್ನನ್ನು ಕಂಡು ಭಯ ಪಡುತ್ತಿರುತ್ತಾರೆ.

ನೀನು ಯಾವ ರೀತಿಯಲ್ಲಿ ಈ ಲೋಕದಲ್ಲಿ ಕಾಣಿಸಲು ಬಯಸುತ್ತಿದ್ದೀಯಾ? “ಕೆಟ್ಟವರು ಒಳ್ಳೆಯವರಿಗೆ ಬಾಗುವರು” (ಜ್ಞಾನೋಕ್ತಿ 14:19) ನಿನ್ನ ಹೃದಯದಲ್ಲಿ ಯೇಸುಕ್ರಿಸ್ತನು ಇರುವುದಾದರೆ ನೀನು ಒಳ್ಳೆಯ ವ್ಯಕ್ತಿಯಾಗಿರುವೆ.

ಯೇಸು ಕ್ರಿಸ್ತನು ನಿನ್ನನ್ನು ಪ್ರೀತಿಸುತ್ತಿರುವುದರಿಂದ ನಿನ್ನನ್ನು ಉನ್ನತಿಗೆ ತರಲು ಯಾವಾಗಲೂ ಇಷ್ಟ ಪಡುತ್ತಾರೆ. ಕರ್ತನ ಹೃದಯವನ್ನು ಅರ್ಥಮಾಡಿಕೊಳ್ಳಲು 'ಸತ್ಯವೇದ'ವು ನಿನಗೆ ಸಹಾಯ ಮಾಡುತ್ತದೆ ಮತ್ತು ದೇವರ ಹೃದಯವು ಹೇಗಿದೆ, ನಿನ್ನ ಸುತ್ತಮುತ್ತಲು ಇರುವ ಜನರ ಹೃದಯವು ಹೇಗಿದೆ ಎಂದು ತಿಳಿಯಲು ನಿನಗೆ ಸಾಧ್ಯವಾಗುತ್ತದೆ. ಆಗ ಯಾವುದು ಸರಿ, ಯಾವುದು ತಪ್ಪು ಎಂದು ಸ್ಪಷ್ಟವಾಗಿ ನೀನು ತಿಳಿದುಕೊಳ್ಳಬಹುದು ಮತ್ತು ಸತ್ಯ ಯಾವುದು ಸುಳ್ಳು ಯಾವುದು ಎಂದು ನಿನಗೆ ಅರ್ಥವಾಗುತ್ತದೆ.

ನೀನು ನಿನ್ನ ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆಯುತ್ತಿರುವುದಾದರೆ, ನೀನು ದೇವರ ವಾಕ್ಯದ ಪ್ರಕಾರ ನಿನ್ನ ಜೀವನವನ್ನು ಸರಿಪಡಿಸಿಕೊಂಡು ನಿನ್ನಲ್ಲಿರುವ ಎಲ್ಲಾ ಕೆಟ್ಟತನದಿಂದ ದೂರವಾಗಿ ಯೇಸು ಕ್ರಿಸ್ತನ ಕಟ್ಟಳೆಗಳಿಗೆ ವಿಧೇಯನಾಗಲು ಪ್ರಯತ್ನಿಸು. “ನಿಮಗಿರುವ ನಂಬಿಕೆಗೆ ಸದ್ಗುಣವನ್ನೂ ಸದ್ಗುಣಕ್ಕೆ ಜ್ಞಾನವನ್ನೂ ಜ್ಞಾನಕ್ಕೆ ದಮೆಯನ್ನೂ ದಮೆಗೆ ತಾಳ್ಮೆಯನ್ನೂ ತಾಳೆಗೆ ಭಕ್ತಿಯನ್ನೂ ಭಕ್ತಿಗೆ ಸಹೋದರಸ್ನೇಹವನ್ನೂ ಸಹೋದರಸ್ನೇಹಕ್ಕೆ ಪ್ರೀತಿಯನ್ನು ಕೂಡಿಸಿರಿ.” (2 ಪೇತ್ರ 1:5-7) ಆಗ ಕರ್ತನ ಮೇಲೆ ನಿನಗೆ ಭಕ್ತಿ ಹೆಚ್ಚಾಗುತ್ತದೆ. ಭಕ್ತಿ ಹೆಚ್ಚಾದರೆ ನಿನ್ನ ಹೃದಯದಲ್ಲಿರುವ ಸಕಲ ವಿಚಾರಗಳನ್ನು ಎಲ್ಲಾ ನೋವುಗಳನ್ನು ಯೇಸು ಕ್ರಿಸ್ತನೊಟ್ಟಿಗೆ ಹಂಚಿಕೊಳ್ಳಲು ಸುಲಭವಾಗುತ್ತದೆ.

ಯೇಸು ಕ್ರಿಸ್ತನ ಆಜ್ಞೆಗಳನ್ನು ಅನುಸರಿಸಿ ನಡೆದರೆ ಮಾತ್ರ ನೀನು ನಿನಗಿಟ್ಟಿರುವ ವಾಗ್ದನವನ್ನು ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ನೀನು ನಿನ್ನ ಇಷ್ಟದ ಪ್ರಕಾರ ಜೀವನ ನಡೆಸುತ್ತಾ ಕ್ರಿಸ್ತನ ಆಜ್ಞೆಗಳಿಗೆ ಓರೆಯಾಗಿ ನಡೆದರೆ ಆತನು ನಿನಗಿಟ್ಟಿರುವ ಯಾವ ವಾಗ್ದಾನವನ್ನೂ ನೀನು ಹೊಂದಿಕೊಳ್ಳಲು ಸಾಧ್ಯವಿಲ್ಲ. ಕ್ರಿಸ್ತನ ಆಜ್ಞೆಗಳಿಗೆ ನಿನ್ನನ್ನು ಒಪ್ಪಿಸಿಕೊಡುತ್ತೀಯಾ ಅಥವಾ ಆತನ ಕಟ್ಟಳೆಗಳನ್ನು ಅನುಸರಿಸಲು ಮನಸ್ಸಿಲ್ಲ ಎಂದು ಹೇಳುತ್ತೀಯಾ, ಇಂದು ನಿನಗೆ ಯಾವುದು ಬೇಕು?'

ನೀನು ದೇವರ ಆಲಯ

ಯೇಸು ನಿನ್ನ ಹೃದಯದಲ್ಲಿ ಬಂದರೆ ಅನೇಕ ಬದಲಾವಣೆಗಳು ನಿನ್ನ ಜೀವನದಲ್ಲಿಯೂ ನಿನ್ನನ್ನು ದೃಷ್ಟಿಸಿ ನೋಡುವವರ ಜೀವನದಲ್ಲಿಯೂ ಆಗುತ್ತದೆ.

ನೀವ ದೇವರ ಆಲಯವಾಗಿದ್ದೀರೆಂದೂ ದೇವರ ಆತನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೇ? ಯಾವನಾದರೂ ದೇವರ ಆಲಯವನ್ನು ಕೆಡಿಸಿದರೆ ದೇವರು ಅವನನ್ನು ಕೆಡಿಸುವನು. ಯಾಕೆಂದರೆ ದೇವರ ಆಲಯವು ಪವಿತ್ರವಾದದ್ದು. ಆ ಆಲಯವು ನೀವೇ." (ಕೊರಿಂಥ ೩.16,17) ನಿನ್ನ ಹೃದಯದಲ್ಲಿ ಇಂದು ಯೇಸುಕ್ರಿಸ್ತನಿಗೆ ಸ್ಥಾನವನ್ನು ಕೊಟ್ಟಿದ್ದೀಯಾ? ಕರ್ತನಿಗೆ ಗುಡಿ-ಗೋಪುರಗಳು ಬೇಕಿಲ್ಲ ನಿನ್ನ ಹೃದಯಬೇಕು ಆತನಿಗೆ ನೀನು ಕೊಡುವ ಯಜ್ಞ- ಹೋಮಗಳು ಬೇಕಿಲ್ಲ | ನಿನ್ನ ಹೃದಯಬೇಕು ಯಾಕೆಂದರೆ "ಕುಗ್ಗಿದ ಮನಸ್ಸೆ ಕರ್ತನಿಗೆ ಇಷ್ಟ ಯಜ್ಞವಾಗಿದೆ." (ಕೀರ್ತನೆ 51:17) ನೀನು ಕರ್ತನಿಗೆ ಅವಶ್ಯವಾಗಿದ್ದೀಯಾ, ನಿನ್ನ ಮನಸ್ಸಿಗೆ ಕರ್ತನು ವಿಶ್ರಾಂತಿಯನ್ನು ಕೊಡಲು ಇಚ್ಛಿಸುತ್ತಿದ್ದಾನೆ. "ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬದು ನಿಮಗೆ ತಿಳಿಯದೋ?" (1 ಕೊರಿಂಥ 6:19) ನಾವು ದೇವರ ಆಲಯವಾಗಿದ್ದೇವೆಂದು ಈ ಲೋಕದಲ್ಲಿ ಜೀವಿಸುವ ಪ್ರತಿಯೊಂದು ಮನುಷ್ಯರಿಗೆ ತಿಳಿದಿದೆ.

ಸತ್ಯದೇವರನ್ನು ಅಂಗೀಕಾರ ಮಾಡಿಕೊಂಡಿರುವ ನೀನು ನಿನ್ನ ಹೃದಯವನ್ನು ಈ ಲೋಕದ ಮನುಷ್ಯರಿಗೆ ಕೊಟ್ಟಿದ್ದೀಯಾ ಅಥವಾ ದೇವರಿಗೇ ಕೊಟ್ಟಿದ್ದೀಯಾ? ದೇವರಿಗೆ ನಿನ್ನ ಮೇಲೆ ಬಹಳಷ್ಟು ಪ್ರೀತಿಯಿರುವುದರಿಂದ "ನಾನು ಯುಗದ ಸಮಾಪ್ತಿಯವರೆಗೂ ನಿನ್ನ ಸಂಗಡ ಇರುತ್ತೇನೆ" (ಮತ್ತಾಯ 28:20) ಎಂದು ವಾಗ್ದಾನ ಮಾಡಿದ್ದಾನೆ.

ಪ್ರಿಯ ದೇವರ ಮಗುವೇ, ಯೇಸು ನಿನ್ನ ಹೃದಯದಲ್ಲಿ ಬರದಿದ್ದರೆ ನೀನು ಯಾವ ರೀತಿಯಲ್ಲಿ ಬದಲಾವಣೆ ಕಾಣಲು ಸಾಧ್ಯವಾಗುತ್ತದೆ. ಕರ್ತನನ್ನು ಹುಡುಕದೇ, ಎಲ್ಲವನ್ನು ನಷ್ಟಮಾಡಿಕೊಂಡು ಒಂಟಿಯಾಗಿ ಅಲೆಯುತ್ತಿದ್ದರೆ ನಿನ್ನ ಪರಿಸ್ಥಿತಿಯಿಂದ ಯಾರೂ ನಿನ್ನನ್ನು ಮೇಲಕ್ಕೆ ಎತ್ತು ಮುಂದಾಗುವುದಿಲ್ಲ. ಒಂದು ವೇಳೆ ಈ ಲೋಕದ ವ್ಯಕ್ತಿಗಳಿಂದ ನೀನು ಸಹಾಯ ಪಡೆದು ಈಗ ಇರುವ ಪರಿಸ್ಥಿತಿಯಿಂದ ಉತ್ತಮವಾದ ಸ್ಥಾನಕ್ಕೆ ಮೇಲೆತ್ತಲ್ಪಟ್ಟರೂ ನಿನ್ನನ್ನು ಕಂಡಾಗಲೆಲ್ಲಾ ತಮ್ಮಿಂದ ನೀನು ಮೇಲೆ ಬಂದಿದ್ದೀಯೆಂದು ನಿನ್ನನ್ನು ಕೀಳಾಗಿ ನೋಡುತ್ತಾರೆ. ನಿನ್ನ ಬಗ್ಗೆ ಅನೇಕರಿಗೆ ಕೀಳಾಗಿಯೇ ಸಾಕ್ಷಿಕೊಡುತ್ತಾರೆ. ಇದರಿಂದ ನಿನಗೆ ದುಃಖ ವೇದನೆಯೇ ಉಳಿಯುತ್ತದೆ.

ಆದರೆ, ದೇವರಿಗೆ ನಿನ್ನ ಹೃದಯದಲ್ಲಿ ಪ್ರಥಮ ಸ್ಥಾನ ಕೊಟ್ಟರೆ "ನಿಮ್ಮನ್ನು ತನಗೋಸ್ಕರ ಮೀಸಲಾದ ಜನರನ್ನಾಗಿ ಸ್ಥಾಪಿಸುವನು" ಮತ್ತು ನಿನಗೆ ನಿರಂತರವಾದ ಸಂತೋಷವಿರುತ್ತದೆ. ಮನುಷ್ಯರಿಗೆ ಮಾತ್ರ ಸ್ಥಾನ ಕೊಟ್ಟರೆ ಅಲ್ಪ ಸಮಯ ಮಾತ್ರ ಸಂತೋಷ ನಂತರ ನಿನಗೂ ನಿನ್ನ ಜೊತೆಯಿರುವ ವ್ಯಕ್ತಿಗೂ ಯಾವಾಗಲೂ ಮನಸ್ತಾಪ-ದುಃಖ-ಬೇಸರ ಕಿತ್ತಾಟ ಇದ್ದೇ ಇರುತ್ತದೆ.

ಯೇಸು ಕ್ರಿಸ್ತನಲ್ಲಿ ಪ್ರೀತಿಯನ್ನು ಇಟ್ಟುಕೊಂಡು ಕರ್ತನಿಗೆ ಹೃದಯದಲ್ಲಿ ಸ್ಥಾನ ಕೊಟ್ಟಿರುವವರು ಈ ಲೋಕದಲ್ಲಿ ಸಮಾಧಾನವಾಗಿ ಜೀವಿಸಲು ಸಾಧ್ಯ.

"ಏನು, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂಬದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವದಿಲ್ಲವೋ? ಆತನು ನಿಮ್ಮಲ್ಲಿಲ್ಲದಿದ್ದರೆ ನೀವು ಅಯೋಗ್ಯರೇ." (2ಕೊ 13:5) ನಿನಗೆ "ಯಾವುದು ಬೇಕು" ಕರ್ತನು ನಿನ್ನ ಹೃದಯದಲ್ಲಿ ಜೀವಿಸುವುದು ನಿನಗೆ ಬೇಕಾ ಅಥವಾ ಲೋಕದಲ್ಲಿರುವ ಕಣ್ಣಿಗೆ ಕಾಣಿಸುವ ವ್ಯಕ್ತಿಗಳಿಗೇ ನಿನ್ನ ಹೃದಯವನ್ನು ಮೀಸಲಾಗಿ ಇಟ್ಟುಕೊಳ್ಳುವಿಯೋ?

**ಪೌಲನು**

ಅಪೊಸ್ತಲನಾದ ಪೌಲನಿಗೆ ಜ್ಞಾನ ತಿಳುವಳಿಕೆ ಅಪಾರವಾಗಿತ್ತು. ಆತನು ಇಸ್ರಾಯೇಲ್ ವಂಶದವನು, ಫರಿಸಾಯನು, ನೇಮನಿಷ್ಟೆಯನ್ನು ಅನುಸರಿಸುವದರಲ್ಲಿ ಅಗ್ರಸ್ತನು ಧರ್ಮಶಾಸ್ತ್ರದ ನಿಯಮಗಳ ಪ್ರಕಾರ ನಿರ್ದೋಷಿ ಮಾತ್ರವಲ್ಲ, ಅವನೊಬ್ಬ ತತ್ವಜ್ಞಾನಿ, ಇವೆಲ್ಲವನ್ನೂ ಅವನು ಹೆಚ್ಚಳವಾಗೆಣಿಸಿದ್ದ ಕಾಲವು ಒಂದುಂಟು,

ಪೌಲನು ನಿನ್ನ ಹಾಗೆ ಒಬ್ಬ ಸಾಮಾನ್ಯವಾದ ಮನುಷ್ಯ ಅವನು ಕ್ರೈಸ್ತ ಮಾರ್ಗವನ್ನು ದ್ವೇಷಿಸಿ ಅನೇಕರನ್ನು ಹಿಂಸಿಸಿದನು. ಕಡೆಗೆ ಯೇಸುಕ್ರಿಸ್ತನು ಅವನಿಗೆ ಕಾಣಿಸಿಕೊಂಡು ಅವನನ್ನು ಸಂಪೂರ್ಣವಾಗಿ ಬದಲಾವಣೆ ಮಾಡಿದನು. ಪೌಲನು ಒಳ್ಳೇ ವ್ಯಕ್ತಿಯಾಗಿ ಬದಲಾವಣೆಯಾಗಿ ಯೇಸುವಿಗಾಗಿ ಉಸಿರಿರುವವರೆಗೂ ನಂಬಿಗಸ್ಥನಾದ ಸೇವಕನಾಗಿ ಜೀವಿಸಿದನು

ಪೌಲನು, ಕ್ರಿಸ್ತನ ಪ್ರೀತಿ, ಆತನ ಆದರಿಸುವಿಕೆಯ ಮುಂದೆ ತಾನು ಕಲಿತ ಜ್ಞಾನವನ್ನು ವ್ಯರ್ಥವೆಂದು ಎಣಿಸಿದ್ದಾನೆ. “ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವುದೇ ಅತಿಶ್ರೇಷ್ಠವಾದದ್ದೆಂದು ತಿಳಿದಿದ್ದೇನೆ.” (ಫಿಲಿ 3:8) ಇದಕ್ಕಾಗಿಯೇ ಎಲ್ಲವನ್ನೂ ನಷ್ಟವೆಂದು ಎಣಿಸುತ್ತೇನೆ, ಎಲ್ಲವನ್ನು ಕಸವೆಂದು ಎಣಿಸುತ್ತೇನೆ ಎಂದಿದ್ದಾನೆ,

ಪೌಲನು ಕರ್ತನಿಗೆ ತನ್ನ ಹೃದಯದಲ್ಲಿ ಪ್ರಥಮ ಸ್ಥಾನವನ್ನು ಕೊಟ್ಟು, ಯೇಸುಕ್ರಿಸ್ತನ ಆಜ್ಞೆಗಳಿಗೆ ತನ್ನನ್ನು ತಗ್ಗಿಸಿಕೊಂಡು ಒಪ್ಪಿಸಿಕೊಟ್ಟನು. ಆದುದರಿಂದ ಕರ್ತನು ಪೌಲನ ಜೀವನದಲ್ಲಿ ಮಾಡಿದಂತಹ ಎಲ್ಲಾ ವಾಗ್ದಾನಗಳು ಪೌಲನಲ್ಲಿ ನೆರವೇರಿತು. ಪೌಲನ ಮಾಡಿದಂತಹ ಕಠಿಣವಾದ ಸೇವೆಯು ಇಂದೂ ನಮ್ಮೆಲ್ಲರಿಗೆ ಮಾರ್ಗದರ್ಶಿಯಾಗಿಯೇ ನಿಂತಿದೆ.

ಪೌಲನ ಹಾಗೆ ಮಾರ್ಪಡಲು ನೀನು ಬಯಸುತ್ತೀಯೋ? ಅಥವಾ ನೀನು ಇದ್ದ ರೀತಿಯಲ್ಲೇ ಇರಲು ಮುನ್ನುಗ್ಗುತ್ತೀಯೋ ಚಿಂತಿಸು. 'ಯಾವುದು ಬೇಕು?” ನಿನಗೆ ಯಾವ ಜೀವನ ಬೇಕು?

**ನೀನು ಕರ್ತನ ಮಗುವಾಗಿ ಕಾಣಿಸುವಾಗ**

“ಭೂಮಿಯಲ್ಲಿರುವ ಎಲ್ಲಾ ಜನಗಳೂ ನಿಮ್ಮನ್ನು ಯೆಹೋವನ ಜನರೆಂದು ತಿಳಿದುಕೊಂಡು ನಿಮಗೆ ಭಯಪಡುವರು.” (ಧರ್ಮೋ 28:10)

ನಿನ್ನೊಳಗೆ ಪಾಪವು ಮರೆಯಾಗಿ ಕೆಲಸಮಾಡುವಾಗ, ನಿನ್ನ ಜೀವನದಲ್ಲಿ ಖಂಡಿತವಾಗಿಯೂ ಸೋಲುಗಳು ಉಂಟಾಗುತ್ತದೆ. ಆದರೆ ನೀನು ಯೇಸುಕ್ರಿಸ್ತನನ್ನು ಪ್ರೀತಿಮಾಡುತ್ತಾ ನಿನ್ನ ತಪ್ಪುಗಳನ್ನು ಪಶ್ಚಾತ್ತಾಪದಿಂದ ಕರ್ತನ ಬಳಿ ಅರಿಕೆ ಮಾಡಿ ಬಿಟ್ಟು ಬಿಡುವುದಾದರೆ, ಅದಕ್ಕಾಗಿ ಕರ್ತನ ಸಹಾಯವನ್ನು ಕೇಳುವುದಾದರೆ ಆತನು ನಿನ್ನನ್ನು ನಿನ್ನ ಪಾಪದಿಂದ ಬಿಡುಗಡೆಮಾಡಿ ನಿನಗೆ ಸಮಾಧಾನವನ್ನು ಅನುಗ್ರಹಿಸುತ್ತಾನೆ. “ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ

ನಮ್ಮನ್ನು ನಾವೇ ಮೋಸ ಪಡಿಸಿಕೊಳ್ಳುತ್ತೇವೆ. ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು." (1 ಯೋಹಾನ 1:7-9)

ದೇವರ ಮಕ್ಕಳೇ, ಲೌಕಿಕ ಜ್ಞಾನ, ವಿದ್ಯಾಜ್ಞಾನ ಇವೆಲ್ಲವೂ ಇದ್ದರೂ ಕ್ರಿಸ್ತನನ್ನು ಕುರಿತು ಅರಿತುಕೊಳ್ಳುವ ಆತ್ಮೀಕ ಜ್ಞಾನ ಮತ್ತು ತಿಳಿವಳಿಕೆಯೇ ಮೇಲಾದುದು, ಈ ಆತ್ಮೀಕ ಜ್ಞಾನದಲ್ಲಿ ನೀನು ನಡೆಯುವಾಗ ನಿನ್ನನ್ನು ಕಾಣುವವರು ಪಾಪದಿಂದ ಬಿಡುಗಡೆಯನ್ನು ಹೊಂದಿಕೊಂಡು ವ್ಯತ್ಯಾಸವಾಗಿ ಜೀವನ ನಡೆಸುತ್ತಿರುವ ನಿನ್ನಲ್ಲಿರುವ ವಿಶೇಷತೆಯನ್ನು ಗಮನಿಸಿ ನಿನಗೆ ಭಯಪಡುವರು,

ಕರ್ತನು ಮಾರ್ಗದರ್ಶಿಯಾಗಿ ನಿನ್ನನ್ನು ನಡೆಸುತ್ತಾನೆ. ನೀನು ಆತನ ಮಾತುಗಳನ್ನು ಅನುಸರಿಸಿ ನಡೆಯುವಾಗ ನಿನಗೆ ಅವಶ್ಯವಿರುವ ಎಲ್ಲಾ ಕೋರಿಕೆಗಳನ್ನು ನೆರವೇರಿಸುವುದು ಮಾತ್ರವಲ್ಲದೇ "ನಾನಿರುವ ಸ್ಥಳದಲ್ಲಿಯೇ ನೀವು ಸಹ ಇರಬೇಕು" (ಯೋಹಾನ 14:3) ಎಂದು ತೀರ್ಮಾನಿಸಿ, ನಿನ್ನ ಹೆಸರನ್ನು ಪರಲೋಕದಲ್ಲಿರುವ 'ಜೀವಭಾದ್ಯರ ಪಟ್ಟಿಯಲ್ಲಿ ಬರೆದುಕೊಳ್ಳುತ್ತಾನೆ.

ನೀನು ಭಕ್ತಿಯಿಂದ ಪ್ರಾರ್ಥನೆ ಮಾಡುತ್ತಾ ಎಡೆಬಿಡದೆ ಆತನ ಮಾತುಗಳನ್ನು ಅನುಸರಿಸಿ ನಡೆದುಕೊಂಡು ಹೋಗುವುದಾದರೆ ನಿನ್ನ ಜೀವಮಾನದಲ್ಲೆಲ್ಲಾ ನಿನಗೆ ಯಾವುದಕ್ಕೂ ಕೊರತೆ ಆಗುವುದಿಲ್ಲ. ಆತನು ನಿನಗೆ ಹೇಳಿರುವ ಪ್ರತಿಯೊಂದು ಮಾತುಗಳನ್ನು ನೆರವೇರಿಸುವ ಸರ್ವಶಕ್ತನಾದ ದೇವರಾಗಿದ್ದಾನೆ. ಯೇಸುವೇ ನಿಜವಾದ ದೇವರೆಂದು ನಿನ್ನಿಂದಲೇ ನಿರೂಪಿಸುತ್ತಾನೆ. ನೀನೇ ಭೂಮಿಯ ಕಟ್ಟ ಕಡೆಯವರೆಗೂ ಹೋಗಿ ಯೇಸುವಿಗಾಗಿ ಸಾಕ್ಷಿಯಾಗಿ ನಿಲ್ಲುವಿ.

ಯೇಸುವಿನ ಜ್ಞಾನ, ತಿಳುವಳಿಕೆ ನಿನ್ನಲ್ಲಿ ಬಂದಾಗ, ನಿನ್ನನ್ನು ಹುಡುಕಿಕೊಂಡು ಎಲ್ಲರೂ ನಿನ್ನ ಬಳಿಗೆ ಬರುತ್ತಾರೆಯೇ ಹೊರತು ನೀನು ಅವರನ್ನು ಹುಡುಕಿಕೊಂಡು ಹೋಗುವುದಿಲ್ಲ. ಇದೇ ಯೇಸು ನಿನ್ನ ಜೀವನದಲ್ಲಿ ಮಾಡುವ ಅತೀ ದೊಡ್ಡ ಅದ್ಭುತಕಾರ್ಯ,

ನೀನು ಯಾವಾಗಲೂ ಕ್ರಿಸ್ತ ಯೇಸುವಿನಲ್ಲಿ ಇದ್ದೇನೆ ಎಂದು ನಿನ್ನ ಬಾಯಿಂದ ಅರಿಕೆ ಮಾಡುತ್ತಲೇ ಇರು ಆಗ ನಿನ್ನಲ್ಲಿ ಆಗುವಂತಹ ಬದಲಾವಣೆ ನಿನ್ನ ಜೊತೆ ಇರುವ ವ್ಯಕ್ತಿಗಳು ನೋಡಿ ಇನ್ನೂ ಹೆಚ್ಚಾಗಿ ಆಶ್ಚರ್ಯಪಡುತ್ತಾರೆ.

ಯಾಕೆಂದರೆ ಕಣ್ಣಿಗೆ ಕಾಣುವುದನ್ನೆಲ್ಲಾ ಪಡೆಯಬೇಕೆಂತಲೂ, ಆಶಿಸುವುದನ್ನು ಹೊಂದಬೇಕೆಂಬ ಆಸೆಯಿಂದಲೂ ಓಡುವಂತಹ ವ್ಯಕ್ತಿಗಳು ಈ ಪ್ರಪಂಚದಲ್ಲಿ ಹೆಚ್ಚಾಗಿದ್ದಾರೆ, ಆದರೆ ನಿನ್ನನ್ನು ಕಾಣುವವರು ಕ್ರಿಸ್ತನ ಜ್ಞಾನ ತಿಳುವಳಿಕೆಗಿಂತ ಉತ್ತಮವಾದದ್ದು ಇನ್ಯಾವುದೂ ಇಲ್ಲವೇ ಇಲ್ಲ ಎಂದು ಕಲಿತುಕೊಳ್ಳಬೇಕು.

ಮನುಷ್ಯರಿಂದ ಒಂದು ವೇಳೆ ನೀನು ನಡೆಸಲ್ಪಡುವುದಾದರೆ ಅದು ಅಲ್ಲ ಸಮಯಕ್ಕೆ ಮಾತ್ರ ಸಮಾಧಾನ ಕೊಡುತ್ತದೆ ಹೊರತು ಶಾಶ್ವತವಾಗಿ ಅಲ್ಲ. ಏನೇ ಸಾಧನೆ ಮಾಡುವುದಾದರೂ ಕ್ರಿಸ್ತನು ಕೊಡುವ ತಿಳುವಳಿಕೆಯಿಂದ ಮುಂದೆ ಹೋಗುವುದಾದರೆ ತುಂಬಾ ಸಮಾಧಾನ ಸಿಗುತ್ತದೆ.

ನೀನು ಬದಲಾವಣೆಯಾಗುವಾಗ ನಿನ್ನಿಂದ ಅನೇಕರು ಆಶೀರ್ವದಿಸಲ್ಪಡುವರು. ಯೆಶಾಯ 60:17-18ರ ಪ್ರಕಾರ "ಸಮಾಧಾನ ವನ್ನು ನಿನಗೆ ಅಧಿಪತಿಯನ್ನಾಗಿ ಧರ್ಮವನ್ನು ನಿನಗೆ ಅಧಿಕಾರಿಯನ್ನಾಗಿ ನೇಮಿಸುವನು. ನಿನ್ನ ದೇಶದಲ್ಲಿ ಬಲತ್ಕಾರದ ಸುದ್ದಿಯೇ ಕಿವಿಗೆ ಬೀಳದು ನಿನ್ನ ಪ್ರಾಂತದೊಳಗೆ ಭಂಗನಾಶಗಳ ವಾರ್ತೆಯೇ ಕೇಳಿ ಬರುವುದಿಲ್ಲ."

"ಭೂಮಿಯಲ್ಲಿರುವ ಎಲ್ಲಾ ಜನಗಳೂ ನಿಮ್ಮನ್ನು ಯೆಹೋವನ ಜನರೆಂದು ತಿಳಿದುಕೊಂಡು ನಿಮಗೆ ಭಯಪಡುವರು." (ಧರ್ಮೋ 28:10)

ಕರ್ತನ ಆಜ್ಞೆಗಳನ್ನು ಅನುಸರಿಸಿ, ಯೇಸು ಕ್ರಿಸ್ತನು ಸದಾಕಾಲ ನಿನ್ನ ಹೃದಯದಲ್ಲಿ ಜೀವಿಸುವಂತೆ, ಪೌಲನ ರೀತಿಯಲ್ಲಿ ಸೇವೆ ಮಾಡಿ, ಕರ್ತನ ಮಾರ್ಗದಲ್ಲಿ ನಡೆದು ದೇವರ ಮಗುವಾಗಿ ಕಾಣಿಸಿ ಅನೇಕರನ್ನು ಕ್ರಿಸ್ತನ ಕಡೆಗೆ ನಡೆಸುತ್ತೀಯಾ ಅಥವಾ ಪಾಪದಲ್ಲಿ ಜೀವಿಸಿ ಸತ್ತು ನರಕ ಸೇರುತ್ತೀಯಾ ನಿನಗೆ 'ಯಾವುದು ಬೇಕು?'

# 5. ನಿನ್ನ ಜೀವನ ಅಭಿವೃದ್ಧಿ

"ಯೆಹೋವನು ನಿಮ್ಮ ಪಿತೃಗಳಿಗೆ ಪ್ರಮಾಣ ಮಾಡಿದ ಮೇರೆಗೆ ನಿಮಗೆ ಕೊಡುವ ದೇಶದಲ್ಲಿ ಆತನು ನಿಮಗೆ ಸಂತಾನ ಪಶುವ್ಯವಸಾಯಗಳ ಸಮೃದ್ಧಿಯನ್ನುಂಟುಮಾಡುವನು. ಯೆಹೋವನು ಆಕಾಶದಲ್ಲಿರುವ ತನ್ನ ಜಲನಿಧಿಯನ್ನು ತೆರೆದು ನಿಮ್ಮ ದೇಶದ ಮೇಲೆ ಬೆಳೆಗೆ ಬೇಕಾದ ಹಾಗೆ ಮಳೆಯನ್ನು ಸುರಿಸಿ ನಿಮ್ಮ ಎಲ್ಲಾ ವ್ಯವಸಾಯವನ್ನೂ ಸಫಲಮಾಡುವನು." (ಧರ್ಮೋ 28:11,12)

## ದಯಾಳುವಾದ ಕರ್ತನು

"ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ." (ಮತ್ತಾಯ 5:45) ಕರ್ತನು ದಯಾಳುವಾದುದರಿಂದ ಎಲ್ಲರನ್ನೂ ಪ್ರೀತಿಸಿ ಒಂದು ವೇಳೆ ತನ್ನ ಮಕ್ಕಳು ತನ್ನನ್ನು ತಡವಾಗಿ ತಿಳಿದುಕೊಳ್ಳಬಹುದು ಎಂದು ಕಾಯುತ್ತಾ ಪ್ರತಿಯೊಬ್ಬರಿಗೆ ಅವರವರ ಅವಶ್ಯಕತೆಗಳನ್ನು ಪೂರೈಸುತ್ತಿದ್ದಾನೆ.

ನಮ್ಮ ಕರ್ತನು ನಮ್ಮ ಪಿತೃಗಳಿಗೆ ಒಂದು ವಿಶಿಣಂಷಂವಾದ ಪ್ರಮಾಣ ಮಾಡಿದ್ದಾನೆ. ಆ ಮೇರೆಗೆ ನಮಗೆ ಸಮೃದ್ಧಿಯನ್ನು ಕೊಡಲು ಆತನುಇಚ್ಛಿಸುತ್ತಿದ್ದಾನೆ ನೀನು ಆ ಸಮೃದ್ಧಿಯನ್ನು ಹೊಂದಿಕೊಳ್ಳಲು ನಿನಗೆ ಇಷ್ಟವಿದೆಯಾ? ನಿನಗೆ "ಯಾವುದು ಬೇಕು" ಕರ್ತನು ಕೊಡುವ ಸಮೃದ್ಧಿಯೋ ಅಥವಾ ನಿನ್ನ ಪ್ರಯಾಸದಿಂದ ನೀನು ಹೊಂದಿಕೊಳ್ಳುವ ಸಮೃದ್ಧಿಯೋ? ಕರ್ತನಿಂದ ನಿನಗೆ ಸಮೃದ್ಧಿ ಬರುವಾಗ "ಮನೆಮಾರೂ ಆಸ್ತಿಪಾಸ್ತಿಯೂ ಪಿತೃಗಳಿಂದ ದೊರಕುವವು" (ಜ್ಞಾನೋಕ್ತಿ 19:14) ಆಗ ತಂದೆಯ ಆಸ್ತಿಗೆ ನೀನು ಯಜಮಾನನಾಗಿ ನಿಲ್ಲುವಿ. ಮತ್ತು ಅದನ್ನು ನಿನ್ನ ಜೀವಮಾನವೆಲ್ಲಾ ತೃಪ್ತಿಕರವಾಗಿ ಅನುಭವಿಸುತ್ತೀಯಾ, ಹಾಗೂ ನಿನಗೆ ಸಂಪತ್ತು ಅಭಿವೃದ್ಧಿಯಾಗುತ್ತದೆ, ನಿನ್ನ ಮನೆಯಲ್ಲಿ ಯಾವುದಕ್ಕೂ ಕೊರತೆ ಆಗುವುದಿಲ್ಲ.

## ಕ್ರಿಸ್ತನನ್ನು ಪ್ರೀತಿಸು

ನನ್ನ ಬಳಿ ಹಣವಿಲ್ಲ, ಒಳ್ಳೇ ಮನೆಯಲ್ಲ 'ಯೇಸು ಕ್ರಿಸ್ತನು' ಯಾವ ರೀತಿಯಲ್ಲಿ ನನ್ನ ಜೊತೆಯಿರುತ್ತಾನೆ ಎಂದು ಚಿಂತಿಸಬೇಡ, ಯೇಸುವನ್ನು ಪ್ರೀತಿಮಾಡುವವರು ಅರಮನೆಯಲ್ಲಿದ್ದರೂ ಸರಿ ಗುಡಿಸಲಿನಲ್ಲಿದ್ದರೂ ಸರಿ ಆತನನ್ನು ಪ್ರೀತಿಸುವವರ ಬಳಿಯಲ್ಲಿ ಆತನು ಯಾವಾಗಲೂ ಜೊತೆ ಇರುತ್ತಾನೆ. ಅವರು ಅಳುವಾಗ ಆತನು ಅವರ ಜೊತೆಯಲ್ಲಿ ಆಳುತ್ತಾನೆ ಅವರು ಸಂತೋಷಿಸುವಾಗ ಅವರ ಜೊತೆಯಲ್ಲಿ ಆತನೂ ಸಂತೋಷಿಸುತ್ತಾನೆ. ಪ್ರತಿದಿನವೂ ನಿನ್ನ ಜೊತೆಯಲ್ಲಿ ಇರಲು ಆತನು ಇಷಂಔವುಳ್ಳವನಾಗಿದ್ದಾನೆ. ಆದರೆ ಯೇಸು ಕ್ರಿಸ್ತನಿಗೆ ನೀನು ನಿಜವಾದ ಪ್ರೀತಿಯನ್ನು ಕೊಡದಿದ್ದರೆ, ಖಂಡಿತವಾಗಿಯೂ ಆತನು ನಿನಗೆ ಸಫಲತೆಯನ್ನು ಕೊಡುವುದಿಲ್ಲ.

ನಿನ್ನ ಕುಟುಂಬದಲ್ಲಿ ಎಲ್ಲವೂ ಇದ್ದು ಏನೂ ಇಲ್ಲದ ರೀತಿಯಲ್ಲಿ ಜೀವಿಸಿಕೊಂಡು ಯಾರ ಪ್ರೀತಿಯಿಲ್ಲದೇ ನೀನು ಅಲೆಯುವ ವ್ಯಕ್ತಿ ಯಾಗಿದ್ದರೆ, ಈಗಲೇ ನಿನ್ನ ಮನಸ್ಸನ್ನು ಬದಲಾಯಿಸಿಕೊಂಡು, ದೇವರಿಗೆ ವಿರುದ್ಧವಾಗಿ ಮಾಡುವ ಎಲ್ಲಾ ಪಾಪಗಳನ್ನು ಬಿಟ್ಟು ಬಿಡುವುದಕ್ಕೆ ನಿನ್ನನ್ನೇ ಒಪ್ಪಿಸಿಕೊಟ್ಟು ಕರ್ತನ ಪ್ರೀತಿಯಲ್ಲಿ ನೆಲೆನಿಲ್ಲಲು ತೀರ್ಮಾನಿಸು.

ನಿನ್ನ ಕಾರ್ಯವು ಸಫಲವಾಗಬೇಕಾದರೆ ನೀನು ಒಂದು ಕೆಲಸ ಮಾಡಬೇಕು “ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ” (ರೋಮಾಪುರ 8:28) ಆದುದರಿಂದ ನೀನು ದೇವರನ್ನು ಪ್ರೀತಿಮಾಡಲೇಬೇಕು ಆಗ ನಿನ್ನ ಎಲ್ಲಾ ಕೆಲಸ ಕಾರ್ಯಗಳು ಖಂಡಿತವಾಗಿ ಸಫಲತೆಯನ್ನು ಹೊಂದಿಕೊಳ್ಳುತ್ತದೆ.

ನಿನಗೆ ಈ ಮನುಷ್ಯರ ಪ್ರೀತಿ ದೊಡ್ಡದಾಗಿ ಕಾಣುತ್ತಿರುವುದಾದರೆ ನಿನ್ನ ಕಾರ್ಯದಲ್ಲಿ ನೀನು ಅಲ್ಪ ಮಟ್ಟಿಗೆ ಸಫಲತೆಯನ್ನು ಕಾಣುವಿ. ಆದರೆ "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣಶಕ್ತಿಯಿಂದಲೂ ನಿನ್ನ ಪೂರ್ಣ ಬುದ್ದಿಯಿಂದಲೂ ಪ್ರೀತಿಸಬೇಕು.” (ಲೂಕ 10:27) ಆಗ ನೀನು ಪೂರ್ಣ ಸಫಲತೆಯನ್ನು ಕಾಣಲು ಸಾಧ್ಯವಾಗುತ್ತದೆ.

ಪ್ರತಿಯೊಬ್ಬರಿಗೂ ಸಮೃದ್ಧಿ, ಸಫಲತೆ ಬೇಕು ಎಂದು ಈ ಲೋಕದಾದ್ಯಂತ ಓಡುತ್ತಲೇ ಇರುತ್ತಾರೆ. ಆದರೆ ಕರ್ತನನ್ನು ಹಿಂಬಾಲಿಸ ಬೇಕು ಆತನಿಂದಲೇ ಎಲ್ಲವು ಸಿಕ್ಕುತ್ತದೆ ಎಂದು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದೇ ಇಲ್ಲ. ನಿನಗೆ 'ಯಾವುದು ಬೇಕು, ಈ ಲೋಕದಾದ್ಯಂತ ಓಡುವುದು ಬೇಕೋ ಅಥವಾ ಕರ್ತನ ಸಾನಿಧ್ಯದೇಕೋ 'ಯಾವುದು ಬೇಕು.”

**ನೀನು ಕರ್ತನನ್ನು ಆರಾಧಿಸಬೇಕು**

ನೀನು ಅರಮನೆಯಲ್ಲಿ ಇದ್ದು ದೊಡ್ಡ-ದೊಡ್ಡ ಮನೆಗಳನ್ನು ಕಟ್ಟಿ, ಯೇಸುವಿಗಾಗಿ ದೊಡ್ಡ ದೇವಾಲಯವನ್ನು ನಿರ್ಮಿಸಿ ಅದಕ್ಕೆ ಅಲಂಕೃತಮಾಡು ಎಂದು ಸತ್ಯವೇದವು ನಿನ್ನ ಬಳಿಯಲ್ಲಿ ಕೇಳುತ್ತಿಲ್ಲ. ದೊಡ್ಡ ದೊಡ್ಡ ದೇವಾಲಯ ನಿರ್ಮಿಸಿಯೇ ಯೇಸುವನ್ನು ಆರಾಧಿಸಬೇಕೆಂದು ತಿಳಿದುಕೊಂಡರೆ ಅದು ತಪ್ಪಾದ ಸಂಗತಿಯಾಗಿದೆ. ಯಾಕೆಂದರೆ “ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ.” (ಯೋಹಾನ 4:21) ನೀನಿರುವ ಸ್ಥಳದಲ್ಲಿಯೇ “ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.” (ಯೋಹಾನ 4:24). ಇದನ್ನು ಬಿಟ್ಟು ಬೇರೆ ಏನೇ ಮಾಡಿದರೂ ಪ್ರಯೋಜನವಿಲ್ಲ.

ಆರಾಧನಾ ನಾಯಕನಾದ ದಾವೀದನನ್ನು ಕರ್ತನು ಮೆಚ್ಚಿಕೊಂಡನು. ಕುರಿಗಳನ್ನು ಕಾಯುತ್ತಿದ್ದ ದಾವೀದನನ್ನು ರಾಜನನ್ನಾಗಿ ಕರ್ತನು ಮಾಡಲು ಕಾರಣವೇನೆಂದರೆ ದಾವೀದನು ಯಾವಾಗಲೂ ಕಿನ್ನರಿಯನ್ನು ಭಾರಿಸುತ್ತಾ ಕರ್ತನ ನಾಮವನ್ನು ಮಹಿಮೆ ಪಡಿಸುತ್ತಿದ್ದನು. ಅದಕ್ಕಾಗಿಯೇ ದಾವೀದ ವಂಶದಲ್ಲಿ 'ಯೇಸು ಕ್ರಿಸ್ತನು' ಹುಟ್ಟಿ ಬಂದು ಕುಮಾರನೆಂದು ಕರೆಯಲ್ಪಟ್ಟನು.

ನೀನು ಆರಾಧನೆ ಮಾಡುವಿಯಾ ಕರ್ತನಿಗೆ ಮೆಚ್ಚಿಕೆಯಾದ ಆರಾಧನೆಯನ್ನು ಮಾಡುವಿಯಾ ಅಥವಾ ಹಾಡುಗಳನ್ನು ಹೇಳುವುದು ನನಗೆ ಇಷ್ಟವಿಲ್ಲ. ನನಗೆ ಸಮಯವಿಲ್ಲ, ಎಂದು ಹೇಳಿ ತಪ್ಪಿಸಿಕೊಂಡು ದೇವರಿಗೆ ವಿರುದ್ಧವಾಗಿ ಜೀವಿಸುವಿಯಾ ನಿನಗೆ 'ಯಾವುದು ಬೇಕು?' ಕರ್ತನು ನಿನ್ನನ್ನು ಮೆಚ್ಚಿಕೊಳ್ಳುವುದು ಬೇಕಾ, ಆತನಿಂದ ನೀನು ಅಭಿವೃದ್ಧಿಯಾಗಬೇಕಾ ಅಥವಾ

ಆರಾಧಿಸಲು ನನಗೆ ಕಷ್ಟ ಎಂದು ಆಹಂಕಾರದಿಂದ ಹಿಂದೆ ಹೋಗುತ್ತೀಯೋ ಚಿಂತಿಸು, 'ಅಹಂಕಾರಿಗಳೆಲ್ಲಾ ಯೆಹೋವನಿಗೆ ಅಸಹ್ಯ;' (ಜ್ಞಾನೋಕ್ತಿ 16:5)

**ಯೇಸು ಕ್ರಿಸ್ತನಿಂದ ಶಾಂತಿ**

ಕರ್ತನು "ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ, ನನ್ನಲ್ಲಿರುವಂತ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವುದಿಲ್ಲ" ಎಂದು (ಯೋಹಾ 14:27) ಹೇಳುತ್ತಿದ್ದಾನೆ.

ನಿನ್ನಲ್ಲಿ ಶಾಂತಿ-ಸಮಾಧಾನ ಇರುವುದಾದರೆ ಜ್ಞಾನವು ಅಭಿವೃದ್ಧಿ ಆಗುತ್ತದೆ. ಆಗ ನಿನ್ನಲ್ಲಿರುವ ತಲಾಂತನ್ನು ನೋಡಿ ನಿನ್ನ ಬಳಿಯಿರುವ ಜನರು ನೀನು ಹೊಂದಿರುವ ಶಾಂತಿ ತಮಗೂ ಸಹ ಅವಶ್ಯವಿದೆ ಎಂದು ತಿಳಿದು, ನಿನ್ನ ಬಳಿಯಲ್ಲಿ ಬಂದು ಶಾಂತಿ-ಸಮಾಧಾನ ಹೊಂದುವ ಮಾರ್ಗವನ್ನು ತಮಗೂ ಕಲಿಸಿಕೊಡು ಎಂದು ಕೇಳುವ ಸಾಧ್ಯತೆಗಳಿರುತ್ತದೆ. ಆಗ ನೀನು ಅವರಿಗೆ ಕ್ರಿಸ್ತನ ಮಾರ್ಗವನ್ನು ಸುಲಭವಾಗಿ ತಿಳಿಸಬಹುದು.

ಯೇಸುವನ್ನು ಅಂಗೀಕರಿಸದೇ ಇರುವವರು ಪ್ರಾಪಂಚಿಕವಾದ ಸುಖ ಸಂಪತ್ತು ವೈಭೋಗಗಳಿಂದ ತುಂಬಿದ್ದರೂ ಸಹ ಕ್ರಿಸ್ತನಿಲ್ಲದ ಅವರ ಜೀವಿತದಲ್ಲಿ ಒಳಗಿನ ಹೃದಯದಲ್ಲಿ ಶಾಂತಿ ಸಮಾಧಾನವಿಲ್ಲದೆ ಇರುತ್ತಾರೆ ಮತ್ತೆ ಪ್ರಾಪಂಚಿಕವಾದ ಕಷ್ಟ-ನಷ್ಟ ತೊಂದರೆಗಳಿಗೆ ಗುರಿಯಾಗಿದ್ದರೂ ಸಂತೋಷದಿಂದ ಇರುವುದಕ್ಕೆ ಪ್ರಯಾಸಪಡುತ್ತಾರೆ. ಆದರೆ ಏನೂ ಪ್ರಯೋಜನವಿರುವುದಿಲ್ಲ.

ನೀನು ಯೇಸು ಕ್ರಿಸ್ತನಲ್ಲಿ ನಂಬಿಗಸ್ಥನಾಗಿರುವಾಗ, ನೀನು ಮಾಡುವಂತಹ ಕೆಲಸ ಕಾರ್ಯಗಳಲ್ಲಿ ಹಾಗೂ ನೀನು ಹೋಗುವ ಹಾದಿಯಲ್ಲಿ ನಡೆಯುವಂತಹ ಅನೇಕ ಘಟನೆಗಳು ನಿನಗೆ ಸೋಲುಗಳನ್ನು ಉಂಟುಮಾಡಬಹುದು ಆದರೆ ನೀನು ಯಾವ ಕಾರಣಕ್ಕೂ ಭಯ ಪಡಬೇಡ ಅದು ಕರ್ತನಿಂದ ಬರುವ ಜಯದ ಮುನ್ಸೂಚನೆಗಳಾಗಿವೆ ಎಂದು ತಿಳಿದುಕೋ, ಅದನ್ನು ಗ್ರಹಿಸಿಕೊಂಡು ತಾಳ್ಮೆಯಿಂದ ನಡೆ, ಆಗ ನಿನಗೆ ಹಾನಿಯೂ ಆಗುವುದಿಲ್ಲ "ಸಜ್ಜನರಿಗೆ ಯಾವ ಹಾನಿಯೂ ಸಂಭವಿಸದು:" (ಜ್ಞಾನೋಕ್ತಿ 12:21)

ಒಂದು ವೇಳೆ ಬೇರೆಯವರು ಒಂದು ಹಂತ ಕೆಳಗೆ ಬೀಳುವಾಗ ಅದನ್ನು ನೀನು ನೋಡಿ ನಗಬೇಡ, ಮತ್ತೊಬ್ಬರಿಗೆ ಹೇಳಿಕೊಂಡು ಅವರನ್ನು ಅವಹೇಳಣ ಮಾಡಬೇಡ, ಆ ಸಮಯದಲ್ಲಿ ಏನು ಮಾಡಬೇಕು ಎಂದು ಚಿಂತಿಸು. ಒಳ್ಳೆಯದನ್ನು ಮಾಡಲು ಪ್ರಯತ್ನಮಾಡು, "ಒಳ್ಳೆಯದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೆ ಇರುವವನು ಪಾಪಕ್ಕೊಳಗಾಗಿದ್ದಾನೆ." (ಯಾಕೋಬ 4:17) ಇಂತಹ ಪಾಪಕ್ಕೆ ನೀನು ಒಳಪಡಬೇಡ "ಪರೋಪಕಾರವು ತನಗೂ ಉಪಕಾರ:" (ಜ್ಞಾನೋಕ್ತಿ 11:17) ಎಂದು ತಿಳಿದುಕೊಂಡು ತಾಳ್ಮೆಯಿಂದ ಶಾಂತಿ-ಸಹನೆಯಿಂದ ಮತ್ತೊಬ್ಬರಿಗೆ ನೆರವಾಗು, ಆಗ ನಿನಗೆ ಒಂದು ವೇಳೆ ಕಷ್ಟ-ನಷ್ಟಗಳು ಸಂಭವಿಸುವಾಗ ನಿನ್ನನ್ನುದ್ದರಿಸಲು ಅಭಿವೃದ್ಧಿಮಾಡಲು ಕರ್ತನು ನಿನಗಾಗಿ ಮತ್ತೊಬ್ಬರನ್ನು ನೇಮಿಸುತ್ತಾನೆ.

ಕರ್ತನು ನಿನ್ನನ್ನು ಅಭಿವೃದ್ಧಿ ಮಾಡಬೇಕೆಂದು ಯಾವಾಗಲೂ ಇಷಂಔ ಪಡುತ್ತಿರುತ್ತಾನೆ ಆದರೆ ನೀನು ಹಣವನ್ನು, ಆಸ್ತಿಯನ್ನು ಎಲ್ಲವನ್ನು ಸಂಪಾದಿಸಿ ಅದೇ ಹಣದಿಂದ ಯೇಸುವಿನ ಪ್ರೀತಿಯನ್ನು ಆತನಿಂದ ಬರುವ ಶಾಂತಿಯನ್ನು, ಸಮಾಧಾನವನ್ನು ಸಂಪಾದಿಸಿಕೊಳ್ಳಲು ಆಗುವುದಿಲ್ಲ. ಎಂದು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು.

ಯೇಸು ಕ್ರಿಸ್ತನಿಂದ ಬರುವ ಶಾಂತಿ ನಿನಗೆ ಬೇ ಕಾ ಅಥವಾ ಗಲಿಬಿಲಿಯಲ್ಲಿಯೇ ಇರುವಿಯೋ? “ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ." (ಕೊರಿಂಥ 14:33) ಕರ್ತನು ಕೊಡುವ ಶಾಂತಿ ಸಮಾಧಾನದಲ್ಲಿ ನೀನು ನಿಲ್ಲುವುದಾದರೆ ಮಾತ್ರ ನೀನು ಕರ್ತನಿಂದ ಬರುವ ಸಮೃದ್ಧಿಯನ್ನು ಸಫಲತೆಯನ್ನು ಹೊಂದಿಕೊಳ್ಳಲು ಸಾಧ್ಯ. ನಿನಗೆ 'ಯಾವುದು ಬೇಕು?”, “ಶಾಂತಿ-ಸಮಾಧಾನವೇ,' ಅಥವಾ 'ಗಲಿಬಿಲಿಯೋ?”

**ಅಭಿವೃದ್ಧಿಮಾಡುವ ಯೇಸು ದೇವರು**

“ಪ್ರಿಯನೇ, ನೀನು ಆತ್ಮವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕೆಂದು ಪ್ರಾರ್ಥಿಸುತ್ತೇನೆ.” (3ಯೋಹಾನ 2)

ನೀನು ಆತ್ಮೀಕವಿಷಯದಲ್ಲಿ ಅಭಿವೃದ್ಧಿಯನ್ನು ಹೊಂದುವಾಗಲೇ ಕರ್ತನು ನಿನ್ನನ್ನು ಅತ್ಯಧಿಕವಾಗಿ ಎಲ್ಲಾ ಮಂಡಲದಲ್ಲಿಯೂ ಆಶೀರ್ವದಿಸುತ್ತಾರೆ ಆದರೆ ನೀನು ಯೇಸು ಕ್ರಿಸ್ತನು ಮಾಡಿದ ಒಳ್ಳೆಯ ಕಾರ್ಯಗಳನ್ನು ಸುಲಭವಾಗಿ ಮರೆತುಹೋಗಿ ಬೇರೆಯವರು ಮಾಡಿದ ಕಾರ್ಯಗಳನ್ನು ಮಾತ್ರ ನೆನಸಿಕೊಂಡು ಅವರನ್ನೇ ಗೌರವಿಸುತ್ತಾ ಅವರೇ ನಿನ್ನ ಪಾಲಿಗೆ ದೇವರೆಂದು ಹೇಳಿಕೊಂಡು ನಡೆಯಬೇಡ.

ಕರ್ತನ ವಾಕ್ಯವು ನಮ್ಮ ಬಳಿಯಲ್ಲಿಯೇ ಇದೆ. "ನಾನೇ ದೇವರು. ಇನ್ನು ಯಾರು ಅಲ್ಲ; ನಾನೇ ಪರಮದೇವರು ನನಗೆ ಸರಿಸಮಾನರಿಲ್ಲ.' (ಯೆಶಾಯ 46:9) ಎಂದು ಕರ್ತನು ತಾನೇ ಹೇಳಿದ್ದಾನೆ. ಆದುದರಿಂದ ಹುಟ್ಟಿದಾಗಿನಿಂದ ನೆರವಾಗಿರುವ ತಂದೆ-ತಾಯಿಯೇ ದೇವರೆಂದು ಹೇಳಬೇಡ! ಸಮಯಕ್ಕೆ ಸರಿಯಾಗಿ ನಿನಗೆ ಸಹಾಯ ಮಾಡುವವರನ್ನು ದೇವರೆಂದು ಹೇಳಬೇಡ! ಕಣ್ಣಿಗೆ ಕಾಣುವವರನ್ನೆಲ್ಲಾ ದೇವರೆಂದು ಹೇಳಬೇಡ.

ಕರ್ತನು ನಿನ್ನ ಮೇಲೆ ಇಟ್ಟಿರುವ ಕರುಣೆಯನ್ನು ಜ್ಞಾಪಿಸಿಕೋ, ನಿನ್ನನ್ನು ಮೇಲೆತ್ತುತ್ತಿರುವ ರೀತಿಯನ್ನು ಅರ್ಥಮಾಡಿಕೋ, ಸುಮ್-ಸುಮ್ಮನೇ ಏನೇನೋ ಮಾತನಾಡಬೇಡ "ಮನುಷ್ಯನು' ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯವಿಚಾರಣೆಯ ದಿನದಲ್ಲಿ ಉತ್ತರ ಕೊಡಬೇಕು.” (ಮತ್ತಾಯ 12:37)

ಇಂದು ಅಧಿಕವಾಗಿ ಕೇಳಲ್ಪಡುವ ಮಾತು ಏನೆಂದರೆ ಆಧಿಕವಾಗಿ ಓದಿರುವ ವ್ಯಕ್ತಿಗಳು ಹೇಳುವುದು “ದೇವರೇ ಇಲ್ಲ” ಎನ್ನುತ್ತಾರೆ. ತಾನು ಕಲಿತ ವಿಧ್ಯಾಭ್ಯಾಸವೇ ದೊಡ್ಡದೆಂತಲೂ ತಾವು ಮಾಡುವಂತಹ ಕೆಲಸವೇ ತಮ್ಮನ್ನು ನಡೆಸುತ್ತದೆ ಎಂತಲೂ, ಕೆಲಸಕ್ಕೆ ಹೋಗದೇ ಸುಮ್ಮನಿದ್ದರೆ ಹೇಗೆ ಹಣ ಬರುತ್ತೇ ಹೇಳಿ ನೋಡೋಣ ದೇವರೇ ಬಂದು ಕೊಡುತ್ತಾನಾ? ಎಂತಲೂ ಅನೇಕ ರೀತಿಯಲ್ಲಿ ಪ್ರಶ್ನೆ ಹಾಕಿ ಅಹಂಕಾರದಿಂದ ದೇವರ ಭಯವಿಲ್ಲದೇ ಮಾತನಾಡುತ್ತಾರೆ.

ದೇವರಿಗೆ ಪ್ರಶ್ನೆ ಹಾಕಿ ಮಾತನಾಡುವಂತಹ ವ್ಯಕ್ತಿಯ ಬಳಿಯಲ್ಲಿ ಯಾವ ಪ್ರಶ್ನೆಗೂ ವಿನೂ ಉತ್ತರ ಕೊಡಬಾರದು. ಯಾಕೆಂದರೆ- ನಾನೇ ಎನ್ನುವ ಅಹಂಭಾವದಲ್ಲಿ ಮಾತನಾಡುತ್ತಾ ಜ್ಞಾನವನ್ನು ಕೊಟ್ಟ ದೇವರನ್ನು ಮರೆತುಹೋಗಿ ತನ್ನ ಮೂಗಿನ ನೇರಕ್ಕೆ ಮಾತನಾಡುವಂತವರಿಗೆ ಏನು ಬುದ್ದಿ ಹೇಳಿದರೂ ವ್ಯರ್ಥ, ನೀನು ಇಂತಹ ವ್ಯಕ್ತಿಯಾಗಿ ದೇವರಿಗೆ ಕಾಣಿಸಬೇಡ.

"ಯೇಸುವನ್ನೇ ನೋಡುತ್ತಾ ಮುಂದೆ ನಡೆದರೆ, ಆಶೀರ್ವಾದಗಳು ನಿನ್ನನ್ನು ಹುಡುಕಿಕೊಂಡು ನಿನ್ನ ಹಿಂದೆ ಸಾಲಾಗಿ ಬರುತ್ತಲೇ ಇರುವುದು" "ಕಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ ನೆಲೆಗೊಂಡಿರುವವನಿಗೆ ತಂದೆಯ ಮತ್ತು ಮಗನ ಅನ್ಯೋನ್ಯತೆ ಉಂಟು." (2ಯೋಹಾನ 9)

ಜ್ಞಾನ, ತಿಳುವಳಿಕೆ ಇರುವ ನಿನ್ನನ್ನು ಜನ ಮೆಚ್ಚಿಕೊಳ್ಳುತ ಸಹಜ ಆದರೆ ಜನರನ್ನು ಮೆಚ್ಚಿಸ ಬೇಕೆಂದು ನಡೆಯದೆ, ಕರ್ತನನ್ನು ಮೆಚ್ಚಿಸಬೇಕೆಂದು ನಡೆಯಬೇಕು. ದೇವರ ಮಾರ್ಗದ ಪ್ರಕಾರ ನಡೆಯುವಾಗ ನಿನಗೆ ಅಭಿವೃದ್ಧಿಯಾಗುತ್ತದೆ ಆದರೆ ದೇವರಿಂದ ಬರುವ ಜ್ಞಾನವನ್ನು ಪ್ರಪಂಚ ನಿರಾಕರಿಸುವ ಪ್ರಕಾರ ನೀನು ನಿರಾಕರಿಸಬೇಡ.

ಕರ್ತನನ್ನು ತಿರಸ್ಕರಿಸುವ ವ್ಯಕ್ತಿಗಳೊಟ್ಟಿಗೆ ನಡೆಯದೆ, ದೀನ-ದರಿದ್ರರ ಜೊತೆಯಲ್ಲಿ ಸೇರಿ ಅವರ ಕಷ್ಟಕ್ಕೆ ಕೈ ಜೋಡಿಸಿ ಅವರೊಟ್ಟಿಗೆ ಯೇಸುವಿನ ಪ್ರೀತಿಯನ್ನು ಸಾರುತ್ತಾ, ಯೇಸು ಕ್ರಿಸ್ತನು ನಿನಗಾಗಿ ಇಟ್ಟಿರುವ ಸಮೃದ್ಧಿಯನ್ನು ಹೊಂದಿಕೊಳ್ಳುವುದರಲ್ಲಿ ಯಾವಾಗಲೂ ನಿರತವಾಗಿರಲು ಪ್ರಯತ್ನಿಸು.

ಯಾಕೆಂದರೆ ಬೇರೆಯವರನ್ನು ಸಹಾಯ ಕೇಳುವುದು ಸುಲಭ, ಬೇರೆಯವರಿಗೆ ಸಹಾಯ ಮಾಡುವುದು ತುಂಬ ಕಠಿಣ, ಅದಕ್ಕಾಗಿ ನಿನ್ನಲ್ಲಿ ಇರುವುದನ್ನು ನಷ್ಟ ಮಾಡಿಕೊಳ್ಳದೇ, ಮತ್ತೊಬ್ಬರ ಕಷ್ಟದಲ್ಲಿ ಪಾಲುಗಾರನಾಗಿ ನಿಲ್ಲು. ಆಗ ನೀನು ಇರುವ ಸ್ಥಳದಲ್ಲಿ ಮಳೆಗೆ ಕೊರತೆಯಾಗಲ್ಲ, ಬೆಳೆಗೆ ಬರ ಬರುವುದಿಲ್ಲ, ಯಾವಾಗಲೂ ಸಮೃದ್ಧಿಯಾಗಿ ಕೂಡಿಸಿಕೊಂಡವನಿಗೆ ಅಭಿವೃದ್ಧಿಯಾಗುವದು." (ಜ್ಞಾನೋಕ್ತಿ 13:11) ನೀನು ಈ ಹೊತ್ತು ನಿನ್ನ ಜೀವನದಲ್ಲಿ ಅಭಿವೃದ್ಧಿಯನ್ನು ಕಾಣಬೇಕು. ಅದು ಕರ್ತನಿಗೆ ಮೆಚ್ಚಿಕೆಯಾಗಿರಬೇಕು.

ಯೇಸು ಕ್ರಿಸ್ತನ ಮಾತುಗಳನ್ನು ಅನುಸರಿಸು ಸಮೃದ್ಧಿ ಕೊಡುವ ಯೇಸುವನ್ನು ದೇವರು ಎಂದು ಹೇಳುವಿಯಾ ಅಥವಾ ನಿನಗೆ ನೆರವಾಗುವ ವ್ಯಕ್ತಿಗಳನ್ನು ದೇವರೆಂದು ಎಣಿಸುವಿಯೋ ನಿನಗೆ ಯಾರು ಬೇಕು' ದೇವರಾ? ನೆರವಾಗುವ ವ್ಯಕ್ತಿಯೋ? ಯಾರನ್ನು ಹೆಚ್ಚಿಸಿ ಮಾತನಾಡುತ್ತೀಯೋ ತೀರ್ಮಾನಿಸಿಕೋ, ನಿನ್ನ ತೀರ್ಮಾನದ ಮೇಲೆ ಕರ್ತನು ನಿನ್ನ ಜೀವನದಲ್ಲಿ ಕಾರ್ಯ ನಡೆಸುತ್ತಾನೆ.

# 6. ನಿನ್ನಲ್ಲಿ ಸಾಲ ಇರುವುದಿಲ್ಲ

"ನೀವು ಅನೇಕ ಜನಗಳಿಗೆ ಸಾಲಕೊಡುವಿರೇ ಹೊರತು ಸಾಲ ತೆಗೆದುಕೊಳ್ಳುವುದಿಲ್ಲ. ನಾನು ಈಗ ನಿಮಗೆ ಬೋಧಿಸುವ ಮಾತುಗಳನ್ನು ನೀವು ಬಿಟ್ಟು ಎಡಬಲಕ್ಕೆ ತೊಲಗದೆ ಬೇರೆ ದೇವರುಗಳನ್ನು ಅವಲಂಬಿಸದೆ ನಿಮ್ಮ ದೇವರಾದ ಕರ್ತನ ಆಜ್ಞೆಗಳಲ್ಲೇ ಲಕ್ಷ್ಯವಿಟ್ಟು ಅವುಗಳನ್ನೇ ಅನುಸರಿಸಿ ನಡೆದರೆ ಆತನು ಇತರರಿಗೆ ನಿಮ್ಮನ್ನು ಅಧೀನ ಮಾಡದೆ ಎಲ್‌ಲರಿಗ ಶಿರಸ್ಸನ್ನಾಗಿಯೇ ಮಾಡುವನು; ನೀವು ಎಲ್ಲರಿಗಿಂತಲೂ ಮೇಲಣವ ರಾಗಿರುವರೇ ಹೊರತು ಕೆಳಗಣದವರಾಗಿರುವುದಿಲ್ಲ." (ಧರ್ಮೋ

28:13.14)

**ಸಾಲದಿಂದ ಹೊರ ಬಾ**

ದೇವರು ನಿನ್ನ ತಂದೆಯಾಗಿರುವುದರಿಂದ ನಿನ್ನ ಸಕಲ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಆತನಿಗೆ ಮನಸ್ಸಿದೆ. ನೀನು ಸಾಲ ಮಾಡುವಾಗ ಆತನು ನಿನ್ನನ್ನು ಆ ಸಾಲದಲ್ಲಿ ನೋಡಲು ಇಷ್ಟ ಪಡುವುದಿಲ್ಲ. ನಿನ್ನನ್ನು ಆ ಸಾಲದಿಂದ ಬಿಡಿಸಲು ಇಚ್ಚಿಸುತ್ತಾನೆ.

"ಕೈ ಮೇಲೆ ಕೈ ಹಾಕಿ ಸಾಲಕ್ಕೆ ಹೊಣೆಯಾಗುವವರಲ್ಲಿ ನೀನೂ ಒಬ್ಬನಾಗಬೇಡ. ಆ ಸಾಲವನ್ನು ತೀರಿಸುವದಕ್ಕೆ ನಿನ್ನಿಂದಾಗದಿರಲು ಸಾಲಕೊಟ್ಟವನು ನಿನ್ನ ಕೆಳಗಿನ ಹಾಸಿಗೆಯನ್ನು ಕಿತ್ತುಹಾಕುವನಲ್ಲವೆ, ಇದೇಕೆ?" (ಜ್ಞಾನೋಕ್ತಿ 22:27)

ನಿನ್ನನ್ನು ಐಶ್ವರ್ಯವಂತನನ್ನಾಗಿ ಆತನು ಕಾಣಲು ಬಯಸುತ್ತಾನೆ. ನಿನ್ನನ್ನು ಆಶೀರ್ವದಿಸಿ ನೀನು ಅನೇಕರಿಗೆ ಸಾಲ ಕೊಡುವವರಾಗಿರ ಬೇಕೆಂದು ಆಶಿಸುತ್ತಾನೆ. ಆತನು ಕೊಡುವ ಆಶೀರ್ವಾದವು ನಿನ್ನಲ್ಲಿ ನೆಲೆಯಾಗಿ ನಿಲ್ಲಬೇಕಾದರೆ ಆತನ ಬೋಧನೆಗೆ ಒಳಪಡಬೇಕೆಂದು ಕರ್ತನು ಆಶಿಸುತ್ತಾನೆ. ಎಲ್ಲರಿಗೂ ಕರ್ತನು ಕೊಡುವ ಆಶೀರ್ವಾದವು ಬೇಕು ಆದರೆ ಆತನ ನಿಭಂದನೆಗಳಿಗೆ ಒಳಪಡಲು ಯಾರೂ ಸಹ ಇಷ್ಟಪಡುವುದಿಲ್ಲ. ಒಂದು ವೇಳೆ ಇಷ್ಟ ಪಟ್ಟರೂ ಅನುಸರಿಸಲು ಮನಸ್ಸು ಮಾಡುವುದಿಲ್ಲ. ಇಂತಹ ಕಾರ್ಯಗಳು ಅನೇಕರಲ್ಲಿ ಇರುವುದರಿಂದ ಕರ್ತನ ಆಶೀರ್ವಾದದಲ್ಲಿ ಪಾಲುಗಾರರಾಗಲು ಎಷ್ಟೋ ಜನರಿಗೆ ಆಗುವುದೇ ಇಲ್ಲ. ಆದರೆ ನೀನು ಅಂತಹ ವ್ಯಕ್ತಿಯಾಗಬೇಡ. ಕರ್ತನು ಕೊಡುವ ಪ್ರತಿಯೊಂದು ಕಟ್ಟಳೆಗಳನ್ನು ಅನುಸರಿಸಲು ಮುಂದಾಗು.

"ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗೆ ಇರಬಾರದು." (ರೋಮಾ 13:8) ಕರ್ತನ ನಿಭಂದನೆ ಗಳನ್ನು ನೀನು ಗೌರವಿಸುವುದಾದರೆ ಮಾತ್ರ ಅದನ್ನು ಅನುಸರಿಸಲು ನಿನಗೆ ಸುಲಭವಾಗುತ್ತದೆ. ಈ ಜೀವವಿರುವವರೆಗೂ ನಿನ್ನ ಕಣ್ಣಿಗೆ ಕಾಣುವ ಪ್ರತಿಯೊಂದು ವ್ಯಕ್ತಿಯನ್ನು ನಿಷ್ಕಳಂಕ ಮನಸ್ಸಿನಿಂದ ನೀನು ಪ್ರೀತಿಸಿ ಆ ವ್ಯಕ್ತಿಯನ್ನು ಗೌರವಿಸಬೇಕೆಂದು ಕರ್ತನು ಆಸೆಪಡುತ್ತಿದ್ದಾನೆ.

ನೀನು ಕರ್ತನ ಆಜ್ಞೆಯನ್ನು ಪಾಲಿಸುವಾಗ ಆತನು ನಿನ್ನನ್ನು ಎಲ್ಲರಿಗಿಂತಲೂ ಮೇಲೆ ಇಡುತ್ತಾನೆಯೇ ಹೊರತು ಕೆಳಗಿನ ಹಂತದಲ್ಲಿ ಇಡಲು ಆಸೆಪಡುವುದಿಲ್ಲ. ಯಾವಾಗಲೂ ಆತನು ನಿನ್ನನ್ನು ಮೇಲಕ್ಕೆ ಎತ್ತಬೇಕೆಂದು ಮನಸುಳ್ಳವನಾಗಿರುವದನ್ನು ಗಮನಿಸುವಾಗ ಆತನಿಗೆ ಎಷ್ಟು ಸ್ತೋತ್ರಗಳನ್ನು ಸಲ್ಲಿಸಿದರೂ ಅದು ಸಾಲುವುದೇ ಇಲ್ಲ.

ಕರ್ತನ ನಿಭಂದನೆಯನ್ನು ಅನುಸರಿಸಿ ಆತನಿಂದ ಬರುವ ಆಶೀರ್ವಾದ ಹೊಂದಿಕೊಳ್ಳುವುದಕ್ಕೆ ಮನಸ್ಸು ಮಾಡುತ್ತೀಯೋ ಅಥವಾ ನಿನ್ನ ಸಾಲದಲ್ಲಿ ನಿಂತುಕೊಂಡು ಬೇಸರದಲ್ಲಿ ಮುನ್ನುಗ್ಗುತ್ತೀಯೋ? ಆತನ ಕಟ್ಟಳೆಗಳಿಗೆ ನೀನು ಒಳಪಡುವುದಾದರೆ ಆತನು ನಿನ್ನನ್ನು ಸಾಲದಿಂದ ಬಿಡುಗಡೆಮಾಡುತ್ತಾನೆ. ನೆ ನೆ ಏನು ವರಾಡುತ್ತೀಂ ನಿನಗೆ 'ಂತರಾ ವುದು ಬೇಕು?' ಸಾಲದಿಂದ ಹೊರಬರುವುದು ಬೇಕಾ ಅಥವಾ ಕರ್ತನ ಆಜ್ಞೆಗಳನ್ನು ಅನುಸರಿಸುವುದು ಕಷ್ಟವೆಂದು ಹೇಳುತ್ತಾ ಸಾಲದಲ್ಲೇ ಜೀವಿಸಲು ಇಷ್ಟಪಡುತ್ತೀಯೋ? ಚಿಂತಿಸು.

**ಸತ್ಯವೇದವನ್ನು ಓದು**

ಲೋಕದ ಜ್ಞಾನವೇ ಬೇರೆ, ಪರಲೋಕದ ಜ್ಞಾನವೇ ಬೇರೆ, ಲೋಕದ ಜ್ಞಾನವು ಲೋಕದ ಕಾರ್ಯಗಳನ್ನು ಕುರಿತು ಮಾತನಾಡುತ್ತದೆ. ಅಂದರೆ ಮನೆ ಕಟ್ಟುವುದು, ಮದುವೆ ಮಾಡುವುದು, ಹಣ ಸಂಪಾದಿಸುವುದು, ಒಳ್ಳೆ ವಿಧ್ಯಾಭ್ಯಾಸ ಪಡೆದು ಪದವಿ ಹೊಂದುವುದು, ಇಂತಹ ಕಾರ್ಯಗಳನ್ನು ಕುರಿತು ಯಾವಾಗಲೂ ಚಿಂತಿಸುತ್ತದೆ, ಈ ಲೋಕದ ಮನಸನು ತನ್ನ ಸ್ವಂಶಯಾನದ ಮೇಲೆ ನಂಬಿಕೆಯಿಟ್ಟು ಯೇಸುವನ್ನು ಮರೆತು ಜೀವಿಸುತ್ತಾನೆ. ನೀನು ಇಂತಹ ವ್ಯಕ್ತಿಗಳಲ್ಲಿ ಒಬ್ಬನಾ/ಳಾಗ ಬೇಡ.

ಪ್ರಿಯ ದೇವರ ಮಗುವೇ. ದೇವರ ಜ್ಞಾನವನ್ನು ಹೊಂದಿಕೊಳ್ಳಲು ಖಂಂಡಿ ಭಾರಿ ಸತ್ಯವೇದವನ್ನು ಓದಿದರೂ ಸಾಲದು, ಕರ್ತನ ಬಲ ಇರುವವರೆಗೂ ಓದಬೇಕು. ಈ ಲೋಕವನ್ನು ಯಾವ ರೀತಿ ಜಯಿಸಿ ಪರಲೋಕಕ್ಕೆ ಸೇರಬಹುದು ಎಂದು ಸತ್ಯವೇದವು ಕಲಿಸಿಕೊಡುತ್ತದೆ. ತಾತ್ಸಾರ ಮಾಡಿದರೆ ಎಷ್ಟೋ ನಷ್ಟಕ್ಕೆ ಒಳಪಡ ಬೇಕಾಗುತ್ತದೆ. ಈ ಸತ್ಯವೇದದಲ್ಲಿ ಅಡಗಿದೆ ಗುಪ್ತನಿಧಿ, ಈ ಗುಪ್ತನಿಧಿಯನ್ನು ಹೊಂದಿಕೊಳ್ಳಲು ನೀನು ಹೆಚ್ಚು ಸತ್ಯವೇದವನ್ನು ಧ್ಯಾನಿಸ ಬೇಕು ಆಗ ನಿನ್ನ ಮನೆಯಲ್ಲಿ ಕೊರತೆಯಿರುವುದಿಲ್ಲ.

ಆತನ ಮಗಳಾಗಿ/ಮಗನಾಗಿ ಆತನ ದೃಷ್ಟಿಯಲ್ಲಿ ಕಾಣಿಸಿಕೊಳ್ಳಲು ಪ್ರಯತ್ನಿಸು. ದೇವರಲ್ಲಿರುವ ಎಲ್ಲಾ ಒಳ್ಳೇ ಸ್ವಭಾವವು ನಿನ್ನಲ್ಲಿಯೂ ಕಂಡು ಬರಬೇಕೆಂದರೆ ಕರ್ತನು ಸತ್ಯವೇದವನ್ನು ನಿನ್ನ ಕೈ ತಲುಪುವಂತೆ ಮಾಡಿರುವುದರಿಂದ ಸತ್ಯವೇದದ ಬೆಲೆಯನ್ನು ಅರ್ಥಮಾಡಿಕೊಂಡು ಪ್ರತಿದಿನವು ನಿನ್ನ ಅಮೂಲ್ಯವಾದ ಸಮಯವನ್ನು ಸತ್ಯವೇದವನ್ನು ಓದುವುದಕ್ಕೆ ನೀನು ಕೊಡಬೇಕು. ಆಗ ನೀನು ಎಂದಿಗೂ ಕಳಮಟ್ಟದಲ್ಲಿ ಇರುವುದಿಲ್ಲ ಮೇಲ್ಮಟ್ಟದಲ್ಲಿಯೇ ಇರುವಂತೆ ಕರ್ತನು ಆಶೀರ್ವದಿಸುವನು.

"ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ: ಅದರ ಎಲೆ ಬಾಡುವುದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು" (ಕೀರ್ತನೆ 1:23) ದೇವರ ವಾಕ್ಯವನ್ನು ಧ್ಯಾನಿಸು ಆತನ ಕಟ್ಟಳೆಗಳಿಗೆ ಕಿವಿಗೊಡು ಅದರ ಪ್ರಕಾರ ನೀನು ನಡೆಯಲೇಬೇಕಾಗಿದೆ, ಆಗಲೇ ಈಗ ನೀನು ಇರುವ ಸ್ಥಿತಿ ಬದಲಾಗುತ್ತದೆ, ಇಲ್ಲದಿದ್ದರೆ ನಿನ್ನ ಸ್ವಂತ ಜ್ಞಾನದಿಂದ ನಿನ್ನ ಸ್ವಭಾವದಿಂದ ಈ ಲೋಕವನ್ನೂ ಈ ಲೋಕದಲ್ಲಿ ನಿನಗೆ ಎದುರಾಗುವ ಸಮಸ್ಯೆಯನ್ನೂ ನೀನು ಗೆಲ್ಲಲು ಬಹಳ ನಷ್ಟ,

ಸತ್ಯವೇದವನ್ನು ಪಕ್ಕಕ್ಕೆ ಇಟ್ಟು ನೀನು ನಿನ್ನ ಜ್ಞಾನದಲ್ಲಿ ಹೋಗುವುದಾದರೆ ಒಂದೊಂದು ನಷ್ಟವನ್ನು ನೀನು ಹೊಂದಿಕೊಳ್ಳಲೇ ಬೇಕಾಗುತ್ತದೆ.

ಉದಾಹರಣೆಗಾಗಿ: ಕೆಲಸದಲ್ಲಿ ಸಂಬಳ ಕಡಿಮೆಯಾಗಬಹುದು ಕುಟುಂಬದಲ್ಲಿ ಅಗತ್ಯತೆಗಳನ್ನು ಪೂರೈಸಲಾರದೆ ಕೊರತೆಗಳು ಕಾಣಬಹುದು, ನಿನ್ನ ವೈಯಕ್ತಿಕವಾದ ಜೀವನದಲ್ಲಿ ಜಿಗುಪ್ಸೆ ಆಗಬಹುದು, ನಿನ್ನ ಜೊತೆ ಸ್ನೇಹಿತರ ಬಳಿ ಹಣವನ್ನು ದಿನೇ-ದಿನೇ ಸಾಲ ಪಡೆದುಕೊಂಡು ಅದು ದೊಡ್ಡದಾಗಿ ಬೆಳೆದು ಬಂದು ಸ್ನೇಹಿತರು ನಿನ್ನನ್ನು ನೋಡಿ 'ಛೀ' ಎಂದು ಸಹಾಯ ಮಾಡದೇ ನಿನ್ನನ್ನು ನೋಡಿ ಪಕ್ಕಕ್ಕೆ ಸರಕೊಂಡು ಹೋಗಬಹುದು, ಒಂದು ವೇಳೆ ನಿನಗೆ ಮನೆ ಇದ್ದರೆ, ಮನೆ ಮಾರಿ ಸಾಲ ತೀರಿಸುವ ಸಂದರ್ಭ ಬರಬಹುದು, ಅಥವಾ ಬಾಡಿಗೆ ಕಟ್ಟಲು ಹಣ ಇಲ್ಲದೇ ಅಲೆದಾಡುವ ಪರಿಸ್ಥಿತಿ ಬರಬಹುದು. ಕುಟುಂಬದಲ್ಲಿ ಯಾವ ಗೌರವವೂ ಇಲ್ಲದೆ ಸಮಾಧಾನ ಇಲ್ಲದೇ ಅಲೆಯುವ ಜೀವನ ನೊಂದು ಹೋಗುವ ಸಾಧ್ಯತೆಗಳು ಬರಬಹುದು.

ಈ ಲೋಕದಲ್ಲಿ ನೀನು ಎಂತಹ ಉನ್ನತ ಪರಿಸ್ಥಿತಿಯಲ್ಲಿ ಇದ್ದರೂ ಸತ್ಯವೇದವನ್ನು ಓದದೆ ನಿನ್ನ ಇಷ್ಟದ ಪ್ರಕಾರ ಜೀವಿಸಿದರೆ ಎಲ್ಲವನ್ನು ನಷ್ಟಮಾಡಿಕೊಂಡು ಬೀದಿಯಲ್ಲಿ ಬಿಳುವಂತಹ ಪರಿಸ್ಥಿತಿ ಬಂದು ನಿನಗೆ ಯಾರೂ ಸಹಾಯ ಮಾಡುವವರು ಇರುವುದಿಲ್ಲ. ಇಂತಹ ನಷ್ಟಗಳಿಗೆ ನೀನು ಒಳಪಡದೇ ಇರಬೇಕಾದರೆ ನೀನು ಆತ್ಮೀಕದಲ್ಲಿ ಐಶ್ವರ್ಯವಂತನಾಗಬೇಕಾದರೆ ಇಂದೇ ಕರ್ತನಿಗೆ ಪ್ರಥಮ ಸ್ಥಾನ ಕೊಟ್ಟು ಪ್ರತಿನಿತ್ಯವೂ ಸತ್ಯವೇದವನ್ನು ಓದಲು ಶುರುಮಾಡು. ನೀನು ಪ್ರತಿದಿನವೂ ಸತ್ಯವೇದವನ್ನು ಓದುತ್ತಿದ್ದೇನೆ ಎನ್ನುವ ಸಾಕ್ಷಿ ನಿನ್ನಲ್ಲಿರುವುದಾದರೆ, ಇನ್ನೂ ಹೆಚ್ಚಿನ ಸಮಯವನ್ನು ಸತ್ಯವೇದವನ್ನು ಓದಲಿಕ್ಕೆ ಕೊಡು. ಆಗ ನೀನು ಆಶೀರ್ವಾದ ನಿಧಿಯಾಗುತ್ತೀಯ. ನಿನಗೆ 'ಯಾವುದು ಬೇಕು' ಸತ್ಯವೇದವೋ, ಕಷ್ಟವೋ ನೀನೇ ನಿರ್ಣಯಿಸಿಕೋ.

ಸತ್ಯದೇವರ ಬಳಿಯಲ್ಲಿ ನೀನು ಭದ್ರವಾಗಿ ನಿಂತುಕೊಳ್ಳಬೇಕು ಬೇರೆ ದೇವರುಗಳನ್ನು ಎಂದಿಗೂ ಅವಲಂಬಿಸಲೇಬಾರದೆಂದು ಯೇಸುಕ್ರಿಸ್ತನ ಆಜ್ಞೆಯಾಗಿದೆ. ಈ ಆಜ್ಞೆಗೆ ನೀನು ಒಳಪಟ್ಟು ಜೀವಿಸಬೇಕಾದರೆ ಸತ್ಯವೇದವನ್ನು ನೀನು ಹೆಚ್ಚು ಧ್ಯಾನಿಸಬೇಕು.

**ಬೆಳಕು ಮತ್ತು ಕತ್ತಲು**

'ಆಗ ಬೆಳಕು ಕತ್ತಲಿಗಿಂತ ಶ್ರೇಷ್ಠವಾಗಿರುವಂತೆ ಜ್ಞಾನವೂ ಮಾಡತಕ್ಕಿಂತ ಶ್ರೇಷ್ಠವೆಂದು ಗೋಚರವಾಯಿತು" (ಪ್ರಸಂ 2:3) ನಿನಗೆ ಯಾವಾಗ ಸುವಿನ ಜ್ಞಾನವೇ ಬೆಳಕಿನ ವರ್ಕಾಗದಲ್ಲಿ ನಿನ್ನನ್ನು ನಡೆಸುತ್ತಾಉತ್ತಮವಾದ ಸ್ಥಾನದಲ್ಲಿ ನಿಲ್ಲಿಸುತ್ತದೆ ಎಂದು ಗೋಚರ ವಾಗುತ್ತದೆ ಮತ್ತು ಕತ್ತಲೆಯ ಲೋಕದಲ್ಲಿ ನಡೆದರೆ ಮೂಢತ್ವದಲ್ಲಿ ಬಿದ್ದು ಹಾಳಾಗಿ ನಾಶವಾಗುತ್ತೀಯಾ ಎಂದು ನಿನ್ನ ಜ್ಞಾನಕ್ಕೆ ಗೋಚರವಾಗುತ್ತದೋ ಆಗಲೇ ನಿನಗಿರುವ ಎಲ್ಲಾ ಕಷ್ಟಗಳು ನಿನ್ನಿಂದ ತೊಲಗಿ ಹೋಗಿ ಸಾಲದಿಂದ ಹೊರಗೆ ಬರಲು ಸಾಧ್ಯವಾಗುತ್ತದೆ.

ಪಾಪ ಮಾಡುವವನು ಸಾಲದಲ್ಲಿಯೇ ಸಿಲುಕಿಕೊಂಡು ಹೊರಬರಲಾರದೆ ಒದ್ದಾಡುತ್ತಿರುತ್ತಾನೆ. ನೀನು ಇಂದು ಪಾಪ ಬಿಡುವುದಕ್ಕೆ ಮನಸ್ಸಿದ್ದೂ ಅದನ್ನು ಬಿಡಲಿಕ್ಕೆ ಆಗದೆ ಇರುವುದಾದರೆ ನೀನು ಮೂಢತನದಲ್ಲಿಯೂ ಮತ್ತು ಕತ್ತಲೆಯಲ್ಲಿಯೂ ಇರುವಿ ಎಂದರ್ಥ. ನೀನು ಇಂತಹ ಪರಿಸ್ಥಿತಿಯಿಂದ ಹೊರಬರಬೇಕೆಂದರೆ ಕರುಣಾಮಯಿಯಾದ ಯೇಸು ಕ್ರಿಸ್ತನ ಬಳಿಯಲ್ಲಿ ನೀನು ಅಳುತ್ತಾ ಪ್ರಾರ್ಥನೆ ಮಾಡಬೇಕು. ಆಗ ಕರ್ತನು ನಿನ್ನನ್ನು ಖಂಡಿತವಾಗಿ ಬಿಡುಗಡೆ ಮಾಡುವನು.

ಕಡಿಮೆ ಸಂಬಳದಲ್ಲಿ ಕಷ್ಟಪಡುತ್ತಿರುವ ನೀನು ಹೆಚ್ಚು ಸಂಬಳ ಹೊಂದಿಕೊಳ್ಳುವ ಹಾಗೆ ಕರ್ತನು ನಿನ್ನನ್ನು ಮಾರ್ಪಡಿಸುತ್ತಾನೆ. ನೀನು ಯಾವಾಗಲೂ ಆತನಲ್ಲೇ ಆಧಾರಗೊಂಡು ಆತನ ಮಾತುಗಳನ್ನು ಅನುಸರಿಸಿ ನಡೆದು ಕತ್ತಲೆಯಿಂದ ಬೆಳಕಿಗೂ ಮೂಢತ್ವ ಬಿಟ್ಟು ಕರ್ತನ ಜ್ಞಾನಕ್ಕೂ ತಿರುಗಿಕೊಳ್ಳುತ್ತೀಯೋ ಆಗ ಕರ್ತನು ನಿನ್ನ ಸಾಲದಿಂದ ಹೊರಬರಲು ಸಹಾಯ ಮಾಡುತ್ತಾನೆ. ಬೇರೆಯವರು ನಿನ್ನ ಬಳಿ ಸಾಲ ಕೇಳುವಾಗ ನೀನೇ ಅವರಿಗೆ ಕೊಡುವ ರೀತಿಯಲ್ಲಿ ಕರ್ತನ ಆಶೀರ್ವಾದಕ್ಕೆ ಪಾತ್ರನಾಗು/ಳಾಗುವಿ, ನಿನಗೆ ಯಾವುದು ಬೇಕು' ಕತ್ತಲೆಯೋ? ಬೆಳಕೋ? ಜ್ಞಾನವೋ? ಮೂಢತನವೋ?

## ಬಿಡುಗಡೆ ಹೊಂದಲು ಪ್ರಾರ್ಥಿಸು

"ಕರ್ತನ ಮೇಲೂ ಆತನು ಮಾಡಿದ ವಾಗ್ದಾನಗಳ ಮೇಲೂ ನಿಮ್ಮ ಹೃದಯವೂ ಕಣ್ಣುಗಳೂ ಇರಲಿ. ಆಗ ನೀವು ಎಂದೆಂದಿಗೂ ಕದಲದ ಚಿಯೋನ್ ಪರ್ವತದ ಹಾಗಿರುವಿರಿ. (ಧರ್ಮೋ 32:12) ಕರ್ತನ ವಾಕ್ಯಗಳನ್ನೂ ಮತ್ತು ವಾಗ್ದಾನಗಳನ್ನೂ ಹಿಡಿದು ಪ್ರಾರ್ಥಿಸು. ಆಗ ನಿನಗಿರುವ ಎಲ್ಲಾ ಸಾಲದಿಂದಗತಿ, ಅವಮಾನದಿಂದಾಗಲೀ ಬೇರೆ ಎಂತಹ ಕಷ್ಟದಿಂದಾಗಲೀ ಹೊರ ಬರಲು ನಿನಗೆ ಸಾಧ್ಯವಾಗುತ್ತದೆ. ಮತ್ತು ಪ್ರತಿಯೊಂದು ಮಂಡಲದಲ್ಲೂ ನೀನು ಜಯವನ್ನು ಹೊಂದಿಕೊಳ್ಳುವಿ.

ಜೀವನದಲ್ಲಿ ಸಂಕಷ್ಟಗಳು ಸಂಭವಿಸುವಾಗ ಕೆಲವು ಸತ್ಯಾಂಶಗಳನ್ನು ಮತ್ತೊಬ್ಬರ ಬಳಿಯಲ್ಲಿ ನೀನು ಹಂಚಿಕೊಳ್ಳಲು ಸಾಧ್ಯವಿಲ್ಲದೆ ಪಕ್ಷಕ್ಕೆ ಕರ್ತನ ಬಳಿಯಲ್ಲಿ ಹೇಳು ಆತನು ಒಬ್ಬರಿಗೂ ದೂರವಾದವನಲ್ಲ. ತನ್ನ ಬಳಿಗೆ ಬರುವವರನ್ನು ಆತನು ಎಂದಿಗೂ ತಳ್ಳಿಬಿಡುವುದಿಲ್ಲ. ಮನುಷ್ಯರ ಬಳಿಯಲ್ಲಿ ಹಂಚಿಕೊಂಡು ಸಂತೋಷದ ಹಾದಿಯನ್ನು ನೀನು ಕಾಣಲು ಸಾಧ್ಯವಿಲ್ಲ. ಯಾವಾಗ ನಿನ್ನ ಕಷ್ಟಪಾಡುಗಳನ್ನು ಕರ್ತನ ಬಳಿಯಲ್ಲಿ ಒಪ್ಪಿಸುವಿಯೋ ಆಗ ಯೇಸುಕ್ರಿಸ್ತನು ನಿನ್ನ ಹತ್ತಿರವಿದ್ದು ನಿನ್ನನ್ನು ಬಿಡಿಸಿ, ತಪ್ಪಿಸಿ ನಿನ್ನ ಜೊತೆಯಲ್ಲಿ ಇರುತ್ತಾನೆ. ಆಗ ನಿನ್ನ ಅನುಭವವನ್ನು ಯೇಸುವಿನ ಪ್ರೀತಿಯನ್ನು ಧಾರಾಳವಾಗಿ ಎಲ್ಲರಿಗೂ ಹೇಳಿ ನೀನು ಸಂತೋಷ ಪಡಲು ಸಾಧ್ಯವಾಗುತ್ತದೆ.

ಕರ್ತನ ವಾಗ್ದಾನವನ್ನು ನೆನಪಿನಲ್ಲಿ ಇಟ್ಟಿಕೋ, "ನೀವು ಅನೇಕ ಜನಗಳಿಗೆ ಸಾಲಕೊಡುವಿರೇ ಹೊರತು ಸಾಲ ತೆಗೆದುಕೊಳ್ಳುವುದಿಲ್ಲ. ನಾನು ಈಗ ನಿಮಗೆ ಬೋಧಿಸುವ ಮಾತುಗಳನ್ನು ನೀವು ಬಿಟ್ಟು ಎಡಬಲಕ್ಕೆ ತೊಲಗದೆ ಬೇರೆ ದೇವರುಗಳನ್ನು ಅವಲಂಬಿಸದೆ ನಿಮ್ಮ ದೇವರಾದ ಕರ್ತನ ಆಜ್ಞೆಗಳಲ್ಲೇ ಲಕ್ಷ್ಯವಿಟ್ಟು ಅವುಗಳನ್ನೇ ಅನುಸರಿಸಿ ನಡೆದರೆ ಆತನು ಇತರರಿಗೆ ನಿಮ್ಮನ್ನು ಅಧೀನ ಮಾಡದೆ ಎಲ್ಲರಿಗೂ ಶಿರಸ್ಸನ್ನಾಗಿಯೇ ಮಾಡುವನು; ನೀವು ಎಲ್ಲರಿಗಿಂತಲೂ ಮೇಲಣವರಾಗಿರುವರೇ ಹೊರತು ಕೆಳಗಣದವ ರಾಗಿರುವುದಿಲ್ಲ." (ಧರ್ಮೋ 28:13,14)

ನೀನು ಸಾಲ ಮಾಡಿರುವುದಾದರೆ ನಿನಗೆ ಸಾಲಕೊಟ್ಟವರ ಅಧೀನದಲ್ಲಿಯೇ ಇರುವಿ ದೇವರು ನಿನ್ನನ್ನು ಮನುಷ್ಯನ ಅಧೀನದಲ್ಲಿ ಇರಿಸುವುದಕ್ಕೆ ಇಷ್ಟವಿಲ್ಲ, ಈಗಲೇ ಕ್ರಿಸ್ತನಿಗೆ ಒಪ್ಪಿಸಿಕೊಡು. ಸಾಲ ಮಾಡುವುದು ಪಾಪವಲ್ಲ, ಸಾಲ ಮಾಡದೇ ಯಾವ ಮನುಷ್ಯನೂ ತನ್ನ ಜೀವನದಲ್ಲಿ ಮೇಲೆ ಬರುವುದಕ್ಕೆ ಸಾಧ್ಯವಿಲ್ಲ. ಆದರೆ ಸಾಲ ಮಾಡಿ ಅದನ್ನು ತೀರಿಸದೇ ಇರುವುದು ಬಹುದೊಡ್ಡ ಪಾಪವಾಗಿದೆ. ಕರ್ತನು ನಿನಗೇಕನಸು ಮಾಡುವ ಸಲುವಾಗಿ ಸಾಲ ಕೊಡುವ ವ್ಯಕ್ತಿಯನ್ನು ನಿನ್ನ ಬಳಿಯಲ್ಲಿ ಕಳುಹಿಸಿಕೊಟ್ಟಿರುತ್ತಾನೆ, ಆದರೆ ನೀನು ನಿನ್ನ ಜೀವನ ಪರ್ಯಂತರವಾಗಿ ಸಾಲ ಮಾಡಿಕೊಂಡೇ ಇರು ಎಂದು ಕರ್ತನು ಎಂದಿಗೂ ಹೇಳುವುದಿಲ್ಲ, ಆದರೆ ಸಾಲವನ್ನು ಬಹುಬೇಗ ನೀನು ತೀರಿಸಿ ಸಾಲದಿಂದ ಹೊರಬಾ ಎಂದು ನಿನಗೆ ಉಪದೇಶಿಸುತ್ತಿದ್ದಾನೆ.

ಆತನು ಕಲಿಸಿಕೊಡುವ ಮಾರ್ಗದಲ್ಲಿ ನಡೆಯುವುದಕ್ಕೆ ಒಪ್ಪಿಸಿಕೊಡು ನಿನ್ನ ಸಾಲವು ನಿನ್ನನ್ನು ಬಿಟ್ಟು ಹೋಗುವಂತೆ ಈ ವಾಕ್ಯವನ್ನು ಹಿಡಿದು ಪಾರ್ಥಿಸು. "ಸಾಸಿವೆ ಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ -ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವದಿಲ್ಲ. (ಮತ್ತಾಯ 17: 20) ನಿನ್ನಿಂದ ಆಗದೇ ಇರುವ ಕಾರ್ಯವು ಯವುದೂ ಇರುವುದಿಲ್ಲ ಎಂದು ಕರ್ತನು ಹೇಳಿರಬೇಕಾದರೆ, ಆತನು ನಿನಗೆ ಎಲ್ಲಾ ಕಾರ್ಯಗಳನ್ನು ಮಾಡಿ ಕೊಡುವನು. ನಿನ್ನ ಸಾಲದಿಂದ ಹೊರಬರುವಂತೆ ಹೆಚ್ಚಾಗಿ ದೇವರ ವಾಕ್ಯವನ್ನು ಹಿಡಿದು ಪ್ರಾರ್ಥಿನೆ ಮಾಡು. ಎಡಬಿಡದೆ ಪ್ರಾರ್ಥಿಸುವಾಗ ತಡವಾದರೂ ಅನ್ಯಾಯವಾಗುವುದಿಲ್ಲ ಬಹುಬೇಗನೇ ಕರ್ತನು ನಿನಗೆ ಸಹಾಯಮಾಡಿ ನಿನ್ನನ್ನು ಎಲ್ಲಾ ಸಾಲದಿಂದ ಬಿಡುಗಡೆ ಮಾಡುತ್ತಾನೆ.

ಕರ್ತನು, ನಿನ್ನನ್ನು ಯಾರಿಗೂ ಅಧೀನವಾಗಿ ಇಡದಂತೆ ಎಲ್ಲರ ಮುಂದೆ ಯಜಮಾನನ ರೀತಿಯಲ್ಲಿ ನಡೆಸಲು ಇಷ್ಟಪಡುತ್ತಾನ ಯೇಸುಕ್ರಿಸ್ತನು ನಿನ್ನ ಜೊತೆಯಲ್ಲಿ ಇರುವಾಗ ಎಲ್ಲರೂ ನಿನ್ನನ್ನು ನೋಡಿ ಭಯಪಡುತ್ತಾರೆ. ದಿನಗಳು ಕಳೆಯುತ್ತಾ ಮೊದಲು ಇದ್ದ ಎಲ್ಲಾ ಪರಿಸ್ಥಿತಿಗಳನ್ನು ಬದಲಾಯಿಸಿ, ನಿನ್ನನ್ನು ಅನೇಕರಿಗೆ ಸಾಲ ಕೊಡುವ ರೀತಿಯಲ್ಲಿ ಉನ್ನತವಾಗಿ ನಿಲ್ಲಿಸುತ್ತಾನೆ.

ಆಗ ನಿನಗೆ ಯಾವುದಕ್ಕೂ ಕೊರತೆಯಿಲ್ಲದೆ ಸಮೃದ್ಧಿ ಹೊಂದಿಕೊಂಡು ನೀನು ಜೀವಿಸುವದನ್ನು ಎಲ್ಲರೂ ನೋಡಿ ಆಶ್ಚರ್ಯ ಪಡುತ್ತಾರೆ. ಯೇಸುವಿನ ಪ್ರೀತಿಯಲ್ಲಿ ಬೆಳೆಯುತ್ತಾ ಇತರರು ಮಾಡಿರುವ ಎಲ್ಲಾ ತಪ್ಪುಗಳನ್ನು ಕ್ಷಮಿಸಿ ಪ್ರೀತಿ ಐಕ್ಯತೆಯಿಂದ ಎಲ್ಲರೊಟ್ಟಿಗೆ ಬೆಳೆಯಲು ಅವರೊಂದಿಗೆ ಸಮಾಧಾನದಿಂದ ಕೂಡಿ ಇರಲು ಪ್ರಯತ್ನಿಸು, ಆಗ ಇನ್ನೂ ಹೆಚ್ಚಾಗಿ ಕರ್ತನು ನಿನಗೆ ಸಹಾಯ ಮಾಡುತ್ತಾನೆ.

ಇಂದು ನೀನು ಮನುಷ್ಯನ ಅಧೀನದಿಂದ ತಪ್ಪಿಸಿಕೊಳ್ಳಬೇಕೋ ಸಾಲದಿಂದ ಹೊರಬರಬೇಕೊ ಬಿಡುಗಡೆ ಬೇಕೋ, ಅಥವಾ ಬೇಜವಾಬ್ದಾರಿಯಿಂದ ಮುಂದೆ ಸಾಗುತ್ತೀಯೋ ನಿನಗೆ 'ಯಾವುದು ಬೇಕು?'

## ಯೇಸು ಕ್ರಿಸ್ತನೇ ನಿನಗೆ ಒಳ್ಳೆಯ ಪ್ರಾಣಮಿತ್ರ

ಈ ಲೋಕದಲ್ಲಿ ನಿನಗಿರುವ ನಿನ್ನ ಸ್ನೇಹಿತರು 'ಏಣಿ'ಯಂತೆ, ಇದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಕೆಲವೊಂದು ಸಂದರ್ಭದಲ್ಲಿ ನಿನ್ನ ಸ್ನೇಹಿತರು ನಿನಗೆ ಉತ್ತಮವಾದ ಸ್ಥಾನಕ್ಕೆ ಏರಲು ಸಹಾಯಮಾಡಬಹುದು, ಮತ್ತು ಒಳ್ಳೇ ಪದವಿಯಲ್ಲಿ ನಿಲ್ಲಿಸುವುದಕ್ಕೆ ನಿನಗೆ ಸಹಕಾರ ಮಾಡಬಹುದು, ಒಳ್ಳೆ ಮಾರ್ಗದಲ್ಲಿ ನಡೆಯುವುದಕ್ಕೂ ಪ್ರೋತ್ಸಾಹ ಕೊಡಬಹುದು. ಆದರೆ ಸಹಾಯಕವಾಗಿ ನಿಂತವರೇ ಕೆಲವೊಂದು ಸಂದರ್ಭಕ್ಕೆ ಒಳಪಟ್ಟು, ನಿನ್ನನ್ನು ಕೆಳಗೆ ದೊಬ್ಬಲು ಅಂದರೆ ಸಾಲದಲ್ಲಿ ಬೀಳಿಸುವುದಕ್ಕೂ, ಕೆಟ್ಟ ಮಾರ್ಗದಲ್ಲಿ ನಡೆಸುವುದಕ್ಕೂ, ಕುಟುಂಬ ಜೀವನವನ್ನು ಹಾಳುಮಾಡುವುದಕ್ಕೂ ಕೆಳಗೆ ಬಿದ್ದಾಗ ನಗುವುದಕ್ಕೂ, ನಿನ್ನ ಮುಂದೆ ನಿಂತುಕೊಳ್ಳುವ ಸಾಧ್ಯತೆಗಳಿದೆ ಎಂದು ನೀನು ತಿಳಿದುಕೊಂಡು, ನಿನ್ನ ಪ್ರಾಣ ಮಿತ್ರನಾದ ಯೇಸುವಿನ ಸಹಾಯವನ್ನು ಹೆಚ್ಚಾಗಿ ಬಯಸಲು ಪ್ರಯಾಸಪಡು.

ಈ ರೀತಿ ಎರಡು ವಿಧದಲ್ಲಿ ನಿನ್ನ ಸ್ನೇಹಿತರು ನಿನ್ನನ್ನು ನಡೆಸಲು ಸಾಧ್ಯವಿದೆ. ಆದರೆ ನಿನ್ನ ಜೀವನಕ್ಕೆ ಅನೇಕ ಸ್ನೇಹಿತರು ಬೇಡ, ಅದರಿಂದ ಯಾವುದೇ ಪ್ರಯೋಜನವಿಲ್ಲ, ಎಲ್ಲವೂ ನಿನ್ನಿಂದ ನಷ್ಟವಾಗುತ್ತದೆ. ಆದರೆ ಒಬ್ಬನು ಮಾತ್ರ ಯಾವಾಗಲೂ ನಿನ್ನ ಜೊತೆಯಲ್ಲಿ ಇರಬೇಕು. ಆತನು ನಿನ್ನ ಜೊತೆಯಲ್ಲಿ ಇದ್ದರೆ, ನಿನ್ನ ಜೀವನದಲ್ಲಿ ಕತ್ತಲೆಯ ಮಾರ್ಗ ಇರುವುದಿಲ್ಲ. ಆ ಒಬ್ಬನೇ ಸತ್ಯದೇವರಾದ ಯೇಸು ಕ್ರಿಸ್ತನು. ಆತನೇ ನಿನ್ನನ್ನು ಯಾವಾಗಲೂ ಬೆಳಕಿನ ಮಾರ್ಗದಲ್ಲಿ ನಡೆಸುತ್ತಾನೆ. "ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯೂ ಯಾವುದು ಇಲ್ಲ." (ಯೋಹಾನ 15:13) ಎಂದು ಹೇಳಿ ಕ್ರಿಸ್ತನು ನಿನಗಾಗಿ ತನ್ನ ಪ್ರಾಣವನ್ನೇ ಕೊಟ್ಟಿರುವುದರಲ್ಲಿ

ಆತನು ನಿನ್ನ ಮೇಲೆ ಇಟ್ಟಿರುವ ಪ್ರೀತಿ ಎಷ್ಟೊಂದು ಅಪಾರವಾಗಿದೆ ಎಂದು ಅರ್ಥಮಾಡಿಕೊಳ್ಳಲು ಪ್ರಯಾಸ ಪಡು.

ಆತನೊಬ್ಬನೇ ನಿಜವಾದ ಸ್ನೇಹಿತನಾಗಿದ್ದಾನೆ. ಪ್ರಾಣ ಕೊಟ್ಟ ನಿನ್ನ ಸ್ನೇಹಿತನಾದ ಯೇಸುಕ್ರಿಸ್ತನೊಬ್ಬನೇ ನಿನ್ನನ್ನು ಈ ಲೋಕದಲ್ಲಿ ಸಾಲದಲ್ಲಿ ಬೀಳದಂತೆ ಒಂದು ವೇಳೆ ಸಾಲ ಇದ್ದರೂ ತೀರಿಸುವಂತೆ ನಿನಗೆ ಸಹಾಯಮಾಡುವನು. "ದುಷ್ಟನು ಸಾಲಮಾಡಿಕೊಂಡು ತೀರಿಸಲಾದರೆ ಹೋಗುವನು; ನೀತಿವಂತನು ಪರೋಪಕಾರಿಯಾಗಿ ಧರ್ಮಕೊಡುವನು." (ಕೀರ್ತನೆ 37:21) ಈ ಲೋಕದಲ್ಲಿ ಅನೇಕರು ಸಾಲ ಮಾಡಿಕೊಂಡು ತೀರಿಸಲು ಆಗದೇ ಆತ್ಮಹತ್ಯೆಮಾಡಿಕೊಳ್ಳುತ್ತಾರೆ ಇಂತಹ ವಾರ್ತೆಗಳನ್ನು ನಾವು ಕೇಳುತ್ತಲೇ ಇರುತ್ತೇವೆ. ಆದರೆ ಅಂತಹ ವ್ಯಕ್ತಿಗಳಿಗೆ ಯೇಸುಕ್ರಿಸ್ತನ ಪ್ರೀತಿಯ ಬಗ್ಗೆ ಅರಿವು ಉಂಟಾದರೆ ಖಂಡಿತವಾಗಿ ಅವರು ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ. ನೀನಾದರೋ ಕ್ರಿಸ್ತನ ಪ್ರೀತಿಯನ್ನು ರುಚಿನೋಡಿದ್ದೀಯಾ. ನಿನ್ನ ಸಾಲವನ್ನು ದೇವರು ತೀರಿಸುವನೆಂದು ನೀನು ಬಲ್ಲ. ಹಾಗೆಯೇ ನಿನ್ನ ಜೊತೆಯಿರುವ ವ್ಯಕ್ತಿಗೆ ಕ್ರಿಸ್ತನ ಪ್ರೀತಿಯನ್ನು ಅರ್ಥ ಮಾಡಿಸು. ಆಗ ಆತ್ಮಹತ್ಯೆಯಿಂದ ಅನೇಕರು ಪಾರಾಗಲು ಸಾಧ್ಯವಾಗುತ್ತದೆ.

ನೀನು ಎಡಬಲಕ್ಕೆ ತಿರುಗದೆ ಯಾವ ದೇವರುಗಳಿಗೂ ಅಡ್ಡಬೀಳದೇ ಆತನು ಹೇಳಿಕೊಡುವ ಮಾತುಗಳನ್ನು ಅನುಸರಿಸುತ್ತಾ ಅದನ್ನೇ ಲಕ್ಷವಿಟ್ಟುಕೊಂಡು ನೀನು ನಡೆಯುವುದಕ್ಕೆ ಪ್ರಯಾಸಪಡು. ಆತನೇ ಒಳ್ಳೇ ಸ್ನೇಹಿತನಾಗಿ ನಿನ್ನ ಜೊತೆಯಲ್ಲಿ ಇರುತ್ತಾನೆ. ನಿನಗೆ 'ಯಾವುದು ಬೇಕು' ಈ ಲೋಕದ ಸ್ನೇಹಿತರಾ ಅಥವಾ ನಿನಗೋಸ್ಕರ ಪ್ರಾಣ ಕೊಟ್ಟ ನಿನ್ನ ಪ್ರಾಣ ಮಿತ್ರನಾದ 'ಯೇಸುಕ್ರಿಸ್ತ' ನಾ 'ಯಾರು ಬೇಕು' ಯಾವ ಸ್ನೇಹಿತ ಬೇಕು? ನಿನ್ನ ತೀರ್ಮಾನದ ಮೇಲೆ ನಿನ್ನ ಆಶೀರ್ವಾದವು ಅಡಕವಾಗಿದೆ.

# 7. ದೇವರ ಸ್ವಾರೂಪ್ಯ

"ನನ್ನ ಪ್ರಿಯವಾದ ಮಕ್ಕಳೇ, ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ ನಿಮಗೋಸ್ಕರ ತಿರಿಗಿ ಪ್ರಸವವೇದನೆ ಪಡುತ್ತೇನೆ." (ಗಲಾತ್ಯ 4:19)

ಮೇಲಿನ ವಾಕ್ಯವು ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯಾಗಿದೆ. ಈ ವಾಕ್ಯದ ಪ್ರಕಾರ ನೋಡುವಾಗ ನಿನ್ನಲ್ಲಿ ಮೊದಲು ಯೇಸು ಕ್ರಿಸ್ತನ ಸ್ವಾರೂಪ್ಯ ಬರುವುದಕ್ಕೆ ನಿನ್ನನ್ನು ಬೆಳೆಸುವ ನಿನ್ನ ಆತ್ಮೀಕ ತಾಯಿಯೋ ಆತ್ಮಿಕ ತಂದೆಯೋ ಪ್ರಸವವೇದನೆಯನ್ನು ಪಡುತ್ತಲೇ ಇರುತ್ತಾರೆಂದು ಅರ್ಥಮಾಡಿಕೊಳ್ಳಬೇಕು. ಒಂದು ಮಗು ಈ ಲೋಕದಲ್ಲಿ ಹುಟ್ಟಲು ಒಂದು ತಾಯಿ ಪ್ರಸವ ವೇದನೆ ಪಡುತ್ತಾಳೆ. ಅದೇ ರೀತಿಯಲ್ಲಿ ಒಂದು ವ್ಯಕ್ತಿ ಕ್ರಿಸ್ತನನ್ನು ಅರಿಯಲು ಕ್ರಿಸ್ತನ ಸ್ವಾರೂಪ್ಯವನ್ನು ಹೊಂದಿಕೊಳ್ಳುವಂತೆ ಕರ್ತನು ನಿನಗಾಗಿ ಆತ್ಮೀಕ ತಂದೆಯನ್ನಾಗಲಿ ಅಥವಾ ಆತ್ಮೀಕ ತಾಯಿಯನ್ನಾಗಲಿ ಇಟ್ಟಿದ್ದಾನೆಂದು ನೀನು ತಿಳಿದುಕೊಳ್ಳಲೇಬೇಕಾದ ನಿಜಾಂಶವಾಗಿದೆ.

ಯಾವ ರೀತಿ ಪ್ರತಿಮನುಷ್ಯನು ತನ್ನ ತಂದೆ-ತಾಯಿಯ ಬೆಲೆಯನ್ನು ತಿಳಿಯದೇ ಅವರನ್ನು ಅವಹೇಳನ ಮಾಡುತ್ತಾನೋ ಅದೇ ರೀತಿಯಲ್ಲಿ ತನ್ನ ಆತ್ಮೀಯ ಪೋಷಾಕರ ಬೆಲೆಯನ್ನು ತಿಳಿಯದೆ ಅವರನ್ನು ಅವಹೇಳನ ಮಾಡುತ್ತಾ ಅವರನ್ನು ಕೀಳಾಗಿ ನೋಡುತ್ತಾ ತಾತ್ಸಾರ ಮಾಡುತ್ತಾ ಜೀವಿಸುವವರೂ ಇದ್ದಾರೆ. ಈ ಪಾಪವು ಬಹು ಘೋರವಾದ ಪಾಪವೆಂದು ಆ ವ್ಯಕ್ತಿಯ ಗಮನಕ್ಕೆ ಬರುವುದರೊಳಗೆ ಬಹಳ ಸಮಯ ಕಳೆದು ಹೋಗಿರುತ್ತದೆ.

ಪ್ರೀತಿಯ ದೇವರ ಮಗುವೇ ನೀನು ಇದನ್ನು ತಿಳಿದುಕೊಳ್ಳಲೇ ಬೇಕು. ನೀನು ಏನನ್ನು ಬಿತ್ತುತ್ತೀಯೋ ಅದನ್ನೇ ಕೊಯ್ಯಬೇಕು. ಈ ದಿನ ನೀನು ನಿನ್ನ ಆತ್ಮೀಯ ಪೋಷಕರನ್ನು ಹೀನಾಯವಾಗಿ ನೋಡುವುದಾದರು. ಮುಂದೆ ನೀನು ನಡೆಸುವ ನಿನ್ನ ಆತ್ಮೀಯ ಮಕ್ಕಳು ನಿನ್ನನ್ನು ಖಂಡಿತವಾಗಿ ಹೀಯವಾಗಿಯೇ ನೋಡುವರು.

ಕರ್ತನಾದ ಯೇಸು ಕ್ರಿಸ್ತನು ಯಾರೆಂದು ನಿನಗೆ ಒಂದು ಆತ್ಮೀಕವಾದಇಲ್ಲಿ ತಿಳಿಸದಿದ್ದ ಪಕ್ಷಕ್ಕೆ ನೀನು ನರಕಕ್ಕೆ ಹೋಗುತ್ತಿದೆ. ಆದರೆ ನೀನು ಖಂಡಿತವಾಗಿ ನಿನ್ನನ್ನು ಸೃಷ್ಟಿ ಮಾಡಿದ ಕರ್ತನನ್ನು ತಿಳಿದುಕೊಳ್ಳಬೇಕೆಂದು ಆಶ್ರನ ಚಿತ್ತವಾಗಿದೆ. ಅದಕ್ಕಾಗಿಯೇ ಕರ್ತನಾದ ಯೇಸು ಕ್ರಿಸ್ತನು ನಿನಗೋಸ್ಕರ ಇಟ್ಟಿರುವ ಆಶೀರ್ವಾದವನ್ನು ನೀನು ಹೊಂದಿಕೊಳ್ಳುವುದಕ್ಕೆ ನಿನಗೆ ಉಪದೇಶಿಸಲು ನಿನ್ನ ಬಳಿ ಒಂದು ಆತ್ಮೀಕ ವ್ಯಕ್ತಿಯನ್ನು ಕಳುಹಿಸುತ್ತಾನೆ, ನಿನ್ನ ಆತ್ಮ ರಕ್ಷಣೆಗಾಗಿ ನಿನ್ನ ಬಳಿ ಬಂದು ಪ್ರಯಾಸ ಪಡುವಂತಹ ವ್ಯಕ್ತಿಯನ್ನು ನೀನು ಗೌರವಿಸುವುದು ನಿನ್ನ ಕರ್ತವ್ಯವಾಗಿದೆ, ಮತ್ತು ಆಸಕ್ತಿಯಿಂದ ಅವರ ಮಾತನ್ನು ನಿನ್ನ ಜೀವವಿರುವವರೆಗೂ ನೀನು ಕೇಳು, ಆಗಲೇ ಕರ್ತನ ಶಕ್ತಿ ಏನೆಂದು ಪೂರ್ತಿಯಾಗಿ ನೀನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

**ರಕ್ಷಣೆ ಪ್ರಾಮುಖ್ಯವಾಗಿದೆ**

''ಯೇಸು" ಎನ್ನುವ ಪದಕ್ಕೆ "ರಕ್ಷಕ" ಎಂದರ್ಥ, ಈ ರಕ್ಷಣೆ ಪ್ರತಿಯೊಬ್ಬ ಮನುಷ್ಯನಿಗೆ ತುಂಬಾ ಪ್ರಾಮುಖ್ಯವಾಗಿದೆ. ಏಕೆಂದರೆ ಪ್ರತಿ ಮನುಷ್ಯನು ತಮಗೆ ನೇಮಕವಾದ ದಿನದಂದು ಈ

ಭೂಮಿಯನ್ನು ಬಿಟ್ಟು ಬಿಟ್ಟು ಅವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಹೊಂದುವುದಕ್ಕಾಗಿ ಕ್ರಿಸ್ತನ ನ್ಯಾಯಾಸನದ ಮುಂದೆ ನಿಲ್ಲಬೇಕಾಗಿದೆ. ಆ ತೀರ್ಪಿನ ಪ್ರಕಾರ ಎಲ್ಲಾ ಮನುಷ್ಯನು ಅವರವರ ಯೋಗ್ಯತೆಗೆ ತಕ್ಕ ಸ್ಥಳಕ್ಕೆ ಹೊರಟು ಹೋಗಬೇಕು. ಅದೇ ರೀತಿ ಕ್ರಿಸ್ತನು ಕೊಡುವ ರಕ್ಷಣೆಯನ್ನು ನೀನು ಪೂರ್ತಿಯಾಗಿ ಹೊಂದಿಕೊಳ್ಳ ಬೇಕೆಂದರೆ ತಕ್ಕ ಪರಿಶ್ರಮ ಪಡಲೇಬೇಕು.

ಕ್ರಿಸ್ತನ ಸ್ವಾರೂಪವು ನಿನ್ನಲ್ಲಿ ಬಂದಿರುವುದಾದರೆ ನೀನು ಪರಲೋಕಕ್ಕೆ ಏರಿಸಲ್ಪಡುವಿ ಇಲ್ಲದಿದ್ದರೆ ಅಗ್ನಿ ನರಕ್ಕಕ್ಕೆ ಹೊರಟುಹೋಗುವಿ, ಅದಕ್ಕಾಗಿ ನಿನ್ನ ಮೇಲೆ ಅಧಿಕಾರಿಯಾಗಿ ಇಟ್ಟಿರುವ ನಿನ್ನ ಆತ್ಮೀಕ ಪೋಷಕರ ಮಾತನ್ನು ಕೇಳಿ ಅನುಸರಿಸಲು ಪ್ರಯಾಸಪಡು.

ನಿನಗೆ ಪರಲೋಕವು ಸಿಕ್ಕಬೇಕೆಂದರೆ ಕರ್ತನ ನಿಯಮಗಳನ್ನೆಲ್ಲಾ ಪಾಲಿಸಬೇಕು. ಪ್ರತಿ ಮನುಷ್ಯನು ಪ್ರಯಾಸಪಟ್ಟರೆ ಮಾತ್ರ ಅದಕ್ಕೆ ತಕ್ಕ ಫಲವನ್ನು ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ಸುಮ್ಮ-ಸುಮ್ಮನೇ ಯಾವುದೇ ಪದವಿ, ಗೌರವ ಸ್ಥಾನವಾಗಲಿ-ಮಾನವಾಗಲಿ ಪಡೆದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಪ್ರತಿಯೊಂದು ಒಳ್ಳೆ ಸಾಧನೆಯ ಹಿಂದೆ ಎಷ್ಟೋ ಪ್ರಯಾಸವಿರುತ್ತದೆ.

ನೀನು ರಕ್ಷಣೆಯನ್ನು ಕಾಪಾಡಿಕೊಳ್ಳಲು ಎಂತಹ ಸಮಸ್ಯೆಗಳು ಬಂದರು ಎದುರಿಸಲು ನೀನು ಸಿದ್ಧವಾಗಿರಬೇಕು. ರಕ್ಷಣೆಯನ್ನು ಕಾಪಾಡಿಕೊಳ್ಳಬೇಕೆಂದರೆ ನೀನು ಪ್ರಯಾಸಪಡಬೇಕು. ಪ್ರಯಾಸ ಪಡಲು ನಿನ್ನ ಮನಸ್ಸು ಸಿದ್ಧವಿಲ್ಲದಿದ್ದರೆ ಖಂಡಿತವಾಗಿಯೂ ನರಕಕ್ಕೆದೊಬ್ಬಲ್ಪಡುತ್ತೀಯ ಅದರಿಂದ ನಿನ್ನನ್ನು ಬಿಡುಗಡೆ ಮಾಡಲು ಯಾರೂ ನಿನ್ನ ಬಳಿ ಬರುವುದಿಲ್ಲ. ನಿನ್ನ ಆತ್ಮೀಯ ಪೋಷಕರೂ ಬರುವುದಿಲ್ಲ. ಆತ್ಮ ರಕ್ಷಕನಾದ ಯೇಸು ಕ್ರಿಸ್ತನೂ ಸಹ ಬರುವುದಿಲ್ಲ.

ನೀನು ನರಕಕ್ಕೆ ಹೋಗಲು ಯಾವ ಪ್ರಯಾಸವೂ ಇಲ್ಲ ಈಗ ಯಾವ ರೀತಿಯಲ್ಲಿ ಭಯಭಕ್ತಿಯಿಲ್ಲದೆ ನಿನ್ನ ಇಷ್ಟದ ಪ್ರಕಾರ ಜೀವಿಸುತ್ತಿದ್ದಿಯೋ ಹಾಗೇ ಸುಮ್ಮನೇ ಜೀವಿಸಿದರೆ ಸಾಕು ನೇರವಾಗಿ ಅಗ್ನಿ ನರಕಕ್ಕೆ, ಹುಳಗಳ ಕಾಟವಿರುವ ಸ್ಥಳಕ್ಕೆ ಹೊರಟು ಹೋಗುತ್ತೀಯ. ಚಿಂತಿಸು ನೀನು ಎಲ್ಲಿ ಹೋಗಬೇಕು. ನಿನಗೆ 'ಯಾವುದು ಬೇಕು', ಸ್ವರ್ಗವೋ ನರಕವೋ, ಸ್ವರ್ಗವು ಬೇಕೆಂದರೆ ಕ್ರಿಸ್ತನ ಸ್ವಾರೂಪ್ಯವು ನಿನ್ನಲ್ಲಿ ಉಂಟಾಗಬೇಕು. ಅದಕ್ಕೆ ಸಾಕಷ್ಟು ಪರಿಶ್ರಮವೂ ಸಹ ಬೇಕು. ನರಕವು ಸಾಕೆಂದರೆ ಅದಕ್ಕೆ ಯಾವ ಪರಿಶ್ರಮವೂ ಇರುವುದಿಲ್ಲ. ಆದರೆ ನಿತ್ಯ-ನಿತ್ಯವಾಗಿ ಹೋಗಿ ಪಡುವ ಹಿಂಸೆಗೆ ಯಾವ ಕೊನೆಯೂ ಇರುವುದಿಲ್ಲ. ಅಲ್ಪ ದಿನದ ಸಂತೋಷಕ್ಕಾಗಿ ಚಿಂತಿಸುತ್ತೀಯಾ, ನಿತ್ಯವಾಗಿ ಸಿಕ್ಕುವ ಸಂತೋಷ ಅವಶ್ಯವಿದೆಯೋ ನೀನೇ ತೀರ್ಮಾನಿಸಿಕೋ ನಿನಗೆ 'ಯಾವುದು ಬೇಕು'.

ಒಂದು ಭಾರಿ ನೀನು ಕ್ರಿಸ್ತನ ಪ್ರೀತಿಯನ್ನು ರುಚಿಸಿ ನೋಡುವುದಾದರೆ ಕೊನೆ ತನಕ ಯಾವುದೇ ಕಾರಣಕ್ಕೂ ಈ ರಕ್ಷಣೆಯನ್ನು ನಿನ್ನ ಜೀವಮಾನದಲ್ಲಿ ಕಳೆದುಕೊಳ್ಳುವುದಿಲ್ಲ. ಇದರಿಂದ ಬರುವ ಆಶೀರ್ವಾದಗಳನ್ನು ಬಿಟ್ಟು ಕೊಡುವುದೂ ಸಹ ಇಲ್ಲ, ನೀನು ಯೇಸುವನ್ನು ಹೃದಯಪೂರ್ವಕವಾಗಿ ನಂಬುವುದಾದರೆ ಆತನೇ ನಿಜವಾದ ರಕ್ಷಕನು ಎಂದು ಅಂಗೀಕರಿಸಿ ಕೊಂಡಿರುವುದಾದರೆ ಪ್ರತೀ ಭಾನುವಾರ ಸಭೆಗೆ ಹೋಗುತ್ತೀಯಾ ಮತ್ತು ಸಭೆಯಲ್ಲಿ ನಡೆಯುವ ಪ್ರತಿಯೊಂದು ಕೂಟಕ್ಕೆ ನೀನು ಹಾಜರಾಗುವಿ. ಮತ್ತು ಗೌರವಿಸುತ್ತೀಯ. ಆಗಲೇ ನಿನಗೆ ಕೊಡಲ್ಪಟ್ಟಿರುವ ರಕ್ಷಣೆಯನ್ನು ನೀನು ಕಡೆಯವರೆಗೂ ಉಳಿಸಿಕೊಳ್ಳಲು ಸಾಧ್ಯ.

“ಕ್ರಿಸ್ತ ನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ. ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ. ಏನು, ಯೇಸುಕ್ರಿಸ್ತನು Cococs 58 cocoನಿಮ್ಮಲ್ಲಿದ್ದಾನೆಂಬದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವದಿಲ್ಲವೋ? ಆತನು ನಿಮ್ಮಲ್ಲಿಲ್ಲದಿದ್ದರೆ ನೀವು ಅಯೋಗ್ಯರೇ.”

(2 ಕೊರಿಂಥ 13:5).

ನೀನು ಇಂದು ಯಾವ ರೀತಿಯಲ್ಲಿ ಜೀವಿಸುತ್ತಿರುವಿ ನಿನ್ನ ಪರಿಸ್ಥಿತಿ ಈಗ ಹೇಗಿದೆ ಎಂದು ಸ್ವಲ್ಪ ಗ್ರಹಿಸಿಕೊಂಡು ಮುಂದೆ ಸರಿಯಾದ ಮಾರ್ಗದಲ್ಲಿ ಹೆಜ್ಜೆ ಇಡುವುದಕ್ಕೆ ಸಿದ್ಧವಾಗು, ಯೇಸುವಿನ ಸಾರುಪ್ಯ ನಿನ್ನಲ್ಲಿ ಬರಬೇಕು. ಈ ಹೊತ್ತು ಕರ್ತನ ವಾಕ್ಯಕ್ಕೆ ಕಿವಿಗೊಟ್ಟು ನಿನಗೆ 'ಯಾವುದು ಬೇಕು' ನೀನೇ ತೀರ್ಮಾನಿಸಿಕೋ. ಕ್ರಿಸ್ತನ ಸ್ವಾರುಪ್ಯ ನಿನಗೆ ಬೇಕು ಎಂದು ನೀನು ತೀರ್ಮಾನಿಸುವುದಾದರೆ ನಿನ್ನ ಆತ್ಮೀಯ ಪೋಷಕರನ್ನು ಗೌರವಿಸು. ನಿನ್ನ ಸಭೆಯಲ್ಲಿ ನಡೆಯುವ ಪ್ರತಿಯೊಂದು ಕೂಟಕ್ಕೂ ಹಾಜರಾಗು.

“ಆಜ್ಞೆಯೇ ದೀಪ, ಉಪದೇಶವೇ ಬೆಳಕು. ಶಿಕ್ಷಣಪೂರ್ವಕವಾದ ಬೋಧನೆಯೇ ಜೀವದ ಮಾರ್ಗ". (ಜ್ಞಾನೋಕ್ತಿ 6:23)

**ಯೇಸು ಕ್ರಿಸ್ತನ ಮೇಲೆ ಭರವಸೆಯಿಡು**

ನಂಬಿಕೆಯಿಲ್ಲದೇ ದೇವರಿಂದ ಏನನ್ನೂ ಹೊಂದಿಕೊಳ್ಳಲು ಸಾಧ್ಯವಿಲ್ಲ. ಮತ್ತೇ ಮೆಚ್ಚಿಸಲು ಸಹಾ ಅಸಾಧ್ಯವಾಗುತ್ತದೆ. ಸತ್ಯವೇದದಲ್ಲಿ ಹೇಳಿದ ಪ್ರಕಾರಪೇತ್ರನು ದೋಣಿಯನ್ನು ಬಿಟ್ಟು ನೀರಿನ ಮೇಲೆ ನಡೆಯುವಾಗ ಪೇತ್ರನು ಕರ್ತನ ಮಾತಿನ ಆಧಾರದ ಮೇಲೆ ನಡೆಯುತ್ತಿದ್ದೇನೆ ಎಂದು ಮರತು ನೀರಿನ ಮೇಲೆ ನಡೆಯುತ್ತಿದ್ದೇನೆ ಎಂದು ಆಲೋಚಿಸುತ್ತಿರಬೇಕಾದರೆ ಅವನು ಮುಳಿಗಿ ಹೋದನು. ಆದರೆ ಕರ್ತನನ್ನು ಪೇತ್ರನು ಸಹಾಯಕ್ಕಾಗಿ ಕರೆಯುವಾಗ ಯೇಸು ಕ್ರಿಸ್ತನು ಎಷ್ಟೋ ಕೃಪೆಯನ್ನು ತೋರಿಸಿ ಅವನು ಮುಳುಗಿ ಹೋಗದಂತೆ ಅವನ ಕೈ ಹಿಡಿದು ಮೇಲೆತ್ತಿದನು.

ಇಂದು ನಿನ್ನ ನಂಬಿಕೆ ಯಾರ ಮೇಲೆ ಇದೆ ನಿನ್ನ ಆಧಾರಗಳಾದ ಔಷದಿ, ಸಂಬಳ ಮನುಷ್ಯರ ಸಹಾಯದ ಹಸ್ತಗಳ ಮೇಲೆ ಮಾತ್ರ ಯಾವಾಗಲೂ ನೀನು ಆಧಾರಮಾಡಿಕೊಂಡು ಅದರ ಮೇಲೆ ಭರವಸೆ ಇಟ್ಟುಕೊಂಡು ಹೋಗುತ್ತಿದ್ದೀಯಾ! ಅಥವಾ ಯೇಸುಕ್ರಿಸ್ತನೇ ನನಗೆ ಅವಶ್ಯವಿರುವ ಎಲ್ಲಾ ಸಹಾಯವನ್ನು ಅನೇಕ ಮಾರ್ಗದಲ್ಲಿ ಬಂದು ಮಾಡುತ್ತಿದ್ದಾರೆ ಎಂದು ನಂಬುತ್ತಿದ್ದೀಯೊ? ಚಿಂತಿಸು, ಕರ್ತನಿಗೆ ನಿನ್ನ ಮೇಲೆ ಕಾಳಜಿ ಇರುವುದರಿಂದ ನಿನಗೆ ಸಹಾಯ ಮಾಡುತ್ತಿದ್ದಾನೆ ಎಂದು ಗ್ರಹಿಸಿಕೋ.

ಕರ್ತನ ಮೇಲೆ ನಿನ್ನ ಭರವಸೆ ಇರಬೇಕು ಇಲ್ಲದಿದ್ದರೆ ನಿನಗೆ ಬೇಸರಿಕೆಯೇ ಉಳಿಯುತ್ತದೆ. ನಿನ್ನ ಇಷ್ಟದ ಪ್ರಕಾರ ಎಷ್ಟೇ ಪ್ರಯಾಸಪಟ್ಟು ಮುಂದೆ ಹೋಗುವುದಾದರೂ ನಿನ್ನ ಸ್ಥಿತಿ ಬದಲಾಗಲು ಸಾಧ್ಯವೇ ಇಲ್ಲ. ಮನುಷ್ಯರ ಮೇಲೆ ನಿನಗಿರುವ ಭರವಸೆಯನ್ನು ಬದಲಾಯಿಸಿಕೋ ಕರ್ತನ ಮೇಲೆ ಪೂರ್ತಿಯಾಗಿ ಭರವಸೆವಿಡು.

ನೀನು ಮನುಷ್ಯನ ಮಾತಿನ ಮೇಲೆ ನಂಬಿಕೆಯಿಟ್ಟು ಅವರು ಹೇಳಿದ ರೀತಿ ನಡೆದುಕೊಳ್ಳುತ್ತಿರುವೆಯಾ? ಇದು ಸುಲಭ ಆದರೆ ಯೇಸುಕ್ರಿಸ್ತನ ಮಾತಿನ ಪ್ರಕಾರ ನಡೆಯುವುದು ಬಹಳ ಕಷ್ಟ. ಮನುಷ್ಯರ ಮಾತು ಕೇಳದಿದ್ದರೆ ಹಣ ಸಿಗುವುದಿಲ್ಲ, ಮನೆ ಇರಲ್ಲ, ಕೆಲಸ ಸಿಗೋದಿಲ್ಲ; ಅವರ ಮಾತನ್ನು ಕೇಳಿದರೆ ಎಲ್ಲಾ ಸಿಗುತ್ತೆ ಎಂದು ನೆವ ಹೇಳಿಕೊಂಡು ಮನುಷ್ಯನ ಆಶ್ರಯ ಬಯಸುವುದಾದರೆ ದೇವರ ಆಶ್ರಯ ಸಿಗುವುದಿಲ್ಲ. "ಮನುಷ್ಯನನ್ನು ಆಶ್ರಯಿಸಿಕೊಳ್ಳುವುದಕ್ಕಿಂತ ದೇವರನ್ನು ಆಶ್ರಯಿಸಿಕೊಳ್ಳುವುದು ಎಷ್ಟೋ ಒಳ್ಳೆಯದು".

"ಮನುಷ್ಯನಾಗಿ ಬಂದ ಯೇಸು ಕ್ರಿಸ್ತನನ್ನು ಒಪ್ಪಿಕೊಳ್ಳುವ ಆತ್ಮವುದೇವರಿಂದ ಪ್ರೇರಿತವಾದದ್ದು. ಯೇಸುಕ್ರಿಸ್ತನನ್ನು ಒಪ್ಪದೆ ಇರುವ ಆತ್ಮವುದೇವರಿಂದ ಪ್ರೇರಿತವಾದದ್ದಲ್ಲ. ಅದು ಕ್ರಿಸ್ತ ವಿರೋಧಿಯ ಆತ್ಮವಾಗಿದೆ. ಅದು ಬರುವದೆಂಬದನ್ನು ನೀವು ಕೇಳಿದ್ದೀರಲ್ಲಾ; ಈಗಲೂ ಲೋಕದಲ್ಲಿ ಅದೆ. (ಯೋಹಾ 4:2,3) ಕರ್ತನು ನಿನ್ನನ್ನು ರಕ್ಷಿಸುವನು ಬಿಡುಗಡೆ ಮಾಡುವನು ಎಂದು ನಂಬದಿದ್ದರೆ ನಿನ್ನ ಆತ್ಮ ಇಂದು ಎಂತಹ ಆತ್ಮವಾಗಿದೆ. ನೀನೇ ಚಿಂತಿಸಿ ನೋಡು. ನಿನ್ನ ಮನಸ್ಸಿನಲ್ಲಿ ಯೇಸುವನ್ನು ಅಂಗೀಕಾರ ಮಾಡಿಕೊಂಡು ನಂಬಿಕೆಯಿಂದ ಹೆಜ್ಜೆ ಇಡುವುದಾದರೆ ನಿನ್ನ ಬಾಳೇ ಬಂಗಾರವಾಗಿ ಮಾರ್ಪಡುತ್ತದೆ.

ನಿನ್ನ ನಂಬಿಕೆ ಕರ್ತನಲ್ಲಿ ಇರುವುದಾದರೆ ರಕ್ಷಣೆಯನ್ನು ಕಾದುಕೊಳ್ಳಲು ನಿನಗೆ ಸಾಧ್ಯವಾಗುತ್ತದೆ. ಮನುಷ್ಯರ ಮೇಲೆ ನಿನ್ನ ನಂಬಿಕೆ ಇರುವುದಾದರೆ ನಿನಗಿರುವ ರಕ್ಷಣೆಯನ್ನು ಕಾದುಕೊಳ್ಳಲು ನಿನಗೆ ಸಾಧ್ಯವಿಲ್ಲ. ನಿನಗೆ ಇಂದು ಯಾವುದು ಬೇಕು?' ಯಾವುದು ಮುಖ್ಯ? ಮನುಷ್ಯನ ಮೇಲೆ ಇಡುವ ನಂಬಿಕೆಯೋ? ಕರ್ತನ ಮೇಲೆ ಇಡುವ ನಂಬಿಕೆಯೋ?

# 8. ನೀನು ಇದನ್ನು ತಿಳಿದಿಕೋ

"ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿನಾನು ಈಗ ನಿನಗೆ ಬೋಧಿಸುವ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತಸ್ಥಿತಿಗೆ ತರುವನು. ನಿಮ್ಮ ದೇವರಾದ ಯೆಹೋವನ ಮಾತಿಗೆ ಕಿವಿಗೊಟ್ಟು ನಡೆದರೆ ಈ ಶುಭಗಳೆಲ್ಲಾ ನಿಮಗೆ ಪ್ರಾಪ್ತವಾಗುವುದು." (ಧರ್ಮೋ 28:1)

**ಅಂತರಂಗವನ್ನು ಶೋಧಿಸಿ ನೋಡುವ ದೇವರು**

ಇಷ್ಟು ಹೊತ್ತು ನೀನು ಕರ್ತನ ಮಾತನ್ನು ಶ್ರದ್ಧೆಯಿಂದ ತಿಳಿದುಕೊಂಡಿದ್ದೀಯೋ ಇಲ್ಲವೋ ಎಂದು ಕರ್ತನಾದ ಯೇಸುಕ್ರಿಸ್ತನು ನಿನ್ನ ಅಂತರಂಗವನ್ನು ಪರಿಶೋಧನೆ ಮಾಡಿ ತಿಳಿದುಕೊಳ್ಳುತ್ತಾನೆ.

"ಮನುಷ್ಯರ ಹೃದಯವನ್ನೂ ಅಂತರಿಂದ್ರಿಯವನ್ನೂ ಪರಿಶೋಧಿಸುವ ನೀತಿಸ್ವರೂಪನಾದ ದೇವರೇ, ದುಷ್ಟರ ಕೆಟ್ಟತನವು ಇಲ್ಲದೆ ಹೋಗುವಂತೆ ಮಾಡು; ನೀತಿವಂತರನ್ನು ದೃಢಪಡಿಸು. ನನ್ನನ್ನು ರಕ್ಷಿಸುವ ಗುರಾಣಿಯು ದೇವರೇ; ಆತನು ಯಥಾರ್ಥರನ್ನು ಕಾಪಾಡುವನು. (ಕೀರ್ತ 7:9,10)ರ ಪ್ರಕಾರ ನಿನ್ನನ್ನೇ ಕರ್ತನಿಗೆ ಒಪ್ಪಿಸಿಕೊಟ್ಟು ಪ್ರಾರ್ಥಿಸು. ನಿನಗಾಗಿ ಇಟ್ಟಿರುವ ಆಶೀರ್ವಾದಗಳನ್ನು ಪಡೆದುಕೊಂಡು ಸಮಾಧಾನದಿಂದ ಆತನ ಮಾರ್ಗದಲ್ಲಿ ನಡೆದು ಒಳ್ಳೇ ಸಾಕ್ಷಿಯಾಗಿ ಜೀವಿಸು.

ನಿನಗೆ ಪ್ರತಿಯೊಂದು ಅಧ್ಯಾಯದಲ್ಲಿ ಪ್ರಶ್ನೆಗಳನ್ನೇ ಕೇಳಲಾಗಿದೆ. ನಿನ್ನ ಆಯ್ಕೆಯನ್ನು ನೀನು ನಿನ್ನ ಸಭೆಗೋ ನಿನ್ನನ್ನು ಪ್ರೀತಿಸುವ ವ್ಯಕ್ತಿಗೋ ತಿಳಿಸಬೇಕಾದ ಅವಶ್ಯಕತೆ ಇಲ್ಲ. ನಿನಗೆ 'ಯಾವುದು ಬೇಕು' ಎಂದು ನಿನ್ನ ಮನಸ್ಸಿನಲ್ಲಿ ನೀನು ತೀರ್ಮಾನಾ ಮಾಡಿದರೆ ಸಾಕು ಕರ್ತನು ನಿನ್ನ ತೀರ್ಮಾನದ ಮೇಲೆ ಕಾರ್ಯವನ್ನು ನಡೆಸುತ್ತಾನೆ. ಕಾಕೆಂದರೆ ನಮ್ಮ ಕರ್ತನಾದ ಯೇಸುಕ್ರಿಸ್ತನು ಅಂತರಂಗವನ್ನು ಪರಿಶೋಧಿಸುವವನಾಗಿದ್ದಾನೆ. "ಪಾತಾಳವೂ ನಾಶಲೋಕವೂ ಯೆಹೋವನಿಗೆ ಗೋಚರವಾಗಿರುವಲ್ಲಿ ನರವಂಶದವರ ಹೃದಯಗಳು ಮತ್ತೂ ಸ್ಪಷ್ಟ" (ಜ್ಞಾನೋಕ್ತಿ 15:11), ಮನುಷ್ಯನು ಮುಖ ನೋಡುತ್ತಾನೆ ಕರ್ತನಾದರೋ ಹೃದಯವನ್ನು ನೋಡುತ್ತಾನೆ ಆದುದರಿಂದ ನಿನ್ನ ಆಯ್ಕೆ ನಿನ್ನ ಹೃದಯದಲ್ಲಿ ಬರುವುದಾದರೆ ಸಾಕು.

ನೀನು ತೀರ್ಮಾನ ಮಾಡಿದ ಮೇಲೆಯೇ ದೇವರು ನಿನ್ನ ಜೀವನದಲ್ಲಿ ಕಾರ್ಯಮಾಡುತ್ತಾರೆಂದು ಅರ್ಥಮಾಡಿಕೋ "ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಈಗ ನಿನಗೆ ಬೋಧಿಸುವ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತಸ್ಥಿತಿಗೆ ತರುವನು. ನಿಮ್ಮ ದೇವರಾದ ಯೆಹೋವನ ಮಾತಿಗೆ ಕಿವಿಗೊಟ್ಟು ನಡೆದರೆ ಈ ಶುಭಗಳೆಲ್ಲಾ ನಿಮಗೆ ಪ್ರಾಪ್ತವಾಗುವುದು." (ಧರ್ಮೋ 28:1)

ನೀನು ಪ್ರತಿ ಹೆಜ್ಜೆಯಲ್ಲಿ ಸಫಲತೆಯನ್ನು ಹೊಂದಿಕೊಂಡು ನೀನು ಜೀವಿಸಬೇಕಾದರೆ ಆತನ ಮಾತನ್ನು ಶ್ರದ್ಧೆಯಿಂದ ಕೇಳಿ ಸಮೃದ್ಧಿಯನ್ನು ಹೊಂದಿಕೋ.

ಈ ಭೂಮಿಯಲ್ಲಿ ನೀನು ಇನ್ನು ಸ್ವಲ್ಪ ಕಾಲ ಮಾತ್ರ ಜೀವಿಸುವೆ ಇದನ್ನು ಮರೆತು ಜೀವಿಸಬೇಡ. ಬಹು ಬೇಗನೇ ನೀನು ಯೇಸುಕ್ರಿಸ್ತನ ನ್ಯಾಯಾಸನದ ಮುಂದೆ ನಿಲ್ಲುವ ದಿನವೂ ಬಂದೇ ಬರುತ್ತದೆ. ಅಂದು ನಿನಗೆ ಸ್ವರ್ಗ ಬೇಕೋ? ಅಥವಾ ನರಕ ಬೇಕೋ? ಜ್ಞಾನ ಬೇಕೋ? ಅಜ್ಞಾನವೇ ಸಾಕೋ? ಬೆಳಕು ಬೇಕೋ? ಕತ್ತಲೇ ಬೇಕೋ? ಮನಂಷಂಚಿ ಬೇಕೋ? ದೇವರು ಬೇಕೋ? ಆಶೀರ್ವಾದ ಬೇಕೋ? ಶಾಪ ಬೇಕೋ? ನಿನಗೆ 'ಯಾವುದು ಬೇಕು?' ಎಂದು ನಿನ್ನನ್ನು ಕುಳ್ಳಿರಿಸಿಕೊಂಡು ಯೇಸುಕ್ರಿಸ್ತನು ಯಾವ ಕಾರಣಕ್ಕೂ ಕೇಳುವುದಿಲ್ಲ. ಯಾಕೆಂದರೆ ಈ ಪ್ರಶ್ನೆಗಳನ್ನು ನಿನಗೆ ಭೂಮಿಯಲ್ಲಿ ಮಾತ್ರ ನಿನಗೆ ಕೇಳಲಾಗುತ್ತದೆ ಹೊರತು ಪರಲೋಕದಲ್ಲಿ ಯೇಸುಕ್ರಿಸ್ತನ ನ್ಯಾಯಾಸನದ ಮುಂದೆ ಖಂಡಿತವಾಗಿಯೂ ಕೇಳುವುದಿಲ್ಲ. ನೀನು ಮಾಡಿರುವ ಕೃತ್ಯಗಳಿಗೆ ಪ್ರತಿಫಲವನ್ನು ಕೊಡುವುದಕ್ಕೆ ಕರ್ತನು ತಾನೇ ನಿನಗೆ ನ್ಯಾಯತೀರಿಸುವನು. ಎಚ್ಚರ! ನೀನು ಇದನ್ನು ತಿಳಿದುಕೊಳ್ಳಲೇಬೇಕು."

ದೇವರನ್ನು ಯಾರು ಎಂದು ನೋಡಿಲ್ಲ: ನೀನು ನಿನ್ನ ಕುಟುಂಬ ದಲ್ಲಿರುವ ವ್ಯಕ್ತಿಗಳನ್ನು ಪ್ರೀತಿಮಾಡಿಕೊಂಡು ಅವರನ್ನು ಗೌರವಿಸುತ್ತಾ ತಾಳೆ ಯಿಂದ ನಡೆದುಕೊಂಡು ಕರ್ತನಲ್ಲಿ ಪ್ರಾರ್ಥಿಸುತ್ತಾ ಮುಂದೆ ಹೋಗುವಾಗ ಆತನು ನಿನ್ನಲ್ಲಿ ನೆಲೆಗೊಳ್ಳುತ್ತಾನೆ. ಯೇಸುಕ್ರಿಸ್ತನು ನಿನ್ನನ್ನು ಪ್ರೀತಿಸುವ ರೀತಿಯಲ್ಲೇ ಮತ್ತೊಬ್ಬರನ್ನು ನೀನು ಪ್ರೀತಿಸಬೇಕು ಆ ಪ್ರೀತಿಯು ಸಿದ್ಧಿಗೆ ಬರುತ್ತದೆ. ಯಾಕೆಂದರೆ ದೇವರು ನಿನಗೆ ತನ್ನ ಆತ್ಮದಲ್ಲಿ ಪಾಲನ್ನು ಮೆಧರಿಯಲ್‌ಲೆ ನೆಲೆಗೊಂಡಿದ್ದೇವೆಂತಲೂ ಆತನು ನಿನ್ನಲ್ಲಿ ನೆಲೆಗೊಂಡಿದ್ದಾನೆಂತಲೂ ತಿಳಿದುಕೊಳ್ಳಲು ಸಾಧ್ಯವಾಗುತ್ತದ. ಯೇಸುವಿನ ಪ್ರೀತಿಯನ್ನು ಮತ್ತೊಬ್ಬರಿಗೆ ಹೇಳಲು ನೀನು ಒಳ್ಳೇ ಸಾಕ್ಷಿಯಾಗಿ ನಿಲ್ಲುವಿಯಾದರೆ! ನಿನ್ನನ್ನು ನೋಡುವವರು ಆಶ್ಚರ್ಯಪಡುವರು. ನಿನ್ನ ಹೊಸ-ಹೊಸ ವ್ಯತ್ಯಾಸಗಳನ್ನು ಕಾಣುತ್ತಾರೆ.

ಭೂಮಿಯಲ್ಲಿಯೇ ಮಾರ್ಪಾಟನ್ನು ಹೊಂದಿಕೊಂಡು ಒಳ್ಳೇ ಆಯ್ಕೆಯೊಂದಿಗೆ ಮುಂದೆ ಸಾಗಬೇಕೆಂದು ನಿಮ್ಮ ಬಳಿಯಲ್ಲಿ ಕೇಳಿಕೊಳ್ಳುತ್ತೇನೆ.

"ನಿಜವಾಗಿ ಬೇಗ ಬರುತ್ತೇನೆ ಎಂದು ಹೇಳುತ್ತಾನೆ. ಹಾಗೆಯೇ ಆಗಲಿ; ಕರ್ತನಾದ ಯೇಸುವೇ ಬಾ."

"ಕರ್ತನಾದ ಯೇಸುವಿನ ಕೃಪೆಯು ಎಲ್ಲರೊಂದಿಗೆ ಇರಲಿ." (ಪ್ರಕಟಣೆ22:20,21)

ಕರ್ತನಾದ ಯೇಸುಕ್ರಿಸ್ತನು ಬರುವಾಗ ನೀನು ಮೇಲೆತ್ತಲ್ಪಡಬೇಕು. ಕರ್ತನ ಬರೋಣವನ್ನು ಎದುರು ನೋಡುವ ವ್ಯಕ್ತಿಯಾಗಿರು.

**ಕರ್ತನು ನಿಮ್ಮನ್ನು ಆಶೀರ್ವದಿಸಲಿ. ಆಮೆನ್**